ಭಾನುವಾರ, ಮಾರ್ಚ್ 13, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ರಾಧೆ-ಕೃಷ್ಣ
ಹೋಳಿ ಹಬ್ಬದ ಪೂರ್ವಭಾವಿಯಾಗಿ ರಾಜಸ್ಥಾನದ ಅಜ್ಮೀರ್‌ನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕಲಾವಿದರು ರಾಧೆ ಹಾಗೂ ಕೃಷ್ಣನ ವೇಷ ತೊಟ್ಟು ಸಂಭ್ರಮಿಸಿದರು

ಚಿಕ್ಕಬಳ್ಳಾಪುರ: ‘ಕಂದಾಯ ದಾಖಲೆ ಮನೆಬಾಗಿಲಿಗೆ ಯೋಜನೆ’ಗೆ ಮುಖ್ಯಮಂತ್ರಿ ಬೊಮ್ಮಾಯಿ ಚಾಲನೆ

‘ಮುಲಾಜಿಲ್ಲದೇ ಮಾಫಿಯಾ ಬಗ್ಗು ಬಡಿಯುತ್ತೇವೆ’

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ‘ಗಣಿ, ಶಿಕ್ಷಣ, ಅಬಕಾರಿ, ಗುತ್ತಿಗೆ ಹಾಗೂ ಭೂ ಮಾಫಿಯಾಗಳನ್ನೆಲ್ಲ ಯಾವ ಮುಲಾಜಿಲ್ಲದೆ ಬಗ್ಗುಬಡಿಯುತ್ತೇವೆ. ನಮ್ಮ ಸರ್ಕಾರ ಯಾರ ಮುಲಾಜಿನಲ್ಲಿಯೂ ಇಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ತಾಲ್ಲೂಕಿನ ಗುಂಗೀರ್ಲಹಳ್ಳಿಯಲ್ಲಿ ಶನಿವಾರ ‘ಕಂದಾಯ ದಾಖಲೆ ಮನೆಬಾಗಿಲಿಗೆ ಯೋಜನೆ’ಗೆ ಚಾಲನೆ ನೀಡಿದರು. ‘ಈ ಹಿಂದಿನ ಸರ್ಕಾರಗಳು ಮಾಫಿಯಾ ಮುಲಾಜಿನಲ್ಲಿ ಇದ್ದ ಕಾರಣ ಅವರನ್ನು ಮುಟ್ಟುತ್ತಿರಲಿಲ್ಲ. ಆದರೆ, ಭಾಷಣ ಮಾತ್ರ ಬಡವರ ಪರವಾಗಿದ್ದವು’ ಎಂದರು.

‘ಈ ಹಿಂದಿನ ಸರ್ಕಾರಗಳು ‘ಗರೀಬಿ ಹಟಾವೋ’ ಎಂದು ಹೇಳಿದವು. ಆದರೆ ಏನನ್ನೂ ಮಾಡಲಿಲ್ಲ. ಪರಿಶಿಷ್ಟರು, ಹಿಂದುಳಿದವರು ಉದ್ಧಾರ ಮಾಡುತ್ತೇವೆ ಎಂದು 70 ವರ್ಷಗಳಿಂದ ಹೇಳಿದರು. ಅವರು ಉದ್ಧಾರವಾಗಿದ್ದರೆ ನಾವು ಈ ಕಾರ್ಯ ಮಾಡುವ ಅಗತ್ಯವಿರಲಿಲ್ಲ. ಬಡವರ ಹೆಸರಿನಲ್ಲಿ ಇಷ್ಟು ವರ್ಷ ರಾಜಕಾರಣ ನಡೆದಿದೆ. ‘ನಮ್ಮದು ಜನಸೇವೆಗಾಗಿ ರಾಜಕಾರಣ. ಅವರದ್ದು ಅಧಿಕಾರಕ್ಕಾಗಿ ರಾಜಕಾರಣ ಎಂದು ಕಾಂಗ್ರೆಸ್ ಪಕ್ಷದ ಹೆಸರು ಹೇಳದೆ ಟೀಕಿಸಿದರು.

‘ಮಾಸಾಶನ, ಜಮೀನಿನ ನಕ್ಷೆ ಹೀಗೆ ಕಂದಾಯ ಇಲಾಖೆಯ ದಾಖಲೆಗಳಿಗೆ ಅಲೆದಾಡುವವರು ಬಡವರೇ ಆಗಿರುತ್ತಾರೆ. ಬಡವರು ಹೀಗೆ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲು ‘ಕಂದಾಯ ದಾಖಲೆ ಮನೆಬಾಗಿಲಿಗೆ ಯೋಜನೆ’ ಜಾರಿಗೊಳಿಸಿದ್ದೇವೆ. ಸರ್ಕಾರವನ್ನೇ ಬಡವರ ಮನೆ ಬಾಗಿಲಿಗೆ ಕೊಂಡೊಯ್ಯಲಾಗುವುದು. ಇದೊಂದು ಕಂದಾಯ ಕ್ರಾಂತಿ’ ಎಂದು ಬೊಮ್ಮಾಯಿ ಬಣ್ಣಿಸಿದರು.

‘ರಾಜ್ಯದ ಎಲ್ಲ ಗ್ರಾಮಗಳಲ್ಲಿ ಈ ಯೋಜನೆಗೆ ಚಾಲನೆ ನೀಡಲಾಗಿದೆ. 55 ಲಕ್ಷ ರೈತರ ಮನೆಗಳಿಗೆ ತೆರಳಿ ಐದು ಕೋಟಿ ದಾಖಲೆ ನೀಡುತ್ತಿದ್ದೇವೆ. ಈ ಜನಪರ ಕಾರ್ಯಕ್ರಮ ನಿಮ್ಮ ಮನೆಗೆ ಮುಟ್ಟಿದಾಗ ಇಂತಹ ಕಾರ್ಯಕ್ರಮ ಕೊಟ್ಟ ಸರ್ಕಾರಕ್ಕೆ ಒಳ್ಳೆಯದಾಗಲಿ, ಜನ ಬೆಂಬಲ ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸಿ’ ಎಂದು ಮನವಿ ಮಾಡಿದರು.

ಸಚಿವರಾದ ಆರ್.ಅಶೋಕ, ಡಾ.ಕೆ. ಸುಧಾಕರ್, ಎಂ.ಟಿ.ಬಿ.ನಾಗರಾಜು ವೇದಿಕೆಯಲ್ಲಿದ್ದರು.



ಚಿಕ್ಕಬಳ್ಳಾಪುರ ತಾಲ್ಲೂಕಿನ ಗುಂಗೀರ್ಲಹಳ್ಳಿಯಲ್ಲಿ ‘ಕಂದಾಯ ದಾಖಲೆ ಮನೆಬಾಗಿಲಿಗೆ ಯೋಜನೆ’ಗೆ ಚಾಲನೆ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಳ್ಳಿಕಟ್ಟೆಯಲ್ಲಿ ಜನರ ಸಮಸ್ಯೆ ಆಲಿಸಿದರು. ಸಚಿವರಾದ ಎಂ.ಟಿ.ಬಿ.ನಾಗರಾಜು, ಆರ್.ಅಶೋಕ, ಡಾ.ಕೆ.ಸುಧಾಕರ್ ಜಿಲ್ಲಾಧಿಕಾರಿ ಆರ್.ಲತಾ ಇದ್ದರು —ಪ್ರಜಾವಾಣಿ ಚಿತ್ರ

ಹಳ್ಳಿಕಟ್ಟೆಯಲ್ಲಿ ಸಮಸ್ಯೆ ಆಲಿಸಿದ ಸಿ.ಎಂ

ಗುಂಗೀರ್ಲಹಳ್ಳಿಯಲ್ಲಿ ಗ್ರಾಮದ ಆರಂಭದಿಂದ ಸಪ್ಪಲಮ್ಮ, ದೊಡ್ಡಮ್ಮ ದೇವಿ ದೇಗುಲದವರೆಗೆ ಮುಖ್ಯಮಂತ್ರಿ ಅವರನ್ನು ಎತ್ತಿನಗಾಡಿಯಲ್ಲಿ ಕರೆತರಲಾಯಿತು.

ದೇಗುಲದ ಆವರಣದಲ್ಲಿ ಸಸಿ ನೆಟ್ಟ ನಂತರ ಗ್ರಾಮದ 12 ಮನೆಗಳಿಗೆ ತೆರಳಿ ಕಂದಾಯ ಇಲಾಖೆಗೆ ಸಂಬಂಧಿಸಿದ ದಾಖಲೆಗಳನ್ನು ವಿತರಿಸಿದರು. ಆ ಮೂಲಕ ಅಧಿಕೃತವಾಗಿ ಯೋಜನೆಗೆ ಚಾಲನೆ ನೀಡಲಾಯಿತು. ನಂತರ ಗ್ರಾಮದ ಹಳ್ಳಿಕಟ್ಟೆಯಲ್ಲಿ ಕುಳಿತು ಜನರ ಸಮಸ್ಯೆ ಆಲಿಸಿದರು.

3 ಸಾವಿರ ಭೂ ಮಾಪಕರ ನೇಮಕ

ಡೀಮ್ಡ್ ಅರಣ್ಯ ವ್ಯಾಪ್ತಿಯಲ್ಲಿರುವ ಕಂದಾಯ ಭೂಮಿಯನ್ನು ಇಲಾಖೆ ವಾಪಸ್ ಪಡೆಯುವ ಕೆಲಸ ಆಗುತ್ತಿದೆ. ಜಮೀನು ಸರ್ವೆಗೆ ಸಂಬಂಧಿಸಿ ಎರಡು ಲಕ್ಷ ಅರ್ಜಿ ಬಾಕಿ ಇವೆ. ಅವುಗಳ ವಿಲೇವಾರಿಗೆ 3 ಸಾವಿರ ಭೂ ಮಾಪಕರನ್ನು ನೇಮಿಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಮನೆ ನಿರ್ಮಾಣಕ್ಕೆ ಭೂ ಪರಿವರ್ತನೆ ಮಾಡಲು ಒಂದೆರಡು ತಿಂಗಳಾಗುತ್ತಿದೆ. ಆದರೆ ಮುಂದಿನ ದಿನಗಳಲ್ಲಿ ಕೇವಲ ಎರಡೇ ದಿನಗಳಲ್ಲಿ ಭೂ ಪರಿವರ್ತನೆ ಮಾಡಿಕೊಡುವ ವ್ಯವಸ್ಥೆ ಜಾರಿಗೊಳಿಸುತ್ತೇವೆ ಎಂದರು.

ಸುದ್ದಿ 2 ನಿಮಿಷ

‘ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ಪೂರ್ವ ಪ್ರಾಥಮಿಕ ಶಿಕ್ಷಣ’

ಕಾರವಾರ: ‘ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಡಿ, ಮುಂದಿನ ಶೈಕ್ಷಣಿಕ ವರ್ಷದಿಂದ ರಾಜ್ಯದಾದ್ಯಂತ 20 ಸಾವಿರ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ (ನರ್ಸರಿಯಿಂದ ಎರಡನೇ ತರಗತಿ) ಶಿಕ್ಷಣ ನೀಡಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ ತಿಳಿಸಿದ್ದಾರೆ.

ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಲಬುರಗಿಯಲ್ಲಿ ಶೀಘ್ರವೇ ಚಾಲನೆ ನೀಡುವರು. ಜನಸಾಮಾನ್ಯರ ಮಕ್ಕಳಿಗೆ ಯಾವುದೇ ಹೊರೆಯಿಲ್ಲದ ಶಿಕ್ಷಣ ನೀಡಬೇಕು ಎಂಬುದು ಇದರ ಉದ್ದೇಶ’ ಎಂದು ಹೇಳಿದರು.

‘ರಾಜ್ಯದಲ್ಲಿ ಎನ್‌ಇಪಿ ಜಾರಿಗೆ ನಿವೃತ್ತ ಐಎಎಸ್ ಅಧಿಕಾರಿ ಮದನ್ ಗೋಪಾಲ್ ನೇತೃತ್ವದಲ್ಲಿ 26 ಸಮಿತಿಗಳನ್ನು ರಚಿಸಲಾಗಿದೆ. ವಿವಿಧ ಕ್ಷೇತ್ರಗಳ ತಜ್ಞರ ಅಭಿಪ್ರಾಯ ಪಡೆಯಲಾಗಿದೆ. ಪ್ರತಿ ಜಿಲ್ಲೆಗೆ ಬೇಕಾದ ಕೌಶಲವನ್ನು ಒಳಗೊಂಡ ಪಠ್ಯಕ್ರಮವನ್ನು ಜಾರಿಗೊಳಿಸಲು ಸಿದ್ಧತೆ ನಡೆದಿದೆ’ ಎಂದು ವಿವರಿಸಿದರು.



ಸಭಾಪತಿ ಹೊರಟ್ಟಿ ವಿರುದ್ಧ ಪ್ರಕರಣ ದಾಖಲಿಸಿದ್ದ ಇನ್‌ಸ್ಪೆಕ್ಟರ್ ಅಮಾನತು

ಧಾರವಾಡ: ಸರ್ವೋದಯ ಶಿಕ್ಷಣ ಸಂಸ್ಥೆ ಪ್ರಕರಣದ ಸಂಬಂಧ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ವಿರುದ್ಧ ದೌರ್ಜನ್ಯ ಪ್ರಕರಣ ದಾಖಲಿಸಿದ್ದ ಗ್ರಾಮೀಣ ಠಾಣೆ ಇನ್‌ಸ್ಪೆಕ್ಟರ್ ಶ್ರೀಧರ ಸುತಾರೆ ಅವರನ್ನು ಅಮಾನತು ಮಾಡಿ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಆದೇಶಿಸಿದ್ದಾರೆ.

ತಾಲ್ಲೂಕಿನ ಸರ್ವೋದಯ ಶಿಕ್ಷಣ ಟ್ರಸ್ಟ್ ಕುರಿತು ಶಾಲೆ ಸಿಬ್ಬಂದಿ ಹಾಗೂ ವಾಲ್ಮೀಕಿ ಸಮಾಜದ ಮುಖಂಡರ ನಡುವೆ ಜ.25ರಂದು ಗಲಾಟೆ ನಡೆದಿತ್ತು. ಈ ಪ್ರಕರಣದಲ್ಲಿ ಹೊರಟ್ಟಿ ಅವರನ್ನು 5ನೇ ಆರೋಪಿಯಾಗಿ ಎಫ್‌ಐಆರ್ ದಾಖಲಿಸಲಾಗಿತ್ತು. ಸಭಾಪತಿ ಅಂದು ಬೆಂಗಳೂರಿನಲ್ಲಿದ್ದು, ಪ್ರಕರಣ ದಾಖಲಿಸಿದ್ದು, ವಿವಾದಕ್ಕೆ ಕಾರಣವಾಗಿತ್ತು.

ಈ ವಿಷಯ ವಿಧಾನ ಪರಿಷತ್ತಿನಲ್ಲೂ ಗಂಭೀರ ಚರ್ಚೆಗೆ ಆಸ್ಪದವಾಗಿತ್ತು. ಸೂಕ್ತ ಕ್ರಮ ಕೈಗೊಳ್ಳುವುದಾಗಿ ಗೃಹ ಸಚಿವ ಆರಗ ಜ್ಞಾನೇಂದ್ರ ಭರವಸೆ ನೀಡಿದ್ದರು.

‘ದೂರಿನಲ್ಲಿ ಹೊರಟ್ಟಿ ಅವರ ಹೆಸರು ಇಲ್ಲದಿದ್ದರೂ, ಪ್ರಥಮಮಾಹಿತಿ ವರದಿಯಲ್ಲಿ ಅವರು ಹೆಸರು ದಾಖಲಿಸಿರುವುದು ಕರ್ತವ್ಯ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನದ ವರ್ತನೆ’ ಎಂದು ಪೊಲೀಸ್ ಮಹಾನಿರ್ದೇಶಕರು ತಿಳಿಸಿದ್ದಾರೆ. ಈ ಆದೇಶಕ್ಕೂ ಒಂದು ದಿನ ಮೊದಲು ಇನ್‌ಸ್ಪೆಕ್ಟರ್ ಅವರನ್ನು ಗುಪ್ತಚರ ಇಲಾಖೆಗೆ ವರ್ಗಾಯಿಸಲಾಗಿತ್ತು.

ರಾಜ್ಯದಲ್ಲಿ ಹೆಚ್ಚುತ್ತಿರುವ ಬಿಸಿಲ ಧಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಸಿಗೆ ಋತು ಆರಂಭದಲ್ಲೇ ರಾಜ್ಯದಾದ್ಯಂತ ಬಿಸಿಲ ಧಗೆ ದಿನದಿಂದ ದಿನಕ್ಕೆ ಏರತೊಡಗಿದೆ. ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ತಾಪಮಾನ 30 ಡಿಗ್ರಿ ಸೆಲ್ಸಿಯಸ್ ಮೀರಿದ್ದು, ರಾಯಚೂರಿನಲ್ಲಿ ಶನಿವಾರ 36.6 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.

ಮಾರ್ಚ್‌ನಿಂದ ಮೇ ತಿಂಗಳವರೆಗೆ ಬೇಸಿಗೆ ಋತು ಇರುತ್ತದೆ. ಆದರೆ, ಆರಂಭದ ಎರಡು ವಾರಗಳಲ್ಲಿಯೇ ಜನ ಬಿಸಿಲ ಬೇಗೆ ಎದುರಿಸುತ್ತಿದ್ದಾರೆ. ಆರಂಭದಲ್ಲೇ ತಾಪ ಹೆಚ್ಚಾಗಿರುವುದರಿಂದ ಈ ಬೇಸಿಗೆಯ ಕಾವು ಮತ್ತಷ್ಟು ಏರಲಿದೆ.

ವಿವರ: ಶಿವಮೊಗ್ಗ, ಕೊಪ್ಪಳ, ಕಲಬುರಗಿ, ಕಾರವಾರ, ಮಂಡ್ಯ, ದಾವಣಗೆರೆಯಲ್ಲಿ ತಲಾ 35 ಡಿಗ್ರಿ ಸೆಲ್ಸಿಯಸ್, ಗದಗ, ವಿಜಯಪುರ, ಹಾವೇರಿ, ಚಿತ್ರದುರ್ಗ, ಮೈಸೂರು 34, ಬೆಂಗಳೂರು ನಗರ, ಧಾರವಾಡ, ವಿಜಯಪುರ, ಬೀದರ್, ಮಂಗಳೂರು ವಿಮಾನ ನಿಲ್ದಾಣ 33, ಹಾಸನ, ಚಿಂತಾಮಣಿ, ಬೆಳಗಾವಿ, ಹೊನ್ನಾವರದಲ್ಲಿ ತಲಾ 32 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

‘ಈ ಬಾರಿ ಚಳಿ ಪ್ರಮಾಣ ಕಡಿಮೆ ಆಗಿದ್ದರಿಂದ ಬೇಸಿಗೆ ಸಕಾಲಕ್ಕೆ ಶುರುವಾಗಿದೆ. ಪರಿಣಾಮ ಮಾರ್ಚ್ ಕೊನೆಯ ವಾರ ಮಳೆ ನಿರೀಕ್ಷಿಸಬಹುದು. ಈ ಸಲ ಬೇಸಿಗೆ ಅವಧಿಯೂ ಹೆಚ್ಚು ಇರಲಿದೆ’ ಎಂದು ಕೃಷಿ ಹವಾಮಾನ ವಿಜ್ಞಾನಿ ಎಂ.ಬಿ.ರಾಜೇಗೌಡ ವಿವರಿಸಿದರು.

‘ಪುತ್ರನಿಗೆ ಕ್ಷೇತ್ರ ನಿಗದಿ ಆಧರಿಸಿ ತೀರ್ಮಾನ’



ದೇವೇಗೌಡ

ಮೈಸೂರು: ‘ಪುತ್ರ ಹರೀಶ್ ಗೌಡ ಸ್ಪರ್ಧೆಗೆ ಕ್ಷೇತ್ರ ಇತ್ಯರ್ಥವಾದ ಮೇಲೆ ಮುಂದಿನ ರಾಜಕೀಯ ತೀರ್ಮಾನ ಕೈಗೊಳ್ಳುತ್ತೇನೆ. ಈ ವಿಚಾರವನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರಿಗೂ ಹೇಳಿದ್ದೇನೆ’ ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಶನಿವಾರ ಇಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಹುಣಸೂರು ಕ್ಷೇತ್ರಕ್ಕೆ ಮೊದಲ ಆದ್ಯತೆ, ಕೆ.ಆರ್.ನಗರ ಎರಡನೇ ಹಾಗೂ ಚಾಮರಾಜ ಕ್ಷೇತ್ರ ಮೂರನೇ ಆದ್ಯತೆ ಎಂದು ಹೇಳಿದ್ದೇನೆ. ಯಾವುದನ್ನಾದರೂ ಕೊಡಬಹುದು ಎಂದೂ ಸ್ಪಷ್ಟಪಡಿಸಿದ್ದೇನೆ. ಹೈಕಮಾಂಡ್ ಜೊತೆಗೆ ಮಾತನಾಡಿ ತೀರ್ಮಾನಿಸುವುದಾಗಿ ತಿಳಿಸಿದ್ದಾರೆ’ ಎಂದರು.

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿ ಮುಖಂಡರೂ ನನ್ನ ಸಂಪರ್ಕದಲ್ಲಿದ್ದಾರೆ. ಪಕ್ಷಕ್ಕೆ ಆಹ್ವಾನಿಸುತ್ತಿದ್ದು, ಎರಡು ಕ್ಷೇತ್ರ ಬಿಟ್ಟುಕೊಡುವುದಾಗಿ ಹೇಳಿದ್ದಾರೆ. ನಾನು ಯಾವುದೇ ತೀರ್ಮಾನ ಕೈಗೊಂಡಿಲ್ಲ, ಸದ್ಯಕ್ಕೆ ಜೆಡಿಎಸ್‌ನಲ್ಲೇ ಇದ್ದೇನೆ’ ಎಂದು ಹೇಳಿದರು.

ರಂಗಾಯಣ ನಿರ್ದೇಶಕರ ಹೇಳಿಕೆಗೆ ನಟಿ ತಾರಾ ಆಕ್ಷೇಪ

‘ಕಾವೇರಿ ತಡೆಯಲು ಯಾರಿಗೂ ಸಾಧ್ಯವಿಲ್ಲ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬಹುರೂಪಿ ರಾಷ್ಟ್ರೀಯ ರಂಗೋತ್ಸವ
- ಚಲನಚಿತ್ರೋತ್ಸವಕ್ಕೆ ತಾರಾ ಚಾಲನೆ
- ಮಾರ್ಚ್ 20ರವರೆಗೆ ವಿವಿಧ ಕಾರ್ಯಕ್ರಮ

ಮೈಸೂರು: ‘ನಮ್ಮ ಕೊಡಗಿನಲ್ಲಿ ಹುಟ್ಟುವ ಕಾವೇರಿ ನದಿಗೆ ಕಟ್ಟೆ ಕಟ್ಟಿದರೆ ನಿಮಗೆಲ್ಲಾ ಕುಡಿಯಲು ನೀರು ಸಿಗಲ್ಲ’ ಎಂಬ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮಾತಿಗೆ ನಟಿ ತಾರಾ ಅನುರಾಧ ಆಕ್ಷೇಪ ವ್ಯಕ್ತಪಡಿಸಿದರು.

ರಂಗಾಯಣದಲ್ಲಿ ಶನಿವಾರ ಬಹುರೂಪಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟಿಸಿದ ಅವರು, ‘ನದಿಯ ಸ್ವಭಾವವೇ ಹರಿಯುವುದು. ಕಾವೇರಿ ನದಿ ಹರಿಯುವುದನ್ನು ತಡೆಯಲು, ಕಟ್ಟೆಹಾಕಲು ಯಾರಿಗೂ ಸಾಧ್ಯವಿಲ್ಲ’ ಎಂದು ಹೇಳಿದರು.

‘ಕಾವೇರಿಯು ಕೊಡಗಿನಲ್ಲಿ ಜನ್ಮ ತಾಳಿದ ನದಿ ಎಂಬುದಕ್ಕೆ ಗೌರವವಿದೆ. ಆದರೆ, ಕಾವೇರಿ ಎಲ್ಲರಿಗೂ ಸೇರಿದವಳು ಎಂಬ ಗೌರವ ತಮಗೂ ಇದೆ ಎಂದು ಭಾವಿಸಿದ್ದೇನೆ’ ಎಂದು ಅವರು ರಂಗಾಯಣ ನಿರ್ದೇಶಕರಿಗೆ ತಿರುಗೇಟು ನೀಡಿದರು.

‘ಕಾವೇರಿ ನದಿ ಕುರಿತ ಕೊಡವ ಭಾಷೆಯ ಸಾಕ್ಷ್ಯಚಿತ್ರ ‘ದಿ ಸ್ಟೋರಿ ಆಫ್ ಕಾವೇರಿ’ ಮೂಲಕ ಚಲನಚಿತ್ರೋತ್ಸವ ಉದ್ಘಾಟಿಸಿದ್ದೇನೆ. ಕಾವೇರಿ ಇಡೀ ಕರುನಾಡಿನ ತಾಯಿ. ತಾಯಿ ಪರಿಕಲ್ಪನೆಯಡಿ ಬಹುರೂಪಿಯನ್ನು ಆಯೋಜಿಸಿರುವುದು ಶ್ಲಾಘನೀಯ’ ಎಂದು ಹೇಳಿದರು.

ಅವರಿಗೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ್ದ ಅಡ್ಡಂಡ ಸಿ.ಕಾರ್ಯಪ್ಪ, ‘ಕಾವೇರಿ ನಮ್ಮ ತಾಯಿ. ನೀವೆಲ್ಲಾ ಕೊಡಗಿನ ನೀರು ಕುಡಿಯುತ್ತಿದ್ದೀರಿ ಅಲ್ಲವೇ? ಅಲ್ಲೇನಾದರೂ ಕಟ್ಟೆ ಕಟ್ಟಿದರೆ ನಿಮಗೆ ನೀರೇ ಸಿಗಲ್ಲ’ ಎಂದು ಹೇಳಿದ್ದರು.

‘ಆದರೆ, ನಾವು ಸ್ವಾರ್ಥಿಗಳಲ್ಲ; ಹೀಗಾಗಿ, ಕಟ್ಟೆ ಕಟ್ಟಿಲ್ಲ. ಆ ನೀರನ್ನು ನಿಮಗೆ ಬಿಟ್ಟಿದ್ದೇವೆ. ಮೈಸೂರು, ಮಂಡ್ಯ, ಬೆಂಗಳೂರಿಗೆ ಕುಡಿಯುವ ನೀರು ತಲುಪುತ್ತಿದೆ. ಮಿಕ್ಕಿದ್ದು ಸಮುದ್ರ ಸೇರುತ್ತಿದೆ’ ಎಂದಿದ್ದರು.

‘ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲಾ ಅಧಿಕಾರಿಗಳು ಕನ್ನಡದ ಮೇಲೆ ಪ್ರೀತಿ ಇಟ್ಟುಕೊಂಡು ಕೆಲಸ ಮಾಡುತ್ತಾರೆ ಎಂದುಕೊಳ್ಳಬೇಡಿ. ಕನ್ನಡದ ವಿರೋಧಿಗಳೂ ಇದ್ದಾರೆ. ಆದರೆ, ರಂಗಾಯಣದಲ್ಲಿ ನನ್ನ ಜೊತೆಗಿರುವ ಅಧಿಕಾರಿಗಳು ಪ್ರೀತಿಯಿಂದ ಕೆಲಸ ಮಾಡುತ್ತಾ ನನ್ನ ಭಾರ ಕಡಿಮೆ ಮಾಡಿದ್ದಾರೆ’ ಎಂದೂ ನಿರ್ದೇಶಕರು ಹೇಳಿದ್ದರು.



ಮೈಸೂರಿನ ರಂಗಾಯಣದಲ್ಲಿ ಶನಿವಾರ ಮಗುವನ್ನು ತೊಟ್ಟಿಲಲ್ಲಿ ಇರಿಸಿ ತೂಗುವ ಮೂಲಕ ಬಹುರೂಪಿ ರಾಷ್ಟ್ರೀಯ ರಂಗೋತ್ಸವಕ್ಕೆ ‘ವೃಕ್ಷಮಾತೆ’ ತುಳಸೀಗೌಡ ಚಾಲನೆ ನೀಡಿದರು. ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ, ಮೇಯರ್ ಸುನಂದಾ ಫಾಲನೇತ್ರ, ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ನಟಿ ಮಾಳವಿಕಾ ಅವಿನಾಶ್, ಶಾಸಕ ಎಲ್.ನಾಗೇಂದ್ರ, ಸಚಿವ ಎಸ್.ಟಿ.ಸೋಮಶೇಖರ್, ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ ಅಧ್ಯಕ್ಷ ಅಪ್ಪಣ್ಣ, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್ ಇದ್ದಾರೆ –ಪ್ರಜಾವಾಣಿ ಚಿತ್ರ

ಸೂಟುಬೂಟು; ತಾರಾ ಎದಿರೇಟು

‘ಬೆಂಗಳೂರು ಚಲನಚಿತ್ರೋತ್ಸವದಲ್ಲಿ ಸೂಟು ಬೂಟು ಹಾಕಿಕೊಂಡು ಬರುತ್ತಿದ್ದರು ಎಂದು ಕೆಲವರು ಹೇಳಿದರು. ಸಿನಿಮಾ ನೋಡಲು ಬರುವವರು ಸೂಟು ಬೂಟು ಹಾಕಿಕೊಂಡು ಬಂದರೇನು? ರೇಷ್ಮೆ ಸೀರೆ ಅಥವಾ ಇನ್ನಾವುದೇ ಬಟ್ಟೆ ಧರಿಸಿ ಬಂದರೇನು?’ ಎಂದು ತಾರಾ ಪ್ರಶ್ನಿಸಿದರು.

‘ಏನು ಹಾಕಿಕೊಂಡು ಬಂದಿದ್ದೀರಿ ಎಂಬುದು ಥಿಯೇಟರ್‌ನೊಳಗಿನ ಕತ್ತಲೆಯಲ್ಲಿ ಗೊತ್ತಾಗುವುದಿಲ್ಲ. ಸೂಟುಬೂಟು ಹಾಕಿಕೊಂಡು ಬಂದರಷ್ಟೇ ಚಲನಚಿತ್ರೋತ್ಸವ ಅಲ್ಲ. ಒಳ್ಳೆಯ ಚಿತ್ರಗಳನ್ನು ಪ್ರೇಕ್ಷಕನಿಗೆ ತೋರಿಸುವುದು ಕಾಯಕವಷ್ಟೇ. ಬಡವನೋ, ಶ್ರೀಮಂತನೋ? ಪ್ರೇಕ್ಷಕನೇ ಮಹಾಪ್ರಭು’ ಎಂದು ಹೇಳಿದರು.

ಮಹದೇಶ್ವರ ಹುಲಿ ಸಂರಕ್ಷಿತ ಪ್ರದೇಶ ಘೋಷಣೆ ಬಾಕಿ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ವನ್ಯಜೀವಿಧಾಮವನ್ನು ‘ಮಲೆ ಮಹದೇಶ್ವರ ಹುಲಿ ಸಂರಕ್ಷಿತ ಪ್ರದೇಶ’ ಎಂದು ಘೋಷಿಸುವ ಪ್ರಸ್ತಾವಕ್ಕೆ ಶುಕ್ರವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿಲ್ಲ.

ಈ ವನ್ಯಜೀವಿಧಾಮವನ್ನು ‘ಮಲೆ ಮಹದದೇಶ್ವರ ಹುಲಿ ಸಂರಕ್ಷಿತ ಪ್ರದೇಶ’ ಎಂದು ಘೋಷಿಸುವ ಪ್ರಸ್ತಾವ ಶುಕ್ರವಾರದ ಸಂಪುಟ ಸಭೆಯ ಮುಂದಿತ್ತು. ಸಭೆಯಲ್ಲಿ ಈ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು. ಕೆಲವು ಸಚಿವರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಅನುಮೋದನೆ ನೀಡಿಲ್ಲ’ ಎಂದು ಮೂಲಗಳು ಹೇಳಿವೆ.

ಮಹದೇಶ್ವರ ಬೆಟ್ಟ, ಹನೂರು, ಯಡೆಯಾರಳ್ಳಿ ರಕ್ಷಿತ ಅರಣ್ಯವನ್ನು ಒಗ್ಗೂಡಿಸಿ 906 ಚದರ ಕಿ.ಮೀ ವಿಸ್ತೀರ್ಣವನ್ನು ಹುಲಿ ಸಂರಕ್ಷಿತ ಪ್ರದೇಶ ಎಂದು ಘೋಷಿಸುವ ಪ್ರಸ್ತಾವ ಸರ್ಕಾರ ಮುಂದಿದೆ. 2018ರ ಹುಲಿಗಣತಿ ಸಂದರ್ಭದಲ್ಲಿ ರಾಜ್ಯ ಸರ್ಕಾರ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಇಲ್ಲಿ 18 ರಿಂದ 20 ಹುಲಿಗಳಿವೆ.

ಸಂಘಟನೆ: 20ರಂದು ಜೆಡಿಎಸ್ ಸಮಾವೇಶ

ಪ್ರಜಾವಾಣಿ ವಾರ್ತೆ



ಎಚ್.ಡಿ. ದೇವೇಗೌಡ

ಬೆಂಗಳೂರು: ‘ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಎಲ್ಲ ಕ್ಷೇತ್ರಗಳಲ್ಲೂ ಸ್ಪರ್ಧೆ ಮಾಡಲಿದೆ. ಪಕ್ಷ ಬಲಪಡಿಸುವ ಪ್ರಯತ್ನ ಆರಂಭಿಸಿದ್ದೇವೆ. ಪೂರಕವಾಗಿ ಮಾರ್ಚ್ 20ರಂದು ಬೆಂಗಳೂರಿನಲ್ಲಿ ಪಕ್ಷದ ಸಮಾವೇಶ ನಡೆಯಲಿದೆ’ ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯನ್ನು ನಾಲ್ಕು ದಿಕ್ಕಿನಲ್ಲೂ ಅಧಿಕಾರಕ್ಕೆ ತರಲು ಪ್ರಧಾನಿ ನರೇಂದ್ರ ಮೋದಿ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ. ಈ ಭಾವನೆ ಜೆಡಿಎಸ್ ನಾಯಕರು ಮತ್ತು ಕಾರ್ಯಕರ್ತರಲ್ಲೂ ಬರಬೇಕು’ ಎಂದು ಹೇಳಿದರು.

‘ಬಿಜೆಪಿ ಮತ್ತು ಕಾಂಗ್ರೆಸ್ ಜೆಡಿಎಸ್‌ಗೆ ಸಮಾನ ಎದುರಾಳಿಗಳು. ಚುನಾವಣಾ ಹೊಂದಾಣಿಕೆ ಗಾಳಿಮಾತು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ ಈ ಎರಡೂ ಪಕ್ಷಗಳ ವಿರುದ್ಧ ಸಮಾನ ಹೋರಾಟ ನಡೆಸಲಿದೆ’ ಎಂದು ಸ್ಪಷ್ಟಪಡಿಸಿದರು.

ಒಗ್ಗಟ್ಟು ಅಗತ್ಯ: ಬಿಜೆಪಿ ಈಗ ಪ್ರಬಲವಾಗಿ ಬೆಳೆದಿದೆ. ರಾಷ್ಟ್ರದಲ್ಲಿ ಜಾತ್ಯತೀತ ಸಿದ್ಧಾಂತದ ಪಕ್ಷಗಳು ಒಗ್ಗೂಡುವ ಅಗತ್ಯವಿದೆ. ಆ ದಿಸೆಯಲ್ಲಿ ಚಿಂತನೆ ನಡೆಯಬೇಕಿದೆ. ‘ಕಾಂಗ್ರೆಸ್ ಈಗ ಬಲಹೀನವಾಗಿದೆ. ಕೆಲವೇ ರಾಜ್ಯಗಳಿಗೆ ಸೀಮಿತವಾದ ಪ್ರಾದೇಶಿಕ ಪಕ್ಷವಾಗಿದೆ. ಕರ್ನಾಟಕದ ಕಾಂಗ್ರೆಸ್ ಬಗ್ಗೆ ಏನನ್ನೂ ಮಾತನಾಡುವುದಿಲ್ಲ’ ಎಂದರು.

ಕಾಂಗ್ರೆಸ್ ಹೋರಾಟಕ್ಕೆ ತಕರಾರಿಲ್ಲ: ‘ರಾಜ್ಯದಲ್ಲಿ ಕಾಂಗ್ರೆಸ್ ನಾಯಕರು ಮೇಕೆದಾಟು ಯೋಜನೆಗೆ ಆಗ್ರಹಿಸಿ ದೊಡ್ಡ ಪಾದಯಾತ್ರೆ ನಡೆಸಿದರು. ಅವರ ಹೋರಾಟಕ್ಕೆ ಒಳ್ಳೆಯ ಪ್ರಚಾರವೂ ಸಿಕ್ಕಿತು. ಕಾಂಗ್ರೆಸ್‌ನ ಯಾವ ಹೋರಾಟಕ್ಕೂ ನನ್ನ ತಕರಾರಿಲ್ಲ’ ಎಂದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ಸರಿಯಾಗಿಯೇ ಮಾತನಾಡಿದ್ದಾರೆ ಎಂದರು. ಒಂದಿಬ್ಬರು ನಾಯಕರು ಪಕ್ಷ ಬಿಟ್ಟರೆ ತಲೆಕೆಡಿಸಿಕೊಳ್ಳುವುದಿಲ್ಲ. ಕಾರ್ಯಕರ್ತರು ಮುಖ್ಯ. ಅವರಿಗೆ ಧೈರ್ಯ ತುಂಬುತ್ತೇವೆ. ಅವಧಿಪೂರ್ವ ಚುನಾವಣೆ ಬಂದರೂ ಎದುರಿಸಲು ಜೆಡಿಎಸ್ ಸಿದ್ಧವಾಗಿದೆ ಎಂದು ಹೇಳಿದರು.

‘ಸಮಾಜದಲ್ಲಿ ಬದಲಾವಣೆ ತಂದ ಬರಗೂರರ ಸಾಹಿತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಗತ್ತಿನಲ್ಲಿ ಯಾವುದೇ ಕ್ರಾಂತಿಯೂ ತರಲಾಗದ ಬದಲಾವಣೆಗಳನ್ನು ಪುಸ್ತಕಗಳು ತಂದಿವೆ. ಬರಗೂರು ರಾಮಚಂದ್ರಪ್ಪ ಅವರ ಸಾಹಿತ್ಯ ಮತ್ತು ಸಿನಿಮಾದಿಂದ ಈ ಸಮಾಜದಲ್ಲಿ ಒಂದಷ್ಟು ಬದಲಾವಣೆಗಳು ಸಾಧ್ಯವಾಗಿವೆ’ ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರಿನ ಅಭಿರುಚಿ ಪ್ರಕಾಶನ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬರಗೂರು ರಾಮಚಂದ್ರಪ್ಪ ಅವರ ‘ಬೆವರು ನನ್ನ ದೇವರು’ ಸಮಗ್ರ ಸಾಹಿತ್ಯ ಸಂಪುಟ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಜೀವನದಲ್ಲಿ ನೈತಿಕ ಮೌಲ್ಯ ಬೆಳೆಸಿಕೊಂಡರೆ ಅದರ ಸುತ್ತ ಹತ್ತಾರು ಮೌಲ್ಯಗಳು ಹುಟ್ಟಿಕೊಳ್ಳುತ್ತವೆ. ಬರಗೂರು ಅವರು ಜೀವನದ ಉದ್ದಕ್ಕೂ ಅನೇಕ ಪೆಟ್ಟು ತಿಂದು ಆದರ್ಶರಾದರು. ಕುಗ್ರಾಮದಲ್ಲಿ ಹುಟ್ಟಿದ ಅವರು, ಪ್ರೇಮ ವಿವಾಹ, ಬಂಡಾಯ ಸಾಹಿತ್ಯ, ಸಿನಿಮಾ.... ಹೀಗೆ ಬದುಕಿನ ಉದ್ದಕ್ಕೂ ಕಷ್ಟಗಳನ್ನು ಎದುರಿಸುತ್ತಾ ಸಾಗಿದರು. ನಂಬಿದ ತತ್ವಗಳ ನಡುವೆ ಬದುಕುನಡೆಸಿ ಮಾದರಿಯಾಗಿದ್ದಾರೆ’ ಎಂದು ಹೇಳಿದರು.

ವಿಮರ್ಶಕ ಎಚ್.ಎಸ್. ರಾಘವೇಂದ್ರರಾವ್, ‘ಈ ಹಿಂದೆ ಪುಸ್ತಕಗಳನ್ನು ಓದಿದ ಬಳಿಕ ಲೇಖಕರ ಹಾಗೂ ಅವರ ವ್ಯಕ್ತಿತ್ವದ ಬಗ್ಗೆ ನಿರ್ಧಾರಕ್ಕೆ ಬರಲಾಗುತ್ತಿತ್ತು. ಆದರೆ, ಈಗ ಲೇಖಕರ ವ್ಯಕ್ತಿತ್ವದ ಆಧಾರದಲ್ಲಿ ಪುಸ್ತಕ ಓದುವುದು ಅಥವಾ ಓದದಿರುವುದು ದುರಂತ. ಪುಸ್ತಕಗಳನ್ನು ಓದದೆಯೇ ಅಭಿಪ್ರಾಯ ವ್ಯಕ್ತಪಡಿಸುವವರ ಸಂಖ್ಯೆ ಹೆಚ್ಚಳ ಆಗುತ್ತಿದೆ. ಫೇಸ್‌ಬುಕ್‌ಗಳಲ್ಲಿ ಲೈಕ್ ನೀಡುವ ಉತ್ಸಾಹ ಪುಸ್ತಕಗಳನ್ನು ಓದುವುದರಲ್ಲಿ ಇಲ್ಲ. ಬರಗೂರು ಅವರು ಸಮಕಾಲಿನ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬಂದಿದ್ದಾರೆ. ವೈಚಾರಿಕತೆ ಮತ್ತು ಭಾವುಕತೆಯನ್ನು ಅವರಲ್ಲಿ ಕಾಣಬಹುದು’ ಎಂದರು.

ವಿಮರ್ಶಕ ಬಸವರಾಜ ಕಲ್ಗುಡಿ, ‘ಬರಗೂರು ಅವರು ಕಾಯಕ, ಶ್ರಮದ ಪರಿಕಲ್ಪನೆಯನ್ನು ನಿರಂತರವಾಗಿ ತಮ್ಮ ಕೃತಿಯಲ್ಲಿ ತರುತ್ತಿದ್ದಾರೆ. ಬರವಣಿಗೆಯಲ್ಲಿ ಗಾಂಧೀಜಿ ಹಾಗೂ ಕುವೆಂಪು ಅವರನ್ನು ಮುಖಾಮುಖಿ ಮಾಡಿಸಿಕೊಂಡಿದ್ದಾರೆ. ಆಧುನಿಕ ಕಾಲದಲ್ಲಿ ಶುದ್ಧ ಗ್ರಾಮೀಣ ಸಂವೇದನೆಯನ್ನು ಅವರು ಸೆರೆ ಹಿಡಿದಿದ್ದಾರೆ’ ಎಂದು ತಿಳಿಸಿದರು.



ಡಾ. ಬರಗೂರು ಪ್ರತಿಷ್ಠಾನವು ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ (ಕುಳಿತವರು ಎಡದಿಂದ) ಎಚ್.ಟಿ. ಪೋತೆ, ಮಲ್ಲಿಕಾರ್ಜುನ ಹಿರೇಮಠ ಮತ್ತು ಕೇಶವ ಶರ್ಮ ಕೆ. ಅವರಿಗೆ ‘ರಾಜಲಕ್ಷ್ಮಿ ಬರಗೂರು ಪುಸ್ತಕ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಪ್ರತಿಷ್ಠಾನದ ಅಧ್ಯಕ್ಷ ಮುರುಳೀಧರ ಹಾಲಪ್ಪ, ಆಕಾಂಕ್ಷ್ ಬರಗೂರು, ಸಾಹಿತಿ ಬರಗೂರು ರಾಮಚಂದ್ರಪ್ಪ, ಲೇಖಕಿ ಎಚ್.ಎಲ್ ಪುಷ್ಪಾ, ಚಲನಚಿತ್ರ ನಟ ಸುಂದರ್ ರಾಜ್ ಮತ್ತು ಪ್ರತಿಷ್ಠಾನದ ಕಾರ್ಯದರ್ಶಿ ಲಕ್ಷ್ಮೀನಾರಾಯಣ ಇದ್ದಾರೆ. ಈ ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಬಹುಮಾನ ಒಳಗೊಂಡಿದೆ –ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಪುಸ್ತಕ: ‘ಬೆವರು ನನ್ನ ದೇವರು’ (ಸಮಗ್ರ ಸಾಹಿತ್ಯ 14 ಸಂಪುಟ)
ಲೇಖಕರು: ಬರಗೂರು ರಾಮಚಂದ್ರಪ್ಪ
ಪುಟಗಳು: 5,256
ಬೆಲೆ: ₹ 5,950
ಪ್ರಕಾಶನ: ಅಭಿರುಚಿ

ಭಾವುಕರಾದ ಬರಗೂರು


ತಮ್ಮ ವಿದ್ಯಾರ್ಥಿ ಹಾಗೂ ಸಾಹಿತ್ಯ ಜೀವನ ಸ್ಮರಿಸಿಕೊಂಡ ಬರಗೂರು ರಾಮಚಂದ್ರಪ್ಪ, ತಮ್ಮ ಸಾಧನೆಯ ಹಿಂದಿನ ಪರಿಶ್ರಮದ ಬಗ್ಗೆ ವಿವರಿಸಿದರು. ಈ ವೇಳೆ ಪತ್ನಿ ರಾಜಲಕ್ಷ್ಮಿ ಅವರನ್ನು ನೆನೆದು ಭಾವುಕರಾದರು.

‘ನಮಗೆ ಕೋಗಿಲೆ–ಕಾಗೆ, ಶ್ರೀಗಂಧ–ಜಾಲಿ, ಕಡಲು–ಕೆರೆ ಎಲ್ಲವೂ ಮುಖ್ಯವಾಗಬೇಕು. ಆತ್ಮರತಿಯ ಬದಲು ಆತ್ಮವಿಶ್ವಾಸ ಇರಬೇಕು’ ಎಂದು ಬರಗೂರು ಹೇಳಿದರು.

‘ಷರತ್ತಿಲ್ಲದೇ ಜೆಡಿಎಸ್ ಸೇರುವೆ’

ಕಾಂಗ್ರೆಸ್ ತ್ಯಜಿಸಿದ ಸಿ.ಎಂ. ಇಬ್ರಾಹಿಂ

ಪ್ರಜಾವಾಣಿ ವಾರ್ತೆ



ಸಿ.ಎಂ.ಇಬ್ರಾಹಿಂ

ಬೆಂಗಳೂರು: ವಿಧಾನಪರಿಷತ್ ಸದಸ್ಯ ಸಿ.ಎಂ.ಇಬ್ರಾಹಿಂ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಶನಿವಾರ ರಾಜೀನಾಮೆ ಸಲ್ಲಿಸಿದ್ದಾರೆ. ಪರಿಷತ್ ಸದಸ್ಯ ಸ್ಥಾನಕ್ಕೂ ರಾಜೀನಾಮೆ ನೀಡುವುದಾಗಿ ಪ್ರಕಟಿಸಿದ್ದಾರೆ.

ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿರುವ ಇಬ್ರಾಹಿಂ, ಪಕ್ಷದಲ್ಲಿ ತಮ್ಮನ್ನು ಕಡೆಗಣಿಸುತ್ತಿರುವ ಕಾರಣದಿಂದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವುದಾಗಿ ತಿಳಿಸಿದ್ದಾರೆ. ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಈ ಪತ್ರವನ್ನು ಅವರು ಮಾಧ್ಯಮಗಳಿಗೆ ಬಿಡುಗಡೆ ಮಾಡಿದರು.

‘ವಿಧಾನ ಪರಿಷತ್‌ನಲ್ಲಿ 18 ಸದಸ್ಯರ ಬೆಂಬಲ ನನಗೆ ಇತ್ತು. ಆದರೆ, ಕಿರಿಯರಾದ ಬಿ.ಕೆ. ಹರಿಪ್ರಸಾದ್ ಅವರನ್ನು ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ನೇಮಿಸಲಾಗಿದೆ. ಪಕ್ಷದ ಬೆಳವಣಿಗೆಗಳ ಕುರಿತು ನಿಮ್ಮನ್ನು ಹಾಗೂ ರಾಹುಲ್ ಗಾಂಧಿಯವರ ಭೇಟಿಗೆ ಅವಕಾಶವೇ ದೊರೆಯಲಿಲ್ಲ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಪ್ರಾಥಮಿಕ ಸದಸ್ಯತ್ವಕ್ಕೆ ಸಲ್ಲಿಸಿರುವ ರಾಜೀನಾಮೆಯನ್ನು ತಕ್ಷಣ ಅಂಗೀಕರಿಸಿ. ವಿಧಾನ ಪರಿಷತ್ ಸದಸ್ಯತ್ವಕ್ಕೂ ರಾಜೀನಾಮೆ ಪತ್ರವನ್ನು ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಮುಖಾಂತರ ಸಭಾಪತಿಯವರಿಗೆ ಕಳುಹಿಸಿದ್ದೇನೆ’ ಎಂದು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಿದ್ದರಾಮಯ್ಯ ಅವರಿಗಾಗಿ ಕಾಂಗ್ರೆಸ್ ಸೇರಿದ್ದೆ. ಅವರೇ ನಡು ನೀರಿನಲ್ಲಿ ಕೈಬಿಟ್ಟರು. ಜೆಡಿಎಸ್ ಪಕ್ಷ ನನಗೆ ಸರಿ ಹೊಂದುತ್ತದೆ. ಯಾವುದೇ ಷರತ್ತಿಲ್ಲದೆ ಜೆಡಿಎಸ್ ಸೇರುತ್ತಿದ್ದೇನೆ’ ಎಂದು ತಿಳಿಸಿದರು.

‘ಇಬ್ರಾಹಿಂ ಸೇರ್ಪಡೆ ತೀರ್ಮಾನವಾಗಿಲ್ಲ’

‘ಸಿ.ಎಂ.ಇಬ್ರಾಹಿಂ ಅವರು ನಮ್ಮ ಪಕ್ಷ ಸೇರುವುದು ಇನ್ನೂ ತೀರ್ಮಾನವಾಗಿಲ್ಲ. ಒಮ್ಮೆ ಭೇಟಿಮಾಡಿದ್ದರು. ಆದರೆ, ಪಕ್ಷ ಸೇರ್ಪಡೆ ಇನ್ನೂ ಅಂತಿಮಗೊಂಡಿಲ್ಲ’ ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಪ್ರತಿಕ್ರಿಯಿಸಿದರು.

‘ಯಾವಾಗ ಚುನಾವಣೆ ನಡೆದರೂ ಕಾಂಗ್ರೆಸ್ ಸಿದ್ಧ’

ಕಲಬುರಗಿ: ‘ಅವಧಿಗೆ ಮುನ್ನವೇ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯುವ ಸಾಧ್ಯತೆಗಳಿಲ್ಲ. ನಡೆದರೂ ಎದುರಿಸಲು ಕಾಂಗ್ರೆಸ್ ಪಕ್ಷ ಸಿದ್ಧ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಜಿಲ್ಲಾ ಪಂಚಾಯಿತಿ ಚುನಾವಣೆಯನ್ನೇ ಮಾಡದವರು ಅವಧಿಗೆ ಮುನ್ನ ವಿಧಾನಸಭೆ ಚುನಾವಣೆ ಮಾಡುತ್ತಾರೆ ಎಂದು ನನಗನಿಸುವುದಿಲ್ಲ’ ಎಂದರು.

‘ರಾಜ್ಯದಲ್ಲಿ ಬಿಜೆಪಿಯ ಭ್ರಷ್ಟ ಸರ್ಕಾರವಿದೆ. ಕಾಂಗ್ರೆಸ್ ಬಿಟ್ಟು ಹೋಗಿರುವ ಶಾಸಕರು ಮತ್ತೆ ಬಂದರೆ ಸೇರಿಸಿಕೊಳ್ಳುವುದಿಲ್ಲ’ ಎಂದರು.

ಸಿ.ಎಂ.ಇಬ್ರಾಹಿಂ ಮತ್ತು ಸಿದ್ದರಾಮಯ್ಯ ಇಬ್ಬರದ್ದು ಒಂದೇ ಮುಖ. ಅಧಿಕಾರ ಇದ್ದರೆ ಕಾಂಗ್ರೆಸ್‌ನಲ್ಲಿ ಇರುತ್ತಾರೆ. ಇಲ್ಲದಿದ್ದರೆ ಬೈದು ಹೊರಗೆ ಬರುತ್ತಾರೆ

ಕೆ.ಎಸ್.ಈಶ್ವರಪ್ಪ, ಸಚಿವ

ಅರಣ್ಯ ಇಲಾಖೆ ‘ಡಿ’ ದರ್ಜೆ ಹೊರಗುತ್ತಿಗೆ ನೌಕರರ ಆಗ್ರಹ, ಏ.4ರಿಂದ ಮುಷ್ಕರ

ಇಲಾಖೆಯಿಂದಲೇ ವೇತನ, ಪಾಳಿ ಪದ್ಧತಿಗೆ ಆಗ್ರಹ

● ಕೆ.ಎಸ್.ಗಿರೀಶ

ಮೈಸೂರು: ‘ಹೊರಗುತ್ತಿಗೆಯಿಂದ ಮುಕ್ತಿ ನೀಡಬೇಕು’ ಎಂದು ಆಗ್ರಹಪಡಿಸಿ ಅರಣ್ಯ ಇಲಾಖೆಯ ಪ್ರಾದೇಶಿಕ, ವನ್ಯಜೀವಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ 3 ಸಾವಿರ ‘ಡಿ’ ದರ್ಜೆ ಹೊರಗುತ್ತಿಗೆ ನೌಕರರು ಏಪ್ರಿಲ್ 4ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಈ ಕುರಿತ ನೋಟಿಸ್ ಅನ್ನು ಇಲಾಖೆಯ ಕಾರ್ಯದರ್ಶಿಗೆ ನೀಡಿದ್ದಾರೆ.

‘ಹೊರಗುತ್ತಿಗೆ ಪದ್ಧತಿಯನ್ನು ತೆಗೆದು ಹಾಕಿ ಇಲಾಖೆಯೇ ನೇರವಾಗಿ ವೇತನ ಪಾವತಿಸಬೇಕು. ಪಾಳಿ ಪದ್ಧತಿ ಜಾರಿಗೊಳಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ರಾಜ್ಯದ ಎಲ್ಲ ಹುಲಿ ರಕ್ಷಿತಾರಣ್ಯಗಳ ಬೇಟೆ ತಡೆ ರಕ್ಷಣಾ ಶಿಬಿರಗಳಲ್ಲಿ ಹೊರಗುತ್ತಿಗೆಯಡಿ ಕಾರ್ಯನಿರ್ವಹಿಸುವ ಸುಮಾರು 2 ಸಾವಿರ ನೌಕರರಿಗೆ 2 ತಿಂಗಳಿಂದ ಸಂಬಳವಾಗಿಲ್ಲ. ಪ್ರತಿ ತಿಂಗಳೂ ವೇತನ ವಿಳಂಬವಾಗುತ್ತಿರುವುದರಿಂದ ಆಕ್ರೋಶಗೊಂಡಿರುವ ಅವರು ಹೊರಗುತ್ತಿಗೆ ಪದ್ಧತಿ ಬೇಡ ಎನ್ನುತ್ತಿದ್ದಾರೆ.

‘2017ಕ್ಕೂ ಮೊದಲು ಇವರು ದಿನಗೂಲಿ ನೌಕರರಾಗಿದ್ದರು. ಹೊರಗುತ್ತಿಗೆಯಡಿ ನೇಮಕದ ಬಳಿಕ ವೇತನ ಗಗನಕುಸುಮವಾಗಿದೆ. ಸಂಬಳ ₹ 11 ಸಾವಿರ (ಭವಿಷ್ಯ ನಿಧಿ ಬಿಟ್ಟು) ಮಾತ್ರ. ಅದನ್ನೂ ಕೊಡದಿದ್ದರೆ ಬದುಕುವುದು ಹೇಗೆ?‘ ಎಂದು ಅರಣ್ಯ ಇಲಾಖೆ ದಿನಗೂಲಿ ನೌಕರರ ಸಂಘದ ಅಧ್ಯಕ್ಷ ಎ.ಎಂ.ನಾಗರಾಜು ಪ್ರಶ್ನಿಸುತ್ತಾರೆ.

‘ಪಿ.ಎಫ್ ಸಹ ಸರಿಯಾಗಿ ಪಾವತಿಯಾಗಿಲ್ಲ. ಗುತ್ತಿಗೆ ಪಡೆದ ಏಜೆನ್ಸಿಗಳು ಬದಲಾವಣೆಯಾಗುತ್ತಿರುವುದರಿಂದ ಯಾವ ಸೌಲಭ್ಯವೂ ದೊರೆಯುತ್ತಿಲ್ಲ’ ಎಂದು ಅವರು ‘ಪ್ರಜಾವಾಣಿ’ ಜತೆ ಅಳಲು ತೋಡಿಕೊಂಡರು. ಮುಷ್ಕರ ಕುರಿತಂತೆ ಮಾರ್ಚ್ 10ರಂದೇ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ದಟ್ಟ ಅರಣ್ಯದಲ್ಲಿ ರಕ್ಷಣಾ ಶಿಬಿರ, ತನಿಖಾ ಠಾಣೆ, ಬೇಟೆತಡೆ ಶಿಬಿರ, ವನ್ಯಜೀವಿ ಹತ್ಯೆ ತಡೆ ಶಿಬಿರಗಳಲ್ಲಿ ದಿನದ 24 ಗಂಟೆ ಕಾರ್ಯನಿರ್ವಹಿಸುತ್ತಾರೆ. ಅಪಾಯದ ನಡುವೆ ಕಾರ್ಯನಿರ್ವಹಿಸುವವರಿಗೆ ಕನಿಷ್ಠ ವೇತನವನ್ನಾದರೂ ಸಮರ್ಪಕವಾಗಿ ನೀಡಬೇಕು. ಇವರು, ಅಪಾಯದಲ್ಲಿ ಕೆಲಸ ಮಾಡಿದರೂ, ವಿಶೇಷ ಭತ್ಯೆಯಾಗಿ ₹ 2 ಸಾವಿರ ಪ್ರೋತ್ಸಾಹ ಧನವನ್ನು ಕಾಯಂ ಸಿಬ್ಬಂದಿಗಷ್ಟೇ ನೀಡಿ ಮಲತಾಯಿ ಧೋರಣೆ ಅನುಸರಿಸಲಾಗುತ್ತಿದೆ’ ಎಂದೂ ಕಿಡಿಕಾರಿದರು.

ಹಣಕಾಸು ವರ್ಷದ ಅಂತ್ಯದಲ್ಲಿ ಖಜಾನೆಯಲ್ಲಿ ಬಿಲ್‌ಗಳು ಬಾಕಿ ಉಳಿದಿದ್ದರಿಂದ ವೇತನ ಪಾವತಿ ವಿಳಂಬವಾಗಿದೆ. ಮೂರು–ನಾಲ್ಕು ದಿನದಲ್ಲಿ ಸಂಪೂರ್ಣ ವೇತನ ಪಾವತಿಯಾಗಲಿದೆ

ಸಂಜಯ್ ಮೋಹನ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

ಮುಷ್ಕರದ ನಂತರ 2 ತಿಂಗಳ ವೇತನ

ಬಂಡೀಪುರ ಹಾಗೂ ನಾಗರಹೊಳೆ ಹುಲಿ ರಕ್ಷಿತಾರಣ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆಯ ‘ಡಿ’ ದರ್ಜೆಯ 700 ನೌಕರರಿಗೆ 4 ತಿಂಗಳಿಂದ ವೇತನ ಪಾವತಿಯಾಗಿರಲಿಲ್ಲ. ನೌಕರರು ಹುಣಸೂರಿನಲ್ಲಿ ಮುಷ್ಕರ ನಡೆಸಿದ ಬಳಿಕ 2 ತಿಂಗಳ ವೇತನವಷ್ಟೇ ಪಾವತಿಯಾಗಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಬೇಸಿಗೆ ಸಂದರ್ಭದಲ್ಲಿ ವಾತಾವರಣ ಕಾವೇರುವುದರಲ್ಲೂ ಬದುಕಿನ ಪಾಠವಿದೆ. ಬಿಸಿ – ತಂಪು ನಡುವಿನ ಝಲಕ್...



ಜರ್ಮನಿ: ಕೋವಿಡ್ ಹೆಚ್ಚಳ 6
ಉತ್ತರ ಪ್ರದೇಶ ವಿಧಾನಸಭಾ ಚುನಾವಣಾ ಫಲಿತಾಂಶ: ಕನಿಷ್ಠ ಅಂತರ 203 ಮತ
ವೈದ್ಯಕೀಯ ಪಿ.ಜಿ: ಕಟ್‌ಆಫ್ ಪ್ರಮಾಣ ಇಳಿಕೆಗೆ ಸೂಚನೆ 5
49 ಮಂದಿಗೆ ಅಲ್ಪ ಅಂತರದ ಗೆಲುವು 7

ಕೊರತೆಗಳಲ್ಲೇ ನಲುಗಿರುವ ರಾಜ್ಯದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು

ಕಟ್ಟಡಗಳಿವೆ; ಸೌಕರ್ಯಗಳೇ ಇಲ್ಲ!

• ಎ.ಎಂ.ಸುರೇಶ

ಒಳನೋಟ
ಬೇಕಿದೆ ಕಾಯಕಲ್ಪ
ಪ್ರತಿಕ್ರಿಯಿಸಿ: 9606038256
feedback@prajavani.co.in

ಬೆಂಗಳೂರು: ರಾಜ್ಯದ ಬಹುತೇಕ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಗೆ ಕಟ್ಟಡಗಳಿವೆ. ಆದರೆ, ಕಾಯಂ ಬೋಧಕರು, ಕಾರ್ಯಾಗಾರ ಹಾಗೂ ಬೋಧಕೇತರ ಸಿಬ್ಬಂದಿ, ಗ್ರಂಥಾಲಯ, ಪೂರ್ಣ ಪ್ರಮಾಣದಲ್ಲಿ ಪ್ರಯೋಗಾಲಯಗಳಿಲ್ಲ. ಈ ಕೊರತೆಯು ವಿದ್ಯಾರ್ಥಿಗಳ ಕಲಿಕೆ, ಕೌಶಲ, ಉನ್ನತ ಉದ್ಯೋಗದ ಅವಕಾಶಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ.

ಬಡವರು ಹಾಗೂ ಮಧ್ಯಮ ವರ್ಗದವರ ಮಕ್ಕಳಿಗೂ ಕಡಿಮೆ ವೆಚ್ಚದಲ್ಲಿ ಎಂಜಿನಿಯರಿಂಗ್ ಶಿಕ್ಷಣ ಸಿಗಬೇಕೆಂಬ ಆಶಯದಿಂದ 2007ರಿಂದ ವಿವಿಧ ಹಂತಗಳಲ್ಲಿ ರಾಜ್ಯ ಸರ್ಕಾರವೇ 14 ಎಂಜಿನಿಯರಿಂಗ್ ಕಾಲೇಜುಗಳನ್ನು ಆರಂಭಿಸಿದೆ. ಬೋಧನಾ ಶುಲ್ಕವೂ ಕಡಿಮೆ ಇದೆ. ಆದರೆ ಕಲಿಕೆಗೆ ಬೇಕಾದ ಸೌಲಭ್ಯಗಳಿಲ್ಲ!

ಬಹುತೇಕ ಕಾಲೇಜುಗಳಲ್ಲಿ ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್, ಮೆಕ್ಯಾನಿಕಲ್, ಸಿವಿಲ್ ಎಂಜಿನಿಯರಿಂಗ್ ವಿಭಾಗಗಳಿವೆ. ಕೆಲವೆಡೆ ಎಲೆಕ್ಟ್ರಿಕಲ್, ಕೃತಕ ಬುದ್ಧಿಮತ್ತೆ, ಟೆಕ್ಸ್‌ಟೈಲ್ಸ್ ಅಂಡ್ ಸಿಲ್ಕ್ ವಿಭಾಗಗಳಿವೆ. ಇಲ್ಲೆಲ್ಲೂ ಅಗತ್ಯವಿರುವಷ್ಟು ಬೋಧಕರಿಲ್ಲ. ಕೆಲವೆಡೆ ಒಬ್ಬರೇ ಕಾಯಂ ಬೋಧಕರು. ಹೆಚ್ಚಿನ ವಿಭಾಗಗಳು ಅತಿಥಿ ಉಪನ್ಯಾಸಕರನ್ನೇ ಅವಲಂಬಿಸಿವೆ.

ಮಂಜೂರಾಗದ ಹುದ್ದೆ: ಗಂಗಾವತಿ, ತಳಕಲ್, ಚಳ್ಳಕೆರೆ, ಹಾಗೂ ಹಾಸನ ಜಿಲ್ಲೆಯ ಮೊಸಳೆಹೊಸಹಳ್ಳಿಯಲ್ಲಿ 2019ರ ಬಳಿಕ ಆರಂಭವಾಗಿರುವ ಕಾಲೇಜುಗಳಿಗೆ ಬೋಧಕೇತರ ಸಿಬ್ಬಂದಿ ಹುದ್ದೆಗಳೇ ಮಂಜೂರಾಗಿಲ್ಲ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ನಿಯಮಾವಳಿಗಳಿಗೆ ಅನುಗುಣವಾಗಿ ಬೋಧಕರ ಹುದ್ದೆಗಳೂ ಮಂಜೂರಾಗಿಲ್ಲ.

ಬೋಧಕ–ವಿದ್ಯಾರ್ಥಿಗಳ ನಡುವಿನ ಅನುಪಾತ 1:15ರ ಬದಲು 1:20 ಇರಬೇಕು ಎಂದು ಎಐಸಿಟಿಇ ಬದಲಾವಣೆ ಮಾಡಿದ್ದರಿಂದ, 2007ರಲ್ಲಿ ಆರಂಭವಾಗಿದ್ದ ಕಾಲೇಜುಗಳಲ್ಲಿದ್ದ ಬೋಧಕರನ್ನು ಹೆಚ್ಚುವರಿಯೆಂದು ಪರಿಗಣಿಸಿ, ಹುದ್ದೆ ಸಮೇತ ನಾಲ್ಕು ಹೊಸ ಕಾಲೇಜುಗಳಿಗೆ ವರ್ಗಾಯಿಸಲಾಗಿದೆ. ಅವರಷ್ಟೇ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. 'ವಾಸ್ತವವಾಗಿ ಆ ಕಾಲೇಜುಗಳಿಗೆ ಅಗತ್ಯಕ್ಕೆ ಅನುಗುಣವಾಗಿ ಬೋಧಕರ ಹುದ್ದೆಗಳು ಮಂಜೂರಾಗಿಲ್ಲ' ಎಂದು ಪ್ರಾಂಶುಪಾಲರೊಬ್ಬರು ಬೇಸರ ವ್ಯಕ್ತಪಡಿಸಿದರು.

4ನೇ | ಪುಟ ನೋಡಿ
ಇನ್ನಷ್ಟು ಸುದ್ದಿಗಳು | 4



ಬೆಂಗಳೂರಿನ ಶ್ರೀಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ಕಾಲೇಜಿನ ಟೆಕ್ಸ್‌ಟೈಲ್ಸ್ ಮತ್ತು ಸಿಲ್ಕ್ ವಿಭಾಗದ ಲ್ಯಾಬ್‌ನ ಉಪಕರಣಗಳು ದೂಳು ತಿನ್ನುತ್ತಿವೆ –ಪ್ರಜಾವಾಣಿ ಚಿತ್ರ

'ಮೂರು ತಿಂಗಳಲ್ಲಿ ಸುಧಾರಣೆ'



ಸೂಪರ್ 30 ಯೋಜನೆಯಡಿ ಕೈಗಾರಿಕೆಗಳ ನೆರವಿನೊಂದಿಗೆ ಪ್ರಯೋಗಾಲಯ ಸೇರಿದಂತೆ ಮೂಲ-ಸೌಕರ್ಯಗಳನ್ನು ಕಲ್ಪಿಸಲಾಗುವುದು. ಕಲಿಕೆ ಮತ್ತು ಬೋಧನೆಯಲ್ಲಿ ಸುಧಾರಣೆ ತರಲು ಡಿಜಿಟಲೀಕರಣ ಮಾಡಲಾಗುತ್ತಿದೆ. ಹೊಸದಾಗಿ ವೃಂದ ಮತ್ತು ನೇಮಕಾತಿ ನಿಯಮಾವಳಿ ರೂಪಿಸಲಾಗುತ್ತಿದೆ. ಉದ್ಯಮಗಳಲ್ಲಿ ಕೆಲಸ ಮಾಡುವವರಿಗೂ ಬೋಧನೆಗೆ ಅವಕಾಶ ನೀಡುತ್ತೇವೆ.

ಸ್ಮಾರ್ಟ್ ಕ್ಲಾಸ್ ರೂಂ ವ್ಯವಸ್ಥೆ, ಆಡಿಯೊ, ವಿಡಿಯೊ ಮೂಲಕ ಕಂಟೆಂಟ್ ಲಭ್ಯವಾಗುವಂತೆ ಮಾಡುತ್ತೇವೆ. ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕಾ ಮಟ್ಟವನ್ನು ಮೌಲ್ಯಮಾಪನ ಮಾಡಿ, ಸಾಮಾನ್ಯಮಟ್ಟಕ್ಕಿಂತ ಕಡಿಮೆ ಇದ್ದರೆ ಸುಧಾರಣೆ ಮಾಡುತ್ತೇವೆ. ಕೈಗಾರಿಕೆಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗು-ವುದು. ಇದರಿಂದ ಉದ್ಯೋಗ ಪಡೆಯಲು ಸಹಕಾರಿಯಾಗಲಿದೆ.

ಶೇಕಡ 50ಕ್ಕಿಂತಲೂ ಹೆಚ್ಚು ಬೋಧನಾ ಸಿಬ್ಬಂದಿ ಇದ್ದಾರೆ. ಬೋಧಕೇತರ ಸಿಬ್ಬಂದಿಯ ಕೊರತೆ ಇರುವುದು ನಿಜ. ಹಲವು ಕಡೆ ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳಲಾಗಿದೆ.

ಡಾ.ಸಿ.ಎನ್. ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಸಚಿವ

ವಿದ್ಯುತ್ ಬಿಲ್ ಕಟ್ಟಲು ಹಣವಿಲ್ಲ!

ವಿದ್ಯುತ್ ಬಿಲ್ ಕಟ್ಟದ ಕಾರಣ, ಬೆಂಗಳೂರಿನ ಶ್ರೀಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ತಾಂತ್ರಿಕ ಮಹಾವಿದ್ಯಾಲಯಕ್ಕೆ ಮೂರು ತಿಂಗಳ ಹಿಂದೆ ಬೆಸ್ಕಾಂ ವಿದ್ಯುತ್ ಕಡಿತಗೊಳಿಸಿತ್ತು. ಒಂದು ತಿಂಗಳ ಕಾಲ ಜನರೇಟರ್ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು ಎಂದು ಮೂಲಗಳು ತಿಳಿಸಿವೆ.

'ಕಾಲೇಜುಗಳ ನಿರ್ವಹಣೆಗೆ ಅನುದಾನ ನೀಡುವಂತೆ ಪತ್ರ ಬರೆದರೂ ತಾಂತ್ರಿಕ ಶಿಕ್ಷಣ ಇಲಾಖೆ ಸ್ಪಂದಿಸುವುದಿಲ್ಲ. ಕೈಯಿಂದ ಖರ್ಚು ಮಾಡಬೇ-ಕಾಗುತ್ತದೆ. ಸ್ವಂತ ಹಣದಲ್ಲಿ ಡೀಸೆಲ್ ತಂದು ಜನರೇಟರ್‌ಗೆ ಹಾಕಿದೆವು. ವಿದ್ಯುತ್ ಇಲ್ಲದೆ ಇದ್ದರೆ ಲ್ಯಾಬ್‌ಗಳನ್ನು ನಿರ್ವ-ಹಿಸುವುದಾದರೂ ಹೇಗೆ' ಎಂಬುದು ಪ್ರಾಂಶುಪಾಲರ ಪ್ರಶ್ನೆ.


ಈಗಿರುವ ಕಾಲೇಜುಗಳಿಗೆ ಅಗತ್ಯವಿರುವ ಸೌಲಭ್ಯಗಳನ್ನು ಸರ್ಕಾರ ಕಲ್ಪಿಸಿಕೊಡಬೇಕು. ದಾವಣಗೆರೆಯ ಯುಬಿಡಿಟಿಯಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಪ್ರಯತ್ನ ನಡೆದಿದೆ.
ಡಾ.ಕರಿಸಿದ್ದಪ್ಪ, ಕುಲಪತಿ, ವಿಟಿಯು

ಪಿಎಫ್ ಬಡ್ಡಿದರ ಶೇ 8.1ಕ್ಕೆ ಇಳಿಕೆ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಠೇವಣಿಗಳಿಗೆ 2021–22ನೇ ಸಾಲಿಗೆ ನೀಡುವ ಬಡ್ಡಿದರವನ್ನು ಶೇ 8.5 ರಿಂದ ಶೇ 8.1ಕ್ಕೆ ತಗ್ಗಿಸಲು ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ನಿರ್ಧರಿಸಿದೆ.

2020–21ನೇ ಸಾಲಿಗೆ ಶೇ 8.5ರಷ್ಟು ಬಡ್ಡಿದರ ನೀಡಲಾಗಿತ್ತು. ಇದಕ್ಕೆ ಹೋಲಿಸಿದರೆ ಪ್ರಸಕ್ತ ಹಣಕಾಸು ವರ್ಷಕ್ಕೆ ನಿಗದಿಪಡಿಸಿರುವ ಬಡ್ಡಿದರವು ಶೇ 0.4ರಷ್ಟು ಕಡಿಮೆ ಆಗಲಿದೆ. ಈಗ ನಿಗದಿಪಡಿಸಿರುವ ಬಡ್ಡಿದರವು 1977–78 ರಿಂದೀಚೆಗಿನ ಅತ್ಯಂತ ಕಡಿಮೆ ಮಟ್ಟದ್ದಾಗಿದೆ. ಆ ಸಾಲಿನಲ್ಲಿ ಶೇ 8ರಷ್ಟು ಬಡ್ಡಿದರ ನೀಡಲಾಗಿತ್ತು. ಇಪಿಎಫ್‌ಒನಲ್ಲಿ ಐದು

ಬಡ್ಡಿದರದ ವಿವರ (%)



ಕೋಟಿಗೂ ಹೆಚ್ಚಿನ ಚಂದಾದಾರರು ಇದ್ದಾರೆ.

ಕೇಂದ್ರ ಕಾರ್ಮಿಕ ಸಚಿವ ಭೂಪೇಂದ್ರ ಯಾದವ್ ನೇತೃತ್ವದಲ್ಲಿ ಶನಿವಾರ ಗುವಾಹಟಿಯಲ್ಲಿ ನಡೆದ ಇಪಿಎಫ್‌ಒನ ಟ್ರಸ್ಟಿ ಮಂಡಳಿಯ ಸಭೆಯಲ್ಲಿ ಬಡ್ಡಿದರವನ್ನು ನಿಗದಿಪಡಿ-ಸಲಾಗಿದೆ. ಅಂತರರಾಷ್ಟ್ರೀಯ ಪರಿಸ್ಥಿತಿ ಮತ್ತು ಷೇರುಪೇಟೆಯನ್ನು ಗಮನದಲ್ಲಿ ಇಟ್ಟುಕೊಂಡು ಮಂಡಳಿಯು ಈ ನಿರ್ಧಾರ ತೆಗೆದುಕೊಂಡಿದೆ ಎಂದು ಸಚಿವರು ತಿಳಿಸಿದ್ದಾರೆ.

ಟ್ರಸ್ಟಿ ಮಂಡಳಿಯು ನಿಗದಿ ಮಾಡುವ ಬಡ್ಡಿದರಕ್ಕೆ, ಕೇಂದ್ರ ಹಣಕಾಸು ಸಚಿವಾಲಯ ಅನುಮೋದನೆ ನೀಡಬೇಕು. ಆ ನಂತರವೇ ಇಪಿಎಫ್‌ಒ, ಬಡ್ಡಿ ದರಕ್ಕೆ ಅನುಗುಣವಾಗಿ ಮೊತ್ತ ಪಾವತಿಸುತ್ತದೆ.

ಚುನಾವಣಾ ಗೆಲುವಿನ ಮೂಲಕ ಕೋಟ್ಯಂತರ ನೌಕರರ ಉಳಿತಾಯಕ್ಕೆ ಹೊಡೆತ ಕೊಟ್ಟಿದ್ದು ಸರಿಯೇ? ಇದು ಬಿಜೆಪಿಯ ಗೆಲುವಿಗೆ ಪ್ರತಿಯಾಗಿ ಕೊಡುಗೆಯೇ?
ರಣದೀಪ್ ಸುರ್ಜೇವಾಲಾ
ಕಾಂಗ್ರೆಸ್ ವಕ್ತಾರ

ಪಾಕ್ ನೆಲಕ್ಕೆ ಬಿದ್ದ ಕ್ಷಿಪಣಿ: ಜಂಟಿ ತನಿಖೆಗೆ ಆಗ್ರಹ

ಇಸ್ಲಾಮಾಬಾದ್: ತನ್ನ ನೆಲದ ಮೇಲೆ ಶರವೇಗದ ಸೂಪರ್ ಸಾನಿಕ್ ಕ್ಷಿಪಣಿ ಬಿದ್ದ ಘಟನೆ ಕುರಿತು ಆಂತರಿಕ ತನಿಖೆ ನಡೆಸುವ ಭಾರತದ ನಿರ್ಧಾರವನ್ನು ಪಾಕಿಸ್ತಾನ ಶನಿವಾರ ತಿರಸ್ಕರಿಸಿದ್ದು, ಜಂಟಿ ತನಿಖೆ ನಡೆಸಬೇಕೆಂದು ಆಗ್ರಹಿಸಿದೆ.

ಈ ವಿಷಯದಲ್ಲಿ ಪಾತ್ರ ವಹಿಸುವಂತೆ ಅಂತರರಾಷ್ಟ್ರೀಯ ಸಮುದಾಯಕ್ಕೆ ಕರೆನೀಡಿದೆ. 'ಇಂಥ ಗಂಭೀರ ವಿಷಯದ ಕುರಿತು ಭಾರತ ನೀಡುವ ಸರಳವಾದ ವಿವರಣೆಯನ್ನು ಒಪ್ಪಲಾಗದು. ಈ ಘಟನೆಗೆ ನಿಖರವಾದ ಕಾರಣಗಳ ಪತ್ತೆಗೆ ಜಂಟಿ ತನಿಖೆಯ ಅಗತ್ಯ ಇದೆ' ಎಂದು ಪಾಕಿಸ್ತಾನದ ವಿದೇಶಾಂಗ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಮಾರ್ಚ್ 9ರಂದು ಸೂರತ್‌ಗಡದಿಂದ ಹಾರಿದ 'ಸೂಪರ್ ಸಾನಿಕ್ ಫ್ಲೈಯಿಂಗ್ ಆಬ್ಜೆಕ್ಟ್', ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮಿಯಾನ್ ಚುನ್ನು ನಗರದ ಸಮೀಪ ನೆಲಕ್ಕೆ ಅಪ್ಪಳಿಸಿತ್ತು.

ಕೀವ್ ನಗರದ ಮೇಲೆ ರಷ್ಯಾ ಪ್ರಹಾರ

ಕೀವ್ (ಎಎಫ್‌ಪಿ/ಎಪಿ): ಉಕ್ರೇನ್ ಅನ್ನು ಸಂಪೂರ್ಣ ವಶಕ್ಕೆ ಪಡೆಯಲು ಪಣತೊಟ್ಟಿರುವ ರಷ್ಯಾ, ಶನಿವಾರ ನಸುಕಿನಿಂದಲೇ ಉಕ್ರೇನ್‌ನ ಪ್ರಮುಖ ನಗರಗಳನ್ನು ಗುರಿಯಾಗಿಸಿ ವೈಮಾನಿಕ ಮತ್ತು ಕ್ಷಿಪಣಿ ದಾಳಿ ನಡೆಸಿದೆ.

ರಾಜಧಾನಿ ಕೀವ್ ನಗರ ವಶಪಡಿಸಿಕೊಳ್ಳಲು ಮುನ್ನುಗ್ಗುತ್ತಿರುವ ರಷ್ಯಾ ಸೈನಿಕರು, ಕಂಡಕಂಡಲ್ಲಿ ಕ್ಷಿಪಣಿ, ಶೆಲ್ ದಾಳಿ ನಡೆಸಿದರು. ಇದರಿಂದ ಬಹುತೇಕ ಎಲ್ಲ ನಗರಗಳಲ್ಲೂ ಯುದ್ಧ ಜ್ವಾಲೆ ಆವರಿಸಿದೆ. ರಷ್ಯಾ ಪಡೆಗಳ ಆರ್ಭಟಕ್ಕೆ ಉಕ್ರೇನ್ ನಗರಗಳ ಜನವಸತಿ ಪ್ರದೇಶಗಳಲ್ಲಿ ಗಗನಚುಂಬಿ ಕಟ್ಟಡಗಳು ಧ್ವಂಸವಾಗುತ್ತಿವೆ.

ವಾಸಿಕಿವ್ ಪಟ್ಟಣದ ಸಮೀಪ ಶನಿವಾರ ನಸುಕಿನಲ್ಲಿ ಎಂಟು ಕ್ಷಿಪಣಿ-ಗಳನ್ನು ಹಾರಿಸಿದ ರಷ್ಯಾ, ಉಕ್ರೇನ್‌ನ ವಾಯುನೆಲೆಯೊಂದನ್ನು ನಾಶಪಡಿಸಿದೆ.

ಒಂದು ವಾರದಿಂದ ರಷ್ಯಾ ಸೈನಿಕರು ಮರಿಯುಪೋಲ್ ನಗರಕ್ಕೆ ಮುತ್ತಿಗೆ ಹಾಕಿದ್ದು, ನಿರಂತರ ಬಾಂಬ್ ದಾಳಿ ನಡೆಯುತ್ತಲೇ ಇದೆ. ಶುಕ್ರವಾರ ತಡರಾತ್ರಿ ಮೈಕೊಲೈವ್ ನಗರದ ಕ್ಯಾನ್ಸರ್ ಚಿಕಿತ್ಸೆಯ ಆಸ್ಪತ್ರೆ ಮತ್ತು ನೇತ್ರ ಚಿಕಿತ್ಸಾಲಯದ ಮೇಲೂ ಶೆಲ್ ದಾಳಿ ನಡೆದಿದೆ.

ಮೆಲಿಟೊಪೋಲ್ ನಗರದ ಮೇಯರ್ ಇವಾನ್ ಪೆಡೊರೊವ್ ಅವರನ್ನು ರಷ್ಯಾ ಪಡೆಗಳು ಅಪಹರಿಸಿವೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಆರೋಪಿಸಿದ್ದು, ಪೆಡೊರೊವ್ ಸುರಕ್ಷಿತ ಬಿಡುಗಡೆಗಾಗಿ ಜರ್ಮನಿ ಮತ್ತು ಫ್ರಾನ್ಸ್ ನೆರವಿಗೆ ಅವರು ಮೊರೆ ಇಟ್ಟಿದ್ದಾರೆ.

ಮಸೀದಿ ಮೇಲೆ ಶೆಲ್ ದಾಳಿ

ರಾಜಧಾನಿ ಕೀವ್ ಹೊರವಲಯದ ಬಂದರು ನಗರಿ ಮರಿಯುಪೋಲ್‌ನಲ್ಲಿ ಸುಲ್ತಾನ್ ಸುಲೇಮಾನ್ ಮ್ಯಾಗ್ನಿಫಿಸೆಂಟ್ ಮಸೀದಿ ಮೇಲೆ ರಷ್ಯಾ ಪಡೆಗಳು ಶನಿವಾರ ಶೆಲ್ ದಾಳಿ ನಡೆಸಿವೆ.

ಟರ್ಕಿಯ ನಾಗರಿಕರು, 34 ಮಕ್ಕಳು ಸೇರಿ ಸುಮಾರು 80 ಮಂದಿ ಈ ಮಸೀದಿಯಲ್ಲಿ ಆಶ್ರಯ ಪಡೆದಿದ್ದರು ಎಂದು ಉಕ್ರೇನ್ ವಿದೇಶಾಂಗ ಸಚಿವಾಲಯ ಹೇಳಿದೆ. ಸಾವು– ನೋವಿನ ಬಗ್ಗೆ ವರದಿಯಾಗಿಲ್ಲ.

5ನೇ | ಪುಟ ನೋಡಿ
ವಿಶೇಷ ಪುಟ | 5

ಚಿನಕುರಳಿ
ಪ್ರಕಾಶ್ ಶೆಟ್ಟಿ



ಮಹಿಳಾ ವಿಶ್ವಕಪ್ ಕ್ರಿಕೆಟ್: ಜೂಲನ್, ಮಿಥಾಲಿ ದಾಖಲೆ

ಹ್ಯಾಮಿಲ್ಟನ್, ನ್ಯೂಜಿಲೆಂಡ್: ಸೆಡಾನ್ ಪಾರ್ಕ್‌ನಲ್ಲಿ ಶನಿವಾರ ನಡೆದ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯದಲ್ಲಿ ಭಾರತದ ನಾಯಕಿ ಮಿಥಾಲಿ ರಾಜ್ ಮತ್ತು ವೇಗದ ಬೌಲರ್ ಜೂಲನ್ ಗೋಸ್ವಾಮಿ ದಾಖಲೆ ಬರೆದರು. ಮಿಥಾಲಿ ಅತಿಹೆಚ್ಚು ವಿಶ್ವಕಪ್ ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ ಸಾಧನೆ ಮಾಡಿದರು. ಜೂಲನ್ ಗೋಸ್ವಾಮಿ ಗರಿಷ್ಠ ವಿಕೆಟ್ ಗಳಿಸಿದ ಬೌಲರ್ ಎನಿಸಿಕೊಂಡರು.



ಹೆಚ್ಚು ವಿಕೆಟ್ ಪಡೆದವರು

ಬೌಲರ್	ದೇಶ	ಪಂದ್ಯ	ವಿಕೆಟ್	ಆಡಿದ ಅವಧಿ
ಜೂಲನ್ ಗೋಸ್ವಾಮಿ	ಭಾರತ	31	40	2005-2022
ಲಿನೆಟ್ ಫುಲ್‌ಸ್ಟನ್	ಆಸ್ಟ್ರೇಲಿಯಾ	20	39	1982-1988
ಕರೋಲಿ ಹಾಜ್ಸ್	ಇಂಗ್ಲೆಂಡ್	24	37	1982-1993
ಕ್ಲೇರ್ ಟೇಲರ್	ಇಂಗ್ಲೆಂಡ್	26	36	1988-2005
ಕ್ಯಾಥ್ರಿನ್ ಫಿಜ್‌ಪ್ಯಾಟ್ರಿಕ್	ಆಸ್ಟ್ರೇಲಿಯಾ	25	33	1993-2005

ಅತಿಹೆಚ್ಚು ಪಂದ್ಯಗಳಲ್ಲಿ ನಾಯಕತ್ವ ವಹಿಸಿದವರು

ಆಟಗಾರ್ತಿ	ತಂಡ	ಪಂದ್ಯ	ಜಯ	ಸೋಲು	ಟೈ	ಫಲಿತಾಂಶ ವಿಲ್ಲ
ಮಿಥಾಲಿ ರಾಜ್	ಭಾರತ	24	15	8	-	1
ಬೆಲಿಂಡಾ ಕ್ಲಾರ್ಕ್	ಆಸ್ಟ್ರೇಲಿಯಾ	23	21	1	-	1
ಸೂಸನ್ ಗೋಟ್ಮನ್	ಇಂಗ್ಲೆಂಡ್	19	8	9	2	-
ಪ್ಯಾಟ್ರಿಸಿಯಾ ಮೆಕ್ಲಿವಿ	ನ್ಯೂಜಿಲೆಂಡ್	15	7	7	-	1
ಮೇರಿ ಮೂರ್	ಐರ್ಲೆಂಡ್	15	4	11	-	-

ಭಾನುವಾರದ ಉಷ್ಣಾಂಶ 32° ಗರಿಷ್ಠ 19° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ. ನಂತರ, ಶುಭ್ರ ಆಕಾಶ

ಹವಾಮಾನ	ಸೋಮವಾರ	ಮಂಗಳವಾರ	ಬುಧವಾರ
	34° 19°	34° 20°	34° 20°

ಸೂರ್ಯೋದಯ: 6:29 ಸೂರ್ಯಾಸ್ತ : 6:30 ಚಂದ್ರೋದಯ: ಮ. 1:28 ಚಂದ್ರಾಸ್ತ: ರಾ. 1:28

ಶನಿವಾರದ ಹವಾಮಾನ : ಗರಿಷ್ಠ 33° ಕನಿಷ್ಠ 18°

ಪ್ರಜಾವಾಣಿ

ಸುಪ್ರೀಂ ಕೋರ್ಟ್ ವಕೀಲ ಪ್ರಶಾಂತ ಭೂಷಣ್

‘ಜನಾಭಿಪ್ರಾಯ ಬದಲು-ಕಾರ್ಯತಂತ್ರ ಅಗತ್ಯ’

ಪ್ರಜಾವಾಣಿ ಚಿತ್ರ



ನಗರದಲ್ಲಿ ಶನಿವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್ ವಕೀಲ ಪ್ರಶಾಂತ್ ಭೂಷಣ್ ಮಾತನಾಡಿದರು. ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಜನಾಂದೋಲನ ಮಹಾಮೈತ್ರಿ ಜಾಥಾ ಸಂಚಾಲಕ ಎಸ್.ಆರ್. ಹಿರೇಮಠ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಆರ್ಥಿಕತೆಯನ್ನು ನಾಶ ಮಾಡಿ, ನಿರುದ್ಯೋಗ ಹೆಚ್ಚಿಸಿರುವ ಕೇಂದ್ರ ಸರ್ಕಾರ ಸುಳ್ಳುಗಳ ಮೂಲಕವೇ ಜನರ ಮೇಲೆ ಪ್ರಭಾವ ಬೀರುತ್ತಿದೆ. ಹೀಗಾಗಿ, ಜನರ ಅಭಿಪ್ರಾಯಗಳನ್ನು ಬದಲಾಯಿಸುವ ನಿಟ್ಟಿನಲ್ಲಿ ಕಾರ್ಯತಂತ್ರ ರೂಪಿಸುವ ಅಗತ್ಯವಿದೆ’ ಎಂದು ಸುಪ್ರೀಂ ಕೋರ್ಟ್ ವಕೀಲ ಪ್ರಶಾಂತ ಭೂಷಣ್ ಹೇಳಿದರು.

ಜನಾಂದೋಲನ ಮಹಾಮೈತ್ರಿ ನಗರದಲ್ಲಿ ಶನಿವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ರಾಜಕೀಯ ವಿಷಯಗಳಲ್ಲಿ ನಾವು ಕ್ರಿಯಾಶೀಲರಾಗಬೇಕು. ರಾಜಕೀಯವಾಗಿ ಪ್ರಭಾವ ಬೀರಬೇಕು. ಆದರೆ, ಯಾವುದೇ ರಾಜಕೀಯ ಪಕ್ಷದ ಭಾಗವಾಗಬಾರದು ಮತ್ತು ಗುರುತಿಸಿಕೊಳ್ಳಬಾರದು’ ಎಂದು ವಿವರಿಸಿದರು.

‘ದೇಶದಲ್ಲಿ ನೂರಾರು ಸಮಸ್ಯೆಗಳಿದ್ದರೂ ಪ್ರಮುಖವಾಗಿರುವ ಅಂಶಗಳಿಗೆ ಆದ್ಯತೆ ನೀಡಬೇಕು. ನಿರುದ್ಯೋಗದಂತಹ ಪ್ರಮುಖ ವಿಷಯಗಳಿಗೆ ಆದ್ಯತೆ ನೀಡಿದರೆ ಗಮನ ಸೆಳೆಯಲು ಸಾಧ್ಯ. ಹೀಗಾಗಿ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟನಲ್ಲಿ ಭಾರತಕ್ಕೆ ಮುನ್ನೋಟ ಎನ್ನುವ ಕಲ್ಪನೆಯೊಂದಿಗೆ ಹೋರಾಟ ನಡೆಸಬೇಕಾಗಿದೆ’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಷಾ ಇಡೀ ವ್ಯವಸ್ಥೆಯನ್ನೇ ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ಸರ್ಕಾರಿ ಆಸ್ತಿಗಳನ್ನು ನಗದೀಕರಣ ಮಾಡಲಾಗುತ್ತಿದೆ. ಖಾಸಗಿ ಕ್ಷೇತ್ರವನ್ನು ಕಡೆಗಣಿಸುವ ಅಗತ್ಯ ಇಲ್ಲ. ಆದರೆ, ಸರ್ಕಾರಿ ಸ್ವಾಮ್ಯದ ಕಂಪನಿಗಳು ಮತ್ತು ಸಂಸ್ಥೆಗಳನ್ನು ಖಾಸಗಿಯವರಿಗೆ ನೀಡುವುದಕ್ಕೆ ವಿರೋಧವಿದೆ. ಸರ್ಕಾರ ತನ್ನ ಆಪ್ತ ಬಂಡವಾಳಶಾಹಿಗಳಿಗೆ ಸರ್ಕಾರಿ ಸ್ವಾಮ್ಯದ ಕಂಪನಿಗಳನ್ನು ಮಾರಾಟ ಮಾಡುತ್ತಿದೆ’ ಎಂದು ಟೀಕಿಸಿದರು.

‘ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳಿವೆ. ನಿರುದ್ಯೋಗಿಗಳಿಗೆ ಪರಿಹಾರ ನೀಡುವ ಕಾರ್ಯವನ್ನು ಸರ್ಕಾರ ಕೈಗೊಳ್ಳಬೇಕು. ಲಾಕ್‌ಡೌನ್‌ಗಳಿಂದ ಅನುಕೂಲಕ್ಕಿಂತ ಹಾನಿಯಾಗಿದ್ದೇ ಹೆಚ್ಚು’ ಎಂದರು.

15ಕ್ಕೆ ಜಾಥಾ, ಸಮಾವೇಶ

ಕೃಷಿ ಕಾಯ್ದೆಗಳನ್ನು ರಾಜ್ಯ ಸರ್ಕಾರ ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ ಜನಾಂದೋಲನ ಮಹಾಮೈತ್ರಿ ವತಿಯಿಂದ ಇದೇ 15ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಭೂಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ಹಾಗೂ ಜಾನುವಾರು ಹತ್ಯೆ ನಿಷೇಧ ಕಾಯ್ದೆಯನ್ನು ಸರ್ಕಾರ ವಾಪಸ್ ಪಡೆಯುವಂತೆ ಒತ್ತಾಯಿಸಿ ಬಸವ ಕಲ್ಯಾಣದಿಂದ ಬೆಂಗಳೂರುವರೆಗೆ, ಸಾಗರ ತಾಲ್ಲೂಕಿನ ಕಾಗೋಡಿನಿಂದ ಶಿರಾದ ಜುಂಜಪ್ಪನಗುಡ್ಡೆವರೆಗೆ, ಮಹದೇಶ್ವರ ಬೆಟ್ಟದಿಂದ ಬೆಂಗಳೂರಿಗೆ ಜನ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಜನಾಂದೋಲನ ಮಹಾಮೈತ್ರಿ ಜಾಥಾ ಸಂಚಾಲಕ ಎಸ್.ಆರ್. ಹಿರೇಮಠ ತಿಳಿಸಿದರು.



ಅಭಿಮಾನಿಗಳ ಸಂಭ್ರಮ ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕನ ಹೆಸರು ಘೋಷಿಸುವ ಕಾರ್ಯಕ್ರಮದ ನಂತರ ತಂಡದ ಅಭಿಮಾನಿಗಳು ಚರ್ಚ್ ಸ್ಟ್ರೀಟ್‌ನಲ್ಲಿ ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ

ಸುದ್ದಿ 07


ಮೊಯಿಲಿ ಅವರ ‘ನನ್ನ ಬೊಗಸೆಯ ಆಕಾಶ’ ಆತ್ಮ ಕಥನ ಬಿಡುಗಡೆ

‘ಸಿಇಟಿಯಿಂದಾಗಿ ನೀಟ್ ಬಂತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ಇಡೀ ದೇಶದಲ್ಲಿ ಮೊದಲ ಬಾರಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ವ್ಯವಸ್ಥೆ ಜಾರಿಗೆ ತಂದಿದ್ದು ಎಂ.ವೀರಪ್ಪ ಮೊಯಿಲಿ ಅವರು’ ಎಂದು ಕಾಂಗ್ರೆಸ್ ಶಾಸಕ ಡಾ.ಜಿ.ಪರಮೇಶ್ವರ ಹೇಳಿದರು.

ಸಪ್ನ ಬುಕ್ ಹೌಸ್ ನಗರದಲ್ಲಿ ಶನಿವಾರ ಏರ್ಪಡಿಸಿದ್ದ ಎಂ.ವೀರಪ್ಪ ಮೊಯಿಲಿ ಅವರ ಆತ್ಮ ಕಥನ ‘ನನ್ನ ಬೊಗಸೆಯ ಆಕಾಶ’ ಬಿಡುಗಡೆ ಮಾಡಿ ಮಾತನಾಡಿದ ಅವರು, ‘ಉನ್ನತ ಶಿಕ್ಷಣ ಸಚಿವರಾಗಿದ್ದ ವೇಳೆ ವೈದ್ಯಕೀಯ ವಿದ್ಯಾರ್ಥಿಯೊಬ್ಬನ ಆತ್ಮಹತ್ಯೆ ಪ್ರಕರಣ ಮೊಯಿಲಿ ಅವರ ಮನಸನ್ನು ಘಾಸಿಗೊಳಿಸಿತ್ತು. ಸಿಇಟಿ ಜಾರಿಗೆ ತರುವ ಚಿಂತನೆಯನ್ನು ಅವರು ಮಾಡಿದರು.



‘ನನ್ನ ಬೊಗಸೆಯ ಆಕಾಶ’ ಆತ್ಮ ಕಥನದ ಮೊದಲ ಪ್ರತಿಯನ್ನು ವೀರಪ್ಪ ಮೊಯಿಲಿ ಅವರು ಪತ್ನಿ ಮಾಲತಿ ಮೊಯಿಲಿ ಅವರಿಗೆ ನೀಡಿದರು –ಪ್ರಜಾವಾಣಿ ಚಿತ್ರ

‘ಬಳಿಕ ಈ ರೀತಿಯ ಪರೀಕ್ಷೆ ದೇಶದೆಲ್ಲೆಡೆ ಜಾರಿಗೆ ಬಂತು. ‘ನೀಟ್’ ಅದರ ಮುಂದುವರಿದ ಭಾಗ. ಬಡವರ ಮಕ್ಕಳು ಕೂಡ ಎಂಜಿನಿಯರ್ ಮತ್ತು ವೈದ್ಯರಾಗಲು ಸಾಧ್ಯವಾಯಿತು’ ಎಂದರು.

‘ಮುಖ್ಯಮಂತ್ರಿ ಆಗಿದ್ದ ಎರಡೂವರೆ ವರ್ಷಗಳ ಅವಧಿಯಲ್ಲೇ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿಗೆ, ಮಾಹಿತಿ ತಂತ್ರಜ್ಞಾನದ ಕ್ರಾಂತಿಗೆ ಅಡಿಗಲ್ಲು ಹಾಕಿದವರು ಮೊಯಿಲಿ. ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಯೋಜನೆ ರೂಪಿಸಿದ್ದರು. ಚುನಾವಣೆ ನೀತಿ ಸಂಹಿತೆ ಜಾರಿಯಾಗಿದ್ದರಿಂದ ಶಂಕುಸ್ಥಾಪನೆ ನೆರವೇರಿಸಲು ಚುನಾವಣಾ ಆಯೋಗ ಅವರಿಗೆ ಅವಕಾಶ ಕೊಡಲಿಲ್ಲ. ಈಗ ಬೇರೆ ನಾಯಕರು ತಮ್ಮ ಸಾಧನೆ ಎಂದು ಹೇಳಿಕೊಳ್ಳುತ್ತಿದ್ದಾರೆ’ ಎಂದು ಹೇಳಿದರು.

> **ಭೂಸುಧಾರಣಾ ಕಾಯ್ದೆ ಜಾರಿಗೆ ತರಬೇಕೆಂದರೆ ಕಾರ್ಕಳ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂಬ ಷರತ್ತನ್ನು ದೇವರಾಜ ಅರಸು ವಿಧಿಸಿದ್ದರು. ಇದರಿಂದ ದೊಡ್ಡ ಮಟ್ಟಕ್ಕೆ ಬೆಳೆದೆ**
> **ಎಂ. ವೀರಪ್ಪ ಮೊಯಿಲಿ**
> ಕಾಂಗ್ರೆಸ್ ಮುಖಂಡ

ಪುಸ್ತಕದ ಕುರಿತು ಮಾತನಾಡಿದ ವಿಮರ್ಶಕ ಪ್ರೊ.ಸಿ.ಎನ್. ರಾಮಚಂದ್ರನ್, ‘ಮೊಯಿಲಿ ಅವರ ಈ ಆತ್ಮಕಥನವು ಅವರು ಬದುಕಿನ ಮೂರು ಆಯಾಮಗಳನ್ನು ತೆರೆದಿಡುತ್ತದೆ. ಅಲಕ್ಷಿತ ಸಮುದಾಯಗಳ ಬಗ್ಗೆ ಅವರಿಗೆ ಎಷ್ಟು ಕಾಳಜಿ ಇತ್ತು ಎಂಬುದು ಅರ್ಥವಾಗುತ್ತದೆ’ ಎಂದರು.

ಶಿಕ್ಷಣ ತಜ್ಞ ಕೆ.ಈ.ರಾಧಾಕೃಷ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾಂಗ್ರೆಸ್ ಮುಖಂಡ ಕೆ.ರೆಹಮಾನ್ ಖಾನ್, ನಿಟ್ಟೆ ಮೀನಾಕ್ಷಿ ತಾಂತ್ರಿಕ ಶಿಕ್ಷಣ ಸಂಸ್ಥೆಯ ಗೌರವ ಸಲಹೆಗಾರ ಎನ್. ಆರ್.ಶೆಟ್ಟಿ, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಕೆ.ಆರ್.ಕಮಲೇಶ್, ಸಪ್ನ ಬುಕ್ ಹೌಸ್‌ನ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಶಾ ಇದ್ದರು.

ಇದೆಲ್ಲವನ್ನೂ ಆತ್ಮ ಕಥನದಲ್ಲಿ ಮೊಯಿಲಿ ಅವರು ದಾಖಲಿಸಿದ್ದಾರೆ’ ಎಂದರು.



ಭಾರತ ಹಾಗೂ ಶ್ರೀಲಂಕಾ ತಂಡಗಳ ಮಧ್ಯೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯ ವೀಕ್ಷಿಸಲು ಶುಕ್ರವಾರ ಬಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕ್ರಿಕೆಟಿಗರಾದ ಬ್ರಿಜೇಶ್ ಪಟೇಲ್ ಹಾಗೂ ಕಪಿಲ್‌ದೇವ್ ಜತೆ ಸಮಾಲೋಚಿಸಿದರು

ಸಂಕ್ಷಿಪ್ತ ಸುದ್ದಿ

‘1,300 ಉಕ್ರೇನ್ ಸೈನಿಕರ ಸಾವು’

ಕೀವ್ (ಎಪಿ): ಉಕ್ರೇನ್ ಮೇಲೆ ರಷ್ಯಾ ಪಡೆಗಳು ದಾಳಿ ಮಾಡಲು ಆರಂಭಿಸಿದಾಗಿನಿಂದ ಉಕ್ರೇನ್‌ನ ಸುಮಾರು 1,300 ಸೈನಿಕರು ಮೃತಪಟ್ಟಿದ್ದಾರೆ ಎಂದು ಅಧ್ಯಕ್ಷ ವೊಲಾಡಿಮಿರ್ ಝೆಲೆನ್‌ಸ್ಕಿ ಶನಿವಾರ ಹೇಳಿದ್ದಾರೆ.

ಉಕ್ರೇನ್‌ನ ರಾಜಧಾನಿಯ ನಾಗರಿಕರನ್ನು ಕೊಂದು, ನಗರವನ್ನು ವಶಪಡಿಸಿಕೊಳ್ಳುವುದು ರಷ್ಯಾದ ಗುರಿಯಾಗಿದ್ದರೆ ಅವರು ಅದನ್ನೇ ಮಾಡಲಿ’ ಎಂದು ಹೇಳಿದರು.

579 ನಾಗರಿಕರ ಸಾವು

ಜಿನೆವಾ (ಎಪಿ): ಯುದ್ಧ ಆರಂಭವಾದಾಗಿನಿಂದ ಇದುವರೆಗೆ ಸುಮಾರು 579 ನಾಗರಿಕರು ಮೃತಪಟ್ಟಿದ್ದಾರೆ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಉನ್ನತ ಆಯೋಗವು ಶನಿವಾರ ತಿಳಿಸಿದೆ.

1,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಮೃತರಲ್ಲಿ 42 ಮಕ್ಕಳು ಸೇರಿದ್ದಾರೆ. 54 ಮಕ್ಕಳು ಗಾಯಗೊಂಡಿದ್ದಾರೆ. ದಾಖಲಾಗಿರುವ ಸಾವುಗಳು ಭಾರಿ ಸ್ಫೋಟಕಗಳನ್ನು ಬಳಸಿರುವುದರಿಂದ ಸಾವು ಸಂಭವಿಸಿವೆ.

ಪ್ರಧಾನಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ: ಶಿಕ್ಷಕ ಅಮಾನತು

ಪ್ರಯಾಗರಾಜ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪದಲ್ಲಿ ಸಹ ಶಿಕ್ಷಕರೊಬ್ಬರನ್ನು ಶುಕ್ರವಾರ ಅಮಾನತು ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಹರಿಯಾ ಪಟ್ಟಣದ ಶಿಕ್ಷಕ ಅಜಿತ್ ಯಾದವ್ ಅಮಾನತುಗೊಂಡವರು.

ಆನೇಕಲ್ ಟಿಕೆಟ್ ಕೊಡಿ: ಶಿವರಾಮ್

ಚಿತ್ರದುರ್ಗ: ಆನೇಕಲ್ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿಯಿಂದ ಟಿಕೆಟ್ ಕೊಡಿಸುವಂತೆ ನಿವೃತ್ತ ಐಎಎಸ್ ಅಧಿಕಾರಿ ಡಾ.ಕೆ.ಶಿವರಾಮ್ ಅವರು ಕೇಂದ್ರ ಸಚಿವ ಎ.ನಾರಾಯಣಸ್ವಾಮಿಗೆ ಬಹಿರಂಗವಾಗಿ ಮನವಿ ಮಾಡಿದರು.

‘ಕಾಂಗ್ರೆಸ್ ಸದಸ್ಯತ್ವ ನೋಂದಣಿಗೆ ನಿರಾಸಕ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸದಸ್ಯತ್ವ ನೋಂದಣಿಗೆ ಯುವ ಕಾಂಗ್ರೆಸ್ ಮುಖಂಡರು ನಿರಾಸಕ್ತಿ ತೋರುತ್ತಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘2,000 ಸದಸ್ಯರನ್ನು ನೋಂದಾಯಿಸಿದ್ದೇವೆ ಎಂದು ಹೇಳುವುದು ನಿಮ್ಮ ಸಾಮರ್ಥ್ಯಕ್ಕೆ ನಾಚಿಕೆ ತರುವಂತಹದ್ದು’ ಎಂದರು.

ನಗರದಲ್ಲಿ ಶನಿವಾರ ನಡೆದ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ‘ನೀವು ಯುವ ಕಾಂಗ್ರೆಸ್ ಅಧ್ಯಕ್ಷರಾಗಲು 80 ಸಾವಿರದಿಂದ ಒಂದು ಲಕ್ಷದವರೆಗೆ ಸದಸ್ಯತ್ವ ನೋಂದಣಿ ಮಾಡಿಸುತ್ತೀರಿ. ಕಾಂಗ್ರೆಸ್ ಪಕ್ಷದ ಸದಸ್ಯತ್ವ ನೋಂದಣಿಯಲ್ಲಿ ಅದರ ಅರ್ಧದಷ್ಟನ್ನಾದರೂ ಮಾಡಲು ಸಾಧ್ಯವಿಲ್ಲವೆ’ ಎಂದು ಪ್ರಶ್ನಿಸಿದರು.

‘ಇದು ನೀವು ಪಕ್ಷಕ್ಕಾಗಿ ಮಾಡುವ ಕೆಲಸ. ಬರಿ ಮಾತನಾಡಿದರೆ ನಾನು ಒಪ್ಪುವುದಿಲ್ಲ. ಸದಸ್ಯತ್ವ ನೋಂದಣಿ ಮೂಲಕ ನಿಮ್ಮ ನಾಯಕತ್ವ ಗುಣವನ್ನು ಸಾಬೀತುಪಡಿಸಿ. ಕಾಂಗ್ರೆಸ್ ಪಕ್ಷಕ್ಕೆ 50 ಸಾವಿರ ಸದಸ್ಯರನ್ನು ನೋಂದಣಿ ಮಾಡಿಸುವ ಯುವ ಕಾಂಗ್ರೆಸ್ ಸಮಿತಿಯ ಸದಸ್ಯರೊಬ್ಬರಿಗೆ ಕೆಪಿಸಿಸಿ ಕಾರ್ಯದರ್ಶಿ ಹುದ್ದೆ ನೀಡಲಾಗುವುದು’ ಎಂದು ಪ್ರಕಟಿಸಿದರು.

ಸದಸ್ಯತ್ವ ನೋಂದಣಿಯ ಜತೆಯಲ್ಲೇ ಮತದಾರರ ನೋಂದಣಿಯಲ್ಲೂ ಪಕ್ಷದ ಸದಸ್ಯರು ಸಕ್ರಿಯರಾಗಬೇಕು. ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳನ್ನು ಸಂಪರ್ಕಿಸಿ ಸರ್ಕಾರದ ಪರಿಹಾರಕ್ಕೆ ಅರ್ಜಿ ಹಾಕಿಸಬೇಕು. ಈ ವಿಚಾರದಲ್ಲಿ ಸಕ್ರಿಯರಾಗದೇ ಇದ್ದರೆ ಕ್ರಮ ನಿಶ್ಚಿತ. ಪಕ್ಷದ ಸಂಘಟನೆಯಲ್ಲಿ ಚುನಾಯಿತ ಪ್ರತಿನಿಧಿಗಳಿದ್ದರೂ ಕಿತ್ತು ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.



ಡಿ.ಕೆ. ಶಿವಕುಮಾರ್

ನಿರುದ್ಯೋಗಿಗಳ ಪರ ಹೋರಾಟ: ದೇಶದಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚುತ್ತಿದೆ. ಅದರ ವಿರುದ್ಧ ನಿರುದ್ಯೋಗಿಗಳನ್ನೇ ಸಂಘಟಿಸಿ ಹೋರಾಟ ನಡೆಸಬೇಕು. ಇನ್ನು ಒಂದು ತಿಂಗಳ ಕಾಲ ಎಲ್ಲ ಕ್ಷೇತ್ರಗಳಲ್ಲೂ ನಿರುದ್ಯೋಗಿಗಳ ಮಾಹಿತಿಯನ್ನು ಸಂಗ್ರಹಿಸಿ, ದಾಖಲಿಸುವ ಕೆಲಸವನ್ನು ಪಕ್ಷದ ಕಾರ್ಯಕರ್ತರು ಮಾಡಬೇಕು ಎಂದು ಶಿವಕುಮಾರ್ ಸೂಚಿಸಿದರು.

‘ಮುಂದಿನ ದಿನಗಳಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕನಿಷ್ಠ 5,000 ನಿರುದ್ಯೋಗಿಗಳನ್ನು ಸಂಘಟಿಸಿ ಹೋರಾಟ ನಡೆಸುವ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು. 200 ಕ್ಷೇತ್ರಗಳಲ್ಲಿ ಹೋರಾಟ ಮಾಡಿದರೂ 10 ಲಕ್ಷ ಮಂದಿ ನಿರುದ್ಯೋಗಿಗಳನ್ನು ತಲುಪಲು ಸಾಧ್ಯವಾಗುತ್ತದೆ’ ಎಂದು ಸಲಹೆ ನೀಡಿದರು.

ಶಾಸಕಿ ಸೌಮ್ಯಾ ರೆಡ್ಡಿ, ರಾಷ್ಟ್ರೀಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, ರಾಜ್ಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮೊಹಮ್ಮದ್ ನಲಪ್ಪಾಡ್ ಹ್ಯಾರಿಸ್, ಮುಖಂಡ ನಿಕೇತ್ ರಾಜ್ ಮೌರ್ಯ ಇದ್ದರು.

‘ಜಸ್ಟಿಸ್’ ಐಎಎಸ್: ನೋಂದಣಿಗೆ ಆಹ್ವಾನ

ಬೆಂಗಳೂರು: ಜೆಎಸ್‌ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆಯು (ಜಸ್ಟಿಸ್) ಪ್ರಸಕ್ತ ವರ್ಷಕ್ಕೆ ‘ಐಎಎಸ್ ಅಭ್ಯಾಸ’ ಕಾರ್ಯಕ್ರಮ ಆರಂಭಿಸಿದೆ.

ಯುಪಿಎಸ್‌ಸಿಯ ಪೂರ್ವಭಾವಿ ಪರೀಕ್ಷೆಗೆ ತರಬೇತಿ ದೊರೆಯಲಿದೆ. ಅಭ್ಯರ್ಥಿಗಳು ನೋಂದಣಿಗೆ 9845055718 ಇ–ಮೇಲ್: jsstc@gmail.com ಮೂಲಕ ಸಂಪರ್ಕಿಸಬಹುದು.

ವಿಳಾಸ: ಜೆಎಸ್‌ಎಸ್ ಕಾಲೇಜು ಕ್ಯಾಂಪಸ್, 2ನೇ ಮಹಡಿ, 38ನೇ ಅಡ್ಡರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು.

ಅರಕೆರೆ ಗ್ರಾ.ಪಂ: ಲಕ್ಷ್ಮೀನಾರಾಯಣಗೌಡ ಅಧ್ಯಕ್ಷ

ಯಲಹಂಕ: ಹೆಸರಘಟ್ಟ ಹೋಬಳಿ ಅರಕೆರೆ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಲಕ್ಷ್ಮೀನಾರಾಯಣಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.ಈ ಹಿಂದೆ ಅಧ್ಯಕ್ಷರಾಗಿದ್ದ ಕೆ.ಆರ್.ತಿಮ್ಮೇಗೌಡ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ



ಆಯ್ಕೆ ಪ್ರಕ್ರಿಯೆ ನಡೆಯಿತು. ಒಟ್ಟು 22 ಜನ ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ಸಾಮಾನ್ಯ ವರ್ಗಕ್ಕೆ ಅಧ್ಯಕ್ಷ ಸ್ಥಾನ ಮೀಸಲಾಗಿತ್ತು.

ನಗರದಲ್ಲಿ ಇಂದು

‘ರನ್ ಫಾರ್ ಸೈಟ್’ ಓಟ: ಆಯೋಜನೆ ಮತ್ತು ಸ್ಥಳ–ನಾರಾಯಣ ನೇತ್ರಾಲಯ, ಇಂದಿರಾನಗರ, ಬೆಳಿಗ್ಗೆ 6

ಮಹಿಳಾ ದಿನ: ಅತಿಥಿಗಳು–ಶಾಸಕರಾದ ರಾಮಲಿಂಗಾರೆಡ್ಡಿ, ಸೌಮ್ಯಾರೆಡ್ಡಿ, ಆಯೋಜನೆ–ಕವಿತಾ ಕಲ್ಪತರು ಟ್ರಸ್ಟ್, ಸ್ಥಳ–ಸುದ್ದಗುಂಟೆ ಪಾಳ್ಯ ಮೈದಾನ, ಸುದ್ದಗುಂಟೆ ಪಾಳ್ಯ ಉದ್ಯಾನದ ಹತ್ತಿರ, ಬೆಳಿಗ್ಗೆ 9

ಮಹಿಳೆಯರಿಂದ ಬೈಕ್ ರ‍್ಯಾಲಿ (ಬೆಳಿಗ್ಗೆ 8ಕ್ಕೆ): ಉದ್ಘಾಟನೆ–ಸಚಿವ ಬಿ.ಶ್ರೀರಾಮುಲು, ಅತಿಥಿಗಳು–ಅಶೋಕ ಹಾರನಹಳ್ಳಿ, ವಿಜಯಲಕ್ಷ್ಮಿ ಬಾಳೆಕುಂದ್ರಿ, ಸ್ಥಳ–ಶಂಕರ ಮಠದ ಮುಂಭಾಗ, ಚಾಮರಾಜಪೇಟೆ, ಮಧ್ಯಾಹ್ನ 3ಕ್ಕೆ ವಿಪ್ರ

ಸ್ತ್ರೀರತ್ನ ಸನ್ಮಾನ: ಉದ್ಘಾಟನೆ–ಅಶೋಕ ಹಾರನಹಳ್ಳಿ, ಅಧ್ಯಕ್ಷತೆ–ರೂಪಾಶಾಸ್ತ್ರಿ, ಅತಿಥಿಗಳು–ಮಾಳವಿಕ ಅವಿನಾಶ್, ಹೇಮಲತಾ ಗೋಪಾಲಯ್ಯ, ಮೇದಿನಿ ಉದಯ್ ಗರುಡಾಚಾರ್, ಆಯೋಜನೆ–ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ಘಟಕ, ಸ್ಥಳ–ಗಾಯನ ಸಮಾಜ, ಕೆ.ಆರ್.ರಸ್ತೆ.

ಉಚಿತ ದಂತ ಪರೀಕ್ಷೆ ಶಿಬಿರ: ಉದ್ಘಾಟನೆ–ಸತ್ಯಪ್ರಸಾದ್, ಆಯೋಜನೆ–ಉದಯಭಾನು ಕಲಾ ಸಂಘ, ನಾರಾಯಣ ನೇತ್ರಾಲಯ, ಸ್ಥಳ–ಸಂಘದ ಆವರಣ, ಕೆಂಪೇಗೌಡ ನಗರ, ಬಸವನಗುಡಿ ರಸ್ತೆ, ಬೆಳಿಗ್ಗೆ 10ರಿಂದ

ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನದ ಉದ್ಘಾಟನೆ ಮತ್ತು ಉಪನ್ಯಾಸ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ–ಬಿ.ಎಂ. ಹನೀಫ್, ಅತಿಥಿಗಳು–ಎಂ.ಎಸ್.ಆಶಾದೇವಿ, ಕವಿಗೋಷ್ಠಿ ಅಧ್ಯಕ್ಷತೆ–ಎಚ್.ಎಲ್.ಪುಷ್ಪ, ಭಾಗವಹಿಸುವವರು–ಕೆ.ಷರೀಫಾ, ಚಿಂತಾಮಣಿ ಕೊಡ್ಲೆಕೆರೆ, ಸುಬ್ಬು ಹೊಲೆಯಾರ್, ದು.ಸರಸ್ವತಿ, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಕೆ.ಎನ್.ಗಣೇಶಯ್ಯ ಅವರ ‘ಕಾನನ ಜನಾರ್ದನ’ ಪುಸ್ತಕ ಬಿಡುಗಡೆ: ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ, ಅತಿಥಿಗಳು–ನಾಗೇಶ ಹೆಗಡೆ, ಬೈರಮಂಗಲ ರಾಮೇಗೌಡ, ಆಯೋಜನೆ–ಅಂಕಿತ ಪುಸ್ತಕ, ಸ್ಥಳ–ಸಿ.ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಮನೋನಂದನ ಕೇಂದ್ರ ರಜತ ಮಹೋತ್ಸವ: ಅತಿಥಿಗಳು–ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಸಚಿವ ಹಾಲಪ್ಪ ಆಚಾರ್, ವಿ.ಕಾರ್ತಿಕ್, ಸಂಸದ ತೇಜಸ್ವಿ ಸೂರ್ಯ, ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ, ಬಿ.ಎಸ್.ಸತ್ಯನಾರಾಯಣ, ನಾರಾಯಣ ರಾವ್ ಮಾನೆ, ಸುರೇಶ್, ಎಂ.ಕೆ.ಶ್ರೀಧರ್, ಸ್ಮರಣ ಸಂಚಿಕೆ ಬಿಡುಗಡೆ–ಕುಸುಮಾ ಭಟ್ಟ, ಸ್ಥಳ–ಬಿಎನ್‌ಎಂ ಸಭಾಂಗಣ, ಬಿಎನ್‌ಎಂ ಶಿಕ್ಷಣ ಸಂಸ್ಥೆಗಳು, ಬನಶಂಕರಿ 2ನೇ ಹಂತ, ಬೆಳಿಗ್ಗೆ 10.30

ಕ್ಯಾಪ್ಟನ್ ರಾಮದಾಸ್ ಮಂಜೇಶ್ವರ್ ಕಾಮತ್ ಅವರ ‘ಶಕು’ ಪುಸ್ತಕ ಬಿಡುಗಡೆ: ಅತಿಥಿಗಳು–ರೇಖಾ ಶರ್ಮ, ಪ್ರಮೀಳಾ ನಾಯ್ಡು, ಶಕುಂತಲಾ ಅಜಿತ್ ಭಂಡಾರ್ಕರ್, ಚಿತ್ರಾದೇವಿ, ಸಿಪಾಯ್ ಅನಸೂಯ ಪ್ರಸಾದ್, ವಿನಯ ಹೆಗ್ಡೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 11

ಚನ್ನವೀರ ಕಣವಿ ಸಂಸ್ಮರಣೆ: ಭಾಷಣ–ಎಚ್.ಎಸ್. ಸತ್ಯನಾರಾಯಣ, ಆಯೋಜನೆ–ಶಿವರಾಮ ಕಾರಂತ ವೇದಿಕೆ ಮತ್ತು ತರಳಬಾಳು ಕೇಂದ್ರ, ಸ್ಥಳ–ತರಳಬಾಳು ಗ್ರಂಥಾಲಯ, ಆರ್.ಟಿ.ನಗರ, ಸಂಜೆ 4

ಕೃತಿಕ ಶ್ರೀನಿವಾಸನ್ ತಂಡದಿಂದ ಶಾಸ್ತ್ರೀಯ ಸಂಗೀತ: ಆಯೋಜನೆ ಮತ್ತು ಸ್ಥಳ–ಬಿಎಂಶ್ರೀ ಪ್ರತಿಷ್ಠಾನ, ಎನ್.ಆರ್.ಕಾಲೊನಿ, ಸಂಜೆ 4.30

‘ಸಂಕ್ರಮಣ–22’ ಸಾಂಸ್ಕೃತಿಕ ಉತ್ಸವ: ಉದ್ಘಾಟನೆ–ಆನೂರು ಅನಂತಕೃಷ್ಣಶರ್ಮ, ಆಯೋಜನೆ–ಮಂಜುಳಾ ಪರಮೇಶ್, ಸಪ್ತಸ್ವರ ಆರ್ಟ್ ಮತ್ತು ಕ್ರಿಯೇಷನ್ಸ್, ಸ್ಥಳ–ಸಂಸ ಬಯಲು ರಂಗಮಂದಿರ, ಸಂಜೆ 5.45

ಭಾವಾಂತರಂಗ ನಾಟಕೋತ್ಸವ ಸಮಾರೋಪ: ಅತಿಥಿಗಳು–ಟಿ.ಎಸ್.ನಾಗಾಭರಣ, ಬಿ.ವಿ.ರಾಜಾರಾಂ, ಕೆ.ವಿ.ನಾಗರಾಜಮೂರ್ತಿ, ನಾಟಕ–ಮೂಕಜ್ಜಿಯ ಕನಸುಗಳು, ಆಯೋಜನೆ–ಭಾಗವತರು, ಸ್ಥಳ–ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.45ರಿಂದ

‘ಚಾಂಡಾಲಿಕ’ ಜನಪದ ನೃತ್ಯ ನಾಟಕ: ಅತಿಥಿಗಳು–ಬರಗೂರು ರಾಮಚಂದ್ರಪ್ಪ, ಅಶೋಕ್ ಛಲವಾದಿ, ಡಿ.ಎಸ್.ವೀರಯ್ಯ, ಆಯೋಜನೆ–ನೂಪುರ ಫೈನ್‌ಆರ್ಟ್ಸ್ ಅಕಾಡೆಮಿ, ಸ್ಥಳ–ನಯನ ಸಭಾಂಗಣ, ಜೆ.ಸಿ.ರಸ್ತೆ, ಸಂಜೆ 6

ವಚನ ಕಲಿಕಾ ಶಿಬಿರ: ಉದ್ಘಾಟನೆ–ಎಸ್.ಪಿನಾಕಪಾಣಿ, ಅತಿಥಿಗಳು–ಡಿ.ಚನ್ನಮಲ್ಲಯ್ಯ, ಆಯೋಜನೆ–ವಚನ ಜ್ಯೋತಿ ಬಳಗ, ಸ್ಥಳ–ಬೆಳಕು, ಕೆಸಿಎಚ್‌ಎಸ್ ಬಡಾವಣೆ, ದೊಡ್ಡಬಸ್ತಿ ರಸ್ತೆ, ಸಂಜೆ 6

‘ಕಪರ್ದಿನಿ’ ನೃತ್ಯ ಹಬ್ಬ: ನೃತ್ಯ ಪ್ರದರ್ಶನ–ಸತ್ಯನಾರಾಯಣ ರಾಜು, ನಿರುಪಮಾ ಮತ್ತು ರಾಜೇಂದ್ರ, ಮಧುಲಿತ ಮೊಹಾಪಾತ್ರ, ದರ್ಶನ್ ಶಂಕರ್, ಆಯೋಜನೆ–ಕಪರ್ದಿನಿ ನೃತ್ಯ ಶಾಲೆ, ಸ್ಥಳ–ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 5.30



ಮಧುಲಿತ ಮೊಹಾಪಾತ್ರ

ಗಿರಿಜಮ್ಮ ಪ್ರಶಸ್ತಿಗೆ ಕೃತಿ ಆಹ್ವಾನ

ಬೆಂಗಳೂರು: ಡಾ.ಎಚ್.ಗಿರಿಜಮ್ಮ ಸ್ನೇಹ ಬಳಗವು ಈ ವರ್ಷದಿಂದ 'ಗಿರಿಜಮ್ಮ ಸಾಹಿತ್ಯ ಪ್ರಶಸ್ತಿ' ಆರಂಭಿಸಿದ್ದು, ಇದಕ್ಕಾಗಿ ಮಹಿಳಾ ವೈದ್ಯರಿಂದ ಕೃತಿಗಳನ್ನು ಆಹ್ವಾನಿಸಿದೆ.

'2021ರ ಜನವರಿಯಿಂದ ಡಿಸೆಂಬರ್‌ನಲ್ಲಿ ಪ್ರಕಟವಾದ ಆರೋಗ್ಯ, ಕಥಾಸಂಕಲನ, ಕಾದಂಬರಿ, ಪ್ರವಾಸ ಕಥನಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಪ್ರಶಸ್ತಿ ₹25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿರಲಿದೆ' ಎಂದು ಪ್ರಕಟಣೆ ತಿಳಿಸಿದೆ. ಆಸಕ್ತ ವೈದ್ಯೆಯರು ಕೃತಿಯ ಎರಡು ಪ್ರತಿಗಳನ್ನು 'ನಂ.222, 2ನೇ 'ಇ' ತಿರುವು, 3ನೇ ಬ್ಲಾಕ್, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು–560079' ಈ ವಿಳಾಸಕ್ಕೆ ಇದೇ 31ರೊಳಗೆ ಕಳುಹಿಸಬೇಕು.

ಪಿಎಚ್‌.ಡಿ ಪದವಿ



ಪ್ರೇಮಕುಮಾರ್

ಬೆಂಗಳೂರು: ಮೇಲು ಕೋಟೆಯ ಪ್ರೇಮ್ ಕುಮಾರ್ ಅವರು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ (ವಿಟಿಯು) ಪಿಎಚ್.ಡಿ ಪದವಿ ಪಡೆದಿದ್ದಾರೆ.

ಎಸ್.ರಮೇಶ್ ಅವರ ಮಾರ್ಗದರ್ಶನದಲ್ಲಿ 'ವೈರ್‌ಲೆಸ್ ಸೆನ್ಸಾರ್ ನೆಟ್‌ವರ್ಕ್‌ಗಳಿಗಾಗಿ ಸಮರ್ಥ ಕೀ ವಿತರಣೆ ಮತ್ತು ನಿರ್ವಹಣಾ ವಿಧಾನ' ವಿಷಯ ಕುರಿತಾಗಿ ಸಂಶೋಧನೆ ಕೈಗೊಂಡಿದ್ದರು.

ಪ್ರೇಮ್ ಕುಮಾರ್ ಪ್ರಸ್ತುತ ಇಂಟೆಲ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನಲ್ಲಿ ಎಂಜಿನಿಯರಿಂಗ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ಅನುದಾನ ತಾರತಮ್ಯ: ರೆಡ್ಡಿ

ಬೆಂಗಳೂರು: ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ದಿನ ದಿಂದಲೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಸರಿಯಾಗಿ ಅನು ದಾನ ನೀಡದೇ ತಾರತಮ್ಯ ಮಾಡ ಲಾಗುತ್ತಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಧ್ಯ ಪ್ರವೇಶಿಸಿ ಅನ್ಯಾಯ ಸರಿಪಡಿಸಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಆಗ್ರಹಿಸಿದರು.

ಶನಿವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ಸರ್ಕಾರ ಬಂದ ಬಳಿಕ ನಗರದ ಬಿಜೆಪಿ ಶಾಸಕರ 15 ಕ್ಷೇತ್ರಗಳಿಗೆ ₹ 9,888 ಕೋಟಿ ಅನುದಾನ ನೀಡಲಾಗಿದೆ. ಕಾಂಗ್ರೆಸ್ ಶಾಸಕರ 12 ಕ್ಷೇತ್ರಗಳಿಗೆ ₹ 2,186.48 ಕೋಟಿ ಮತ್ತು ಜೆಡಿಎಸ್ ಶಾಸಕರ ಒಂದು ಕ್ಷೇತ್ರಕ್ಕೆ ₹ 288.5 ಕೋಟಿ ಅನುದಾನ ನೀಡಲಾಗಿದೆ. ಕಾಂಗ್ರೆಸ್, ಜೆಡಿಎಸ್ ಶಾಸಕರ ಕ್ಷೇತ್ರಗಳಿಗೆ ಹೋಲಿಸಿದರೆ ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ಐದು ಪಟ್ಟು ಹೆಚ್ಚು ಅನುದಾನ ನೀಡಲಾಗಿದೆ ಎಂದು ದೂರಿದರು.



ರಾಮಲಿಂಗಾರೆಡ್ಡಿ

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ₹ 7,200 ಕೋಟಿ ಮತ್ತು ನಂತರ ಬಂದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ₹ 1,000 ಕೋಟಿಯನ್ನು ನಗರದ ವಿವಿಧ ಕ್ಷೇತ್ರಗಳಿಗೆ ಹಂಚಿಕೆ ಮಾಡಲಾಗಿತ್ತು. ಬಿಜೆಪಿ ಸರ್ಕಾರ ಬಂದ ಬಳಿಕ ಈ ಅನುದಾನಗಳನ್ನು ಹಿಂಪಡೆಯಲಾಗಿದೆ. ಬಳಿಕ ಅಮೃತ ನಗರೋತ್ಥಾನ ಯೋಜನೆ ಹೆಸರಿನಲ್ಲಿ ಹಂಚಿಕೆ ಮಾಡಲಾಗಿದೆ. ಈ ವೇಳೆ ತಾರತಮ್ಯ ಮಾಡಲಾಗಿದೆ ಎಂದರು.

ಪಕ್ಷದ ಆಧಾರದಲ್ಲಿ ಅನುದಾನ ಹಂಚಿಕೆ ಮಾಡುವುದು ಸರಿಯಲ್ಲ. ಈ ಅನ್ಯಾಯ ಸರಿಪಡಿಸಲು ಮುಖ್ಯಮಂತ್ರಿಯವರಿಗೆ ಪತ್ರ ಬರೆಯಲಾಗುವುದು. ವಿಧಾನಸಭೆಯಲ್ಲೂ ವಿಷಯ ಪ್ರಸ್ತಾಪಿಸಲಾಗುವುದು ಎಂದು ಹೇಳಿದರು.

ಎತ್ತಿನ ಗಾಡಿಗಳು ಚಲಿಸಲು ಕಷ್ಟವಾಗಿದ್ದ ರಸ್ತೆಗೆ ಸ್ವಂತದ ₹10 ಸಾವಿರ ಖರ್ಚು ಮಾಡಿ ಕಾಯಕಲ್ಪ

‘ಮೇಖ್ರಿ’ ವೃತ್ತಕ್ಕೆ ಅರಬ್ ವರ್ತಕನ ನಂಟು!

• ಸಚ್ಚಿದಾನಂದ ಕುರಗುಂದ



ಬೆಂಗಳೂರು ನಮ್ಮ ಹೆಮ್ಮೆ...

ಬೆಂಗಳೂರಿನ ಮೇಖ್ರಿ ವೃತ್ತದ ನೋಟ. ಪ್ರಜಾವಾಣಿ ಚಿತ್ರ

ಬೆಂಗಳೂರು: ಎತ್ತಿನ ಗಾಡಿಗಳು ಸಂಚಾರ ವ್ಯವಸ್ಥೆಯ ಪ್ರಮುಖವಾಗಿದ್ದ ಸಂದರ್ಭದಲ್ಲಿ ಅರಬ್ ವ್ಯಾಪಾರಿಯೊಬ್ಬರು ದೇಣಿಗೆ ನೀಡಿ ನಿರ್ಮಿಸಿದ್ದ ರಸ್ತೆ ಇದು.

ಇಂದು ನಗರದ ಪ್ರಮುಖ ವೃತ್ತದ ಭಾಗವಾಗಿರುವ ಈ ರಸ್ತೆಯಲ್ಲಿ ಪ್ರತಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಈ ಮಾರ್ಗ ಸದಾ ದಟ್ಟಣೆಯಿಂದ ಕೂಡಿರುತ್ತದೆ. ಉತ್ತರದಿಂದ ದಕ್ಷಿಣ ಮತ್ತು ಪಶ್ಚಿಮ ಮತ್ತು ಪೂರ್ವ ದಿಕ್ಕುಗಳಿಗೆ ಸಂಪರ್ಕ ಕಲ್ಪಿಸುವ ಈ ಮಾರ್ಗವು ಇತಿಹಾಸದ ಪುಟಗಳಲ್ಲಿಯೂ ವಿಶೇಷ ಸ್ಥಾನ.

ಕಡಿದಾಗಿದ್ದ ಈ ಮಾರ್ಗಕ್ಕೆ ಸ್ವಂತ ಹಣದಿಂದ ಕಾಯಕಲ್ಪ ನೀಡಿದವರು ಇನಾಯಿತ್‌ಉಲ್ಲಾ ಮೇಖ್ರಿ ಅವರು. ಹೀಗಾಗಿ, ಅವರ ಹೆಸರನ್ನೇ ಈ ವೃತ್ತಕ್ಕೆ ಇಡಲಾಗಿದೆ. ಇದು ಮೇಖ್ರಿ ಸರ್ಕಲ್ ಎಂದೇ ಜನಜನಿತವಾಗಿದೆ.

ಹೆಬ್ಬಾಳ ಕೆರೆ ಮೂಲಕ ಸಾಗುವ ಈ ಮಾರ್ಗದಲ್ಲಿ ಎತ್ತಿನ ಗಾಡಿಗಳು ಸಾಗಲು ಪ್ರಯಾಸ ಪಡುತ್ತಿದ್ದವು. ಹಲವು ಸಂದರ್ಭಗಳಲ್ಲಿ ರಸ್ತೆಯಲ್ಲೇ ರೈತರ ಗಾಡಿಗಳು ಕುಸಿದು ಬೀಳುತ್ತಿದ್ದವು. ಎತ್ತುಗಳು ಗಾಯಗೊಳ್ಳುತ್ತಿದ್ದವು. ಇದರಿಂದ ಸರಕು ಸಾಗಾಣಿಕೆಗೆ ಮತ್ತು ಜನರ ಪ್ರಯಾಣಕ್ಕೂ ತೊಡಕಾಗಿತ್ತು. ಈ ಮಾರ್ಗದಲ್ಲಿ ಸಾಗುವುದು ಹರಸಾಹಸವಾಗಿತ್ತು. ಈ ಸಮಸ್ಯೆಯನ್ನು ಪ್ರತ್ಯಕ್ಷವಾಗಿ ಕಂಡ ಇನಾಯಿತ್‌ಉಲ್ಲಾ ಮೇಖ್ರಿ ಅವರು 1930ರಲ್ಲಿ ₹10 ಸಾವಿರ ಖರ್ಚು ಮಾಡಿ ರಸ್ತೆಯನ್ನು ಸಮತಟ್ಟಾಗಿ ಮಾಡಿ ಎತ್ತಿನ ಗಾಡಿಗಳು ಸುಗಮವಾಗಿ ಸಂಚರಿಸುವ ಮಾರ್ಗವನ್ನು ನಿರ್ಮಿಸಿದರು. ಇದರಿಂದ, ಸಂಚಾರ ಸುಗಮವಾಗಿತ್ತು. ಮೇಖ್ರಿ ಅವರ ಈ ಕಾರ್ಯವೂ ಜನರ ಪ್ರಶಂಸೆಗೆ ಪಾತ್ರವಾಗಿತ್ತು.

ಮೇಖ್ರಿ ಅವರ ಈ ಪರೋಪಕಾರಿ ಕಾರ್ಯವು ಆಗ ಮೈಸೂರು ರಾಜ್ಯದ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರ ಗಮನಕ್ಕೆ ಬಂದಾಗ ಮಹಾರಾಜ ಕೃಷ್ಣರಾಜ ಒಡೆಯರ್ ಅವರಿಗೆ ವಿಷಯ ತಿಳಿಸಿದರು. ಸಾರ್ವಜನಿಕರಿಗಾಗಿ ಕೈಗೊಂಡ ಈ ಕಾರ್ಯವನ್ನು ಶ್ಲಾಘಿಸಿದ ಒಡೆಯರ್ ಅವರು ಬಳ್ಳಾರಿ ರಸ್ತೆ, ಜಯಮಹಲ್ ರಸ್ತೆ ಮತ್ತು ರಾಮನ್ ಸಂಶೋಧನಾ ಸಂಸ್ಥೆಯನ್ನು ಸಂಧಿಸುವ ವೃತ್ತಕ್ಕೆ ಇನಾಯಿತ್‌ಉಲ್ಲಾ ಮೇಖ್ರಿ ಅವರ ಹೆಸರನ್ನೇ ಇರಿಸಿದರು ಎಂದು ಇತಿಹಾಸಕಾರರು ಹೇಳುತ್ತಾರೆ.

‘ಇನಾಯತ್‌ಉಲ್ಲಾ ಮೇಖ್ರಿ ಸ್ಕ್ವೈರ್’ ಎಂದು ಕರೆಯಲಾಗಿದ್ದ ಈ ಮಾರ್ಗವನ್ನು ಮದ್ರಾಸ್ ಪ್ರೆಸಿಡೆನ್ಸಿಯ ಗವರ್ನರ್ ಸರ್ ಜಾನ್ ಹೋಪ್ ಅವರು 1937ರ ಏಪ್ರಿಲ್‌ನಲ್ಲಿ ಉದ್ಘಾಟಿಸಿದ್ದರು. ಇಲ್ಲಿ ಆಗ ಐದು ದೀಪಗಳಿರುವ ಕಂಬಗಳನ್ನು ಸ್ಥಾಪಿಸಲಾಗಿತ್ತು. ನಂತರ, 1965ರಲ್ಲಿ ‘ಇಯಾತ್‌ಉಲ್ಲಾ ಮೇಖ್ರಿ ವೃತ್ತ’ ಎಂದು ಸರ್ಕಾರ ಮರುನಾಮಕರಣ ಮಾಡಿತು.

ಸೌದಿ ಅರೇಬಿಯಾ ಮೂಲದ ಮೇಖ್ರಿ ಅವರು ಭಾರತಕ್ಕೆ ವಲಸೆ ಬಂದಿದ್ದರು. ಸಾಮಾಜಿಕ ಸೇವೆಯಿಂದ ಗುರುತಿಸಿಕೊಂಡಿದ್ದ ಮೇಖ್ರಿ ಅವರು, ಬೆಂಗಳೂರಿನ ನಗರ ಪಾಲಿಕೆ ಸೇರಿದಂತೆ ವಿವಿಧ ಹುದ್ದೆಗಳಲ್ಲೂ ಕಾರ್ಯನಿರ್ವಹಿಸಿದ್ದರು ಎಂದು ಇತಿಹಾಸಕಾರರು ಹೇಳುತ್ತಾರೆ.

‘ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಬಳ್ಳಾರಿ, ಹೈದರಾಬಾದ್‌ಗೆ ಸಂಪರ್ಕ ಕಲ್ಪಿಸುವ ಪ್ರಮುಖ ಮಾರ್ಗವಾಗಿರುವ ಈ ಸ್ಥಳ ಈಗ ವಿಶಾಲವಾಗಿದೆ. ಆದರೆ, ಈ ವೃತ್ತದ ಇತಿಹಾಸವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ರೀತಿಯಲ್ಲಿ ಸ್ಥಳದಲ್ಲೇ ಮಾಹಿತಿ ಫಲಕ ಹಾಕಬೇಕು ಮತ್ತು ಆಕರ್ಷಕವನ್ನಾಗಿ ಮಾಡಬೇಕು’ ಎನ್ನುವುದು ಸ್ಥಳೀಯರ ಒತ್ತಾಯವಾಗಿದೆ.

ತುಮಕೂರು ಮೇಲ್ಸೇತುವೆ: ರಾತ್ರಿ ವಾಹನ ಸಂಚಾರಕ್ಕೆ ನಿರ್ಬಂಧ

ಬೆಂಗಳೂರು: ತುಮಕೂರು ರಸ್ತೆಯ ಎಲಿವೇಟೆಡ್ ಕಾರಿಡಾರ್‌ನಲ್ಲಿ (ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆ) ಮಧ್ಯರಾತ್ರಿ 12 ಗಂಟೆಯಿಂದ ಬೆಳಿಗ್ಗೆ 5ರವರೆಗೆ ವಾಹನ ಸಂಚಾರವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ.

‘ರಾತ್ರಿ ಹೊತ್ತಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸರಕು ಸಾಗಾಣೆ ವಾಹನಗಳು ನಗರಕ್ಕೆ ಬರುತ್ತವೆ. ವಾಹನಗಳನ್ನು ಪ್ರತ್ಯೇಕಿಸುವುದು ಸಿಬ್ಬಂದಿಗೆ ಸವಾಲಾಗಿ ಪರಿಣಮಿಸಿದೆ. ಹೀಗಾಗಿ ಎಲ್ಲಾ ಬಗೆಯ ವಾಹನಗಳ ಸಂಚಾರಕ್ಕೂ ನಿರ್ಬಂಧ ಹೇರಿದ್ದೇವೆ’ ಎಂದು ನಗರದ ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮಾರ್ಚ್ 12ರ ಮಧ್ಯರಾತ್ರಿಯಿಂದಲೇ ಆದೇಶ ಜಾರಿಯಾಗಲಿದೆ. ಸೇತುವೆ ದುರಸ್ತಿ ಕಾರ್ಯ ಪೂರ್ಣಗೊಳ್ಳಲು ಇನ್ನೂ 6 ತಿಂಗಳು ಬೇಕಾಗುತ್ತದೆ ಎಂದು ಹೇಳಲಾಗಿದೆ. ಅಲ್ಲಿಯವರೆಗೂ ಆದೇಶ ಜಾರಿಯಲ್ಲಿ ಇರಲಿದೆ’ ಎಂದರು.

‘ಹೆದ್ದಾರಿ ಪ್ರಾಧಿಕಾರದ ಮನವಿ ಮೇರೆಗೆ ಮೇಲ್ಸೇತುವೆ ಬಳಿ 3 ಪಾಳಿಗಳಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿ ನಿಯೋಜಿಸಿ ಲಘು ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದೇವೆ. ರಾತ್ರಿ ವೇಳೆಯಲ್ಲಿ ವಾಹನಗಳು ಅತ್ಯಂತ ವೇಗವಾಗಿ ಚಲಿಸುತ್ತವೆ. ಇದರಿಂದ ಮೇಲ್ಸೇತುವೆಯ ಎರಡು ರ‍್ಯಾಂಪ್‌ಗಳ ಬಳಿ ಭಾರಿ ವಾಹನಗಳ ಮಾರ್ಗ ಬದಲಾವಣೆ ಮಾಡುವುದು ಕಷ್ಟವಾಗಿದೆ. ಈ ಮಾರ್ಗಗಳ ಮೂಲಕ ಭಾರಿ ವಾಹನಗಳು ಮೇಲ್ಸೇತುವೆ ಪ್ರವೇಶಿಸಲು ಪ್ರಯತ್ನಿಸಿ ಭಾರಿ ವಾಹನ ವಿಭಜಿಸಲು ಅಳವಡಿಸಿದ್ದ ‘ಹೈಟ್ ರಿಸ್ಟ್ರಿಕ್ಷನ್ ಗ್ಯಾಂಟ್ರಿ’ಗೆ ಹಾನಿಯಾಗಿದೆ’ ಎಂದು ವಿವರಿಸಿದರು.

ಗುಡಿಸಲುಗಳಿಗೆ ಬೆಂಕಿ: 7 ಮಂದಿ ಸಾವು

ನವದೆಹಲಿ (ಪಿಟಿಐ): ಇಲ್ಲಿನ ಗೋಕುಲ್‌ಪುರಿ ಪ್ರದೇಶದಲ್ಲಿರುವ ಗುಡಿಸಲುಗಳಲ್ಲಿ ಶುಕ್ರವಾರ ಮಧ್ಯರಾತ್ರಿ ಸಂಭವಿಸಿದ ಬೆಂಕಿಯ ಅವಘಡದಲ್ಲಿ ಏಳು ಮಂದಿ ಸಾವನ್ನಪ್ಪಿದ್ದಾರೆ.

ಘಟನೆ ಬಗ್ಗೆ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಆಘಾತ ವ್ಯಕ್ತಪಡಿಸಿದ್ದಾರೆ.



ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ (ಬಿಐಟಿ) ಹಾಗೂ ಎರಿನ್ ಫೌಂಡೇಷನ್ ಮುಖ್ಯಸ್ಥರ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕುವ ಕಾರ್ಯಕ್ರಮ ನಡೆಯಿತು.

ಎರಿನ್ ಫೌಂಡೇಷನ್ ಜತೆ ಬಿಐಟಿ ಒಪ್ಪಂದ

ಬೆಂಗಳೂರು: ಆನೇಕಲ್ ತಾಲ್ಲೂಕಿನ ಶಾಲೆಗಳಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸುವುದು ಸೇರಿದಂತೆ ವಿವಿಧ ಚಟುವಟಿಕೆಗಳ ಸಂಬಂಧ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯವು (ಬಿಐಟಿ) ಎರಿನ್ ಫೌಂಡೇಷನ್ ಜೊತೆಗೆ ಒಪ್ಪಂದ ಮಾಡಿಕೊಂಡಿದೆ.

ಶನಿವಾರ ನಡೆದ ಕಾರ್ಯಕ್ರಮದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಶಿಕ್ಷಣ, ಪರಿಸರ, ಆರೋಗ್ಯ ಮತ್ತು ಕೌಶಲಗಳಿಗೆ ಆದ್ಯತೆ ನೀಡುವುದು ಒಪ್ಪಂದದ ಉದ್ದೇಶ. ಆನೇಕಲ್ ತಾಲ್ಲೂಕಿನಲ್ಲಿ 3ರಿಂದ 5 ವರ್ಷಗಳ ಅವಧಿಯಲ್ಲಿ ವಿವಿಧ ಚಟುವಟಿಕೆಗಳು ನಡೆಯಲಿವೆ. ಮೊದಲಿಗೆ ತಾಲ್ಲೂಕಿನ ಇಂಡ್ಲವಾಡಿ ಪಂಚಾಯಿತಿಯಲ್ಲಿ ಕೆಲಸಗಳು ಆರಂಭವಾಗಲಿವೆ.

ಈ ವ್ಯಾಪ್ತಿಯ ಮಕ್ಕಳು ಮತ್ತು ಶಿಕ್ಷಕರ ಸಾಮರ್ಥ್ಯ ಹೆಚ್ಚಿಸುವುದು, ಸಮಾಜದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವುದು, ಆರೋಗ್ಯದ ಅರಿವು ಮೂಡಿಸುವುದು ಇದರ ಉದ್ದೇಶವಾಗಿದೆ.

ಇದರ ಭಾಗವಾಗಿ ಮೂಲ ವಿಜ್ಞಾನ ಮತ್ತು ತಂತ್ರಜ್ಞಾನ ಸರಣಿಯಡಿ ಆನೇಕಲ್‌ನ ಸಿಎಸ್‌ಆರ್ ಕೇಂದ್ರದಲ್ಲಿ ಎರಡು ಕಾರ್ಯಾಗಾರಗಳನ್ನು ಫೆಬ್ರುವರಿಯಲ್ಲಿ ಆಯೋಜಿಸಲಾಗಿತ್ತು. ಆನೇಕಲ್ ತಾಲ್ಲೂಕಿನ ಶಿಕ್ಷಕರು ಹಾಗೂ ನೂರಾರು ವಿದ್ಯಾರ್ಥಿಗಳಿಗೆ ಈ ಒಪ್ಪಂದದಿಂದ ಅನುಕೂಲವಾಗಲಿದೆ ಎಂದು ಬಿಐಟಿ ಪ್ರಕಟಣೆಯಲ್ಲಿ ತಿಳಿಸಿದೆ.

ಚಿತ್ರಾವಳಿ



ಮಹಿಳಾ ದಿನದ ಅಂಗವಾಗಿ ಶ್ರೀಸಾಯಿ ಗೋಲ್ಡ್ ಪ್ಯಾಲೇಸ್‌ನಲ್ಲಿ ಆಯೋಜಿಸಿರುವ ‘ಸಾಯಿ ಗೋಲ್ಡ್ ಹಬ್ಬ’ದಲ್ಲಿ ನಟಿಯರಾದ ಅದಿತಿ ಪ್ರಭುದೇವ ಮತ್ತು ರೂಪಿಕಾ ಅವರು ಆಭರಣಗಳನ್ನು ಪ್ರದರ್ಶಿಸಿದರು. ಶ್ರೀಸಾಯಿ ಗೋಲ್ಡ್ ಪ್ಯಾಲೇಸ್‌ನ ಮಾಲೀಕ ಟಿ.ಎ.ಶರವಣ ಇದ್ದಾರೆ



ಮೈಸೂರಿನ ಅಭಿರುಚಿ ಪ್ರಕಾಶನ ನಗರದಲ್ಲಿ ಶನಿವಾರ ಹಮ್ಮಿಕೊಂಡ ಬರಗೂರು ರಾಮಚಂದ್ರಪ್ಪ ಅವರ ‘ಬೆವರು ನನ್ನ ದೇವರು’ ಸಮಗ್ರ ಸಾಹಿತ್ಯ ಸಂಪುಟ ಬಿಡುಗಡೆ ಕಾರ್ಯಕ್ರಮದಲ್ಲಿ ವಿಮರ್ಶಕ ಎಚ್‌.ಎಸ್‌. ರಾಘವೇಂದ್ರರಾವ್ ಅವರು ಕೃತಿ ಬಿಡುಗಡೆ ಮಾಡಿದರು. (ಎಡದಿಂದ ಬಲಕ್ಕೆ) ಗಾಯಕಿ ಶಮಿತಾ ಮಲ್ನಾಡ್, ಚಲನಚಿತ್ರ ನಟಿಯರಾದ ರೇಖಾ, ಹರಿಪ್ರಿಯಾ, ಬರಗೂರರ ಮೊಮ್ಮಗ ಆಕಾಂಕ್ಷ್, ಬರಗೂರು ರಾಮಚಂದ್ರಪ್ಪ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ ದಾಸ್, ವಿಮರ್ಶಕ ಬಸವರಾಜ ಕಲ್ಗುಡಿ, ಚಲನಚಿತ್ರ ನಟ ಕುಮಾರ್ ಗೋವಿಂದ್ ಹಾಗೂ ಪ್ರಕಾಶಕ ಗಣೇಶ್ ಇದ್ದಾರೆ —ಪ್ರಜಾವಾಣಿ ಚಿತ್ರ

‘ಸ್ವಾತಂತ್ರ್ಯ ಹೋರಾಟ: ಧಾರ್ಮಿಕ ಮುಖಂಡರ ಪ್ರೇರಣೆ ಸ್ಮರಣೀಯ’

ನವದೆಹಲಿ: ‘ಸ್ವಾತಂತ್ರ್ಯ ಹೋರಾಟಕ್ಕೆ ಸ್ವಾಮಿ ದಯಾನಂದ ಸರಸ್ವತಿ, ಮಹರ್ಷಿ ಅರವಿಂದ ಹಾಗೂ ಸ್ವಾಮಿ ವಿವೇಕಾನಂದ ಅವರಂತಹ ಧಾರ್ಮಿಕ ಮುಖಂಡರ ಕೊಡುಗೆಯನ್ನು ಮರೆಯಲಾಗದು’ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಶನಿವಾರ ಹೇಳಿದ್ದಾರೆ.

ಅಹಮದಾಬಾದ್‌ನಲ್ಲಿ ಮೂರು ದಿನಗಳ ಕಾಲ ನಡೆಯಲಿರುವ ಆರ್‌ಎಸ್‌ಎಸ್‌ನ ವಾರ್ಷಿಕ ಸಮಾವೇಶದ ಹಿನ್ನೆಲೆಯಲ್ಲಿ ಅವರು ಪ್ರಕಟಣೆ ಬಿಡುಗಡೆ ಮಾಡಿದ್ದಾರೆ.

‘ಆರ್‌ಎಸ್‌ಎಸ್ ಸಂಸ್ಥಾಪಕ ಕೆ.ಬಿ. ಹೆಡಗೇವಾರ್ ಮಾರ್ಗದರ್ಶನದಲ್ಲಿ ಸಂಘದ ಕಾರ್ಯಕರ್ತರು ಕೂಡ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದರು’ ಎಂದು ಅವರು ಹೇಳಿದ್ದಾರೆ.

‘ಸ್ವಾತಂತ್ರ್ಯ ಹೋರಾಟ ಎಲ್ಲರನ್ನೂ ಒಳಗೊಂಡಿತ್ತು. ಅನೇಕ ಧಾರ್ಮಿಕ ಮುಖಂಡರ ನೇತೃತ್ವದಲ್ಲಿ ನಡೆದ ಈ ಹೋರಾಟ ಬ್ರಿಟಿಷರ ದಬ್ಬಾಳಿಕೆಗೆ ಪ್ರಬಲ ಪ್ರತಿರೋಧ ಒಡ್ಡುವಲ್ಲಿ ಯಶಸ್ವಿಯಾಗಿತ್ತು’ ಎಂದೂ ಅವರು ಹೇಳಿದ್ದಾರೆ.

ಬ್ಯಾಂಕ್ ಸದಸ್ಯರ ವಿರುದ್ಧ ಪ್ರಕರಣ ದಾಖಲು: ಆಕ್ಷೇಪ

ಬೆಂಗಳೂರು: ‘ನಗರದ ಗುರು ರಾಘವೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಮತ್ತು ವಸಿಷ್ಠ ಸೌಹಾರ್ದ ಸಹಕಾರಿ ಬ್ಯಾಂಕ್‌ನ ಕೆಲ ಸದಸ್ಯರ ಮೇಲೆ ಎಫ್‌ಐಆರ್ ದಾಖಲಿಸಿ ನೋಟಿಸ್ ನೀಡಲಾಗಿದೆ’ ಎಂದು ಗುರು ರಾಘವೇಂದ್ರ ಕೋ- ಆಪರೇಟಿವ್ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆಯ ಮುಖ್ಯ ಪೋಷಕ ಡಾ. ಶಂಕರ ಗುಹಾ ದ್ವಾರಕಾನಾಥ್ ಬೆಳ್ಳೂರು ತಿಳಿಸಿದ್ದಾರೆ.

‘ಈ ಎರಡು ಸಂಸ್ಥೆಗಳಲ್ಲಿ ನಡೆದಿರುವ ಅವ್ಯವಹಾರ ಪ್ರಕರಣ ಬೆಳಕಿಗೆ ಬಂದು ಎರಡು ವರ್ಷಗಳಾಗಿವೆ. ಠೇವಣಿದಾರರು ತಮಗೆ ನ್ಯಾಯ ಕೊಡಿಸಿ ಅಂತ ಕೇಳಿದನ್ನೇ ಅಪರಾಧ ಎನ್ನುವಂತೆ ಬಿಂಬಿಸಲಾಗಿದೆ. ಇತ್ತೀಚೆಗೆ ಶಾಸಕ ರವಿ ಸುಬ್ರಹ್ಮಣ್ಯ ಅವರ ಮನೆಗೆ ತೆರಳಿ ಈ ಹಗರಣಕ್ಕೆ ಸಂಬಂಧಿಸಿದಂತೆ ಪ್ರಶ್ನಿಸಲಾಗಿತ್ತು. ಹೀಗಾಗಿ, ಆ ಕೋಪಕ್ಕೆ ಪೊಲೀಸ್ ಇಲಾಖೆಯನ್ನು ಬಳಸಿಕೊಂಡು ಈ ಹೋರಾಟದಲ್ಲಿ ಜನರ ಒಳಿತಿಗಾಗಿ ಹೋರಾಟ ನಡೆಸುವವರ ಧ್ವನಿ ಅಡಗಿಸುವ ಪ್ರಯತ್ನ ಮಾಡಲಾಗುತ್ತಿದೆ’ ಎಂದು ತಿಳಿಸಿದ್ದಾರೆ.

‘ಅನ್ಯಾಯದ ವಿರುದ್ಧ ಪ್ರಶ್ನೆ ಮಾಡುತ್ತಿರುವವರನ್ನು ಹೆದರಿಸಲು ಪೊಲೀಸರನ್ನು ಬಳಸಲಾಗುತ್ತಿದೆ. ಸ್ಥಳೀಯ ಶಾಸಕರು ಮತ್ತು ಸಂಸದರ ಒತ್ತಡದ ಮೇಲೆ ಪೋಲಿಸರು ಈ ರೀತಿಯ ಕ್ರಮ ಕೈಗೊಂಡಿದ್ದಾರೆ. ಇದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ತಪ್ಪುಮಾಡಿದವರನ್ನು ಸಿಬಿಐ ತನಿಖೆಗೆ ಒಪ್ಪಿಸಿರಿ ಎಂದು ಹಲವು ಬಾರಿ ಒತ್ತಾಯಿಸಿದರೂ ಯಾವುದೇ ಕ್ರಮಕೈಗೊಂಡಿಲ್ಲ’ ಎಂದು ದೂರಿದ್ದಾರೆ.

‘ತಮ್ಮ ಹಕ್ಕಿಗಾಗಿ ಹೋರಾಟ ನಡೆಸುತ್ತಿರುವ ಅಮಾಯಕರ ಮೇಲೆ ಎಫ್‌ಐಆರ್ ದಾಖಲಿಸಿ ನೋಟಿಸ್ ನೀಡಿರುವುದು ನಾಚಿಕೆಗೇಡಿನ ಸಂಗತಿ.ಇದು ಆಡಳಿತದಲ್ಲಿ ಇರುವವರಿಗೆ ಶೋಭೆ ತರುವ ಕೆಲಸವಲ್ಲ. ಕೂಡಲೇ ಠೇವಣಿದಾರರ ವಿರುದ್ಧ ನೀಡಿರುವ ದೂರು ವಾಪಸ್ ಪಡೆಯದಿದ್ದರೆ ತೀವ್ರ ಹೋರಾಟ ಮಾಡಲಾಗುವುದು’ ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

ಮೂಲಸೌಕರ್ಯಕ್ಕೆ ಆಗ್ರಹ: ಶಾಸಕರ ಮೇಲೆ ಸ್ಥಳೀಯರ ಆಕ್ರೋಶ

ಪ್ರಜಾವಾಣಿ ವಾರ್ತೆ



ಸ್ಥಳೀಯರ ಪ್ರತಿಭಟನೆ ನಂತರ ಶಾಸಕ ಎಂ.ಕೃಷ್ಣಪ್ಪ ಬಡಾವಣೆಗೆ ಭೇಟಿ ನೀಡಿ ಸಮಸ್ಯೆ ಅವಲೋಕಿಸಿದರು

ಬೆಂಗಳೂರು: 14 ವರ್ಷಗಳಾದರೂ ಬಡಾವಣೆಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸದ್ದನ್ನು ಪ್ರಶ್ನಿಸಿ ಕಾಳೇನ ಅಗ್ರಹಾರದ ನಿವಾಸಿಗಳು ಶಾಸಕ ಎಂ.ಕೃಷ್ಣಪ್ಪ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ರಸ್ತೆಗಳು ಡಾಂಬರು ಕಂಡಿಲ್ಲ. ಕುಡಿಯುವ ನೀರಿನ ವ್ಯವಸ್ಥೆ ಮಾಡಿಲ್ಲ. ಸಮರ್ಪಕವಾದ ಚರಂಡಿ ಮೋರಿಗಳನ್ನು ನಿರ್ಮಾಣ ಮಾಡಿಲ್ಲ. ಒಳಚರಂಡಿ ಸಂಪರ್ಕವನ್ನೂ ಕಲ್ಪಿಸಿಲ್ಲ. ಬಡವರು ಹಾಗೂ ಮಧ್ಯಮ ವರ್ಗದವರ ಕಷ್ಟ ನಿಮಗೆ ಕಾಣುತ್ತಿಲ್ಲವೇ’ ಎಂದು ಶಾಸಕರನ್ನು ಪ್ರಶ್ನಿಸಿದರು.

ಎಂ.ಎಲ್.ಎ.ಲೇಔಟ್‌ನಲ್ಲಿ ರಸ್ತೆ ಡಾಂಬರೀಕರಣ ಪೂಜೆಗೆ ಬಂದಿದ್ದ ಶಾಸಕರನ್ನು ಸುತ್ತುವರೆದ ಸ್ಥಳೀಯರು ‘ಡಾಂಬರೀಕರಣಕ್ಕೆ ಅವಕಾಶ ನೀಡುವುದಿಲ್ಲ’ ಎಂದು ಪಟ್ಟು ಹಿಡಿದರು. ಕಾಲ್ನಡಿಗೆಯ ಮೂಲಕ ಬಡಾವಣೆಯಲ್ಲಿ ಸಂಚರಿಸಿ ಸಮಸ್ಯೆಗಳನ್ನು ಅವಲೋಕಿಸಿದ ಶಾಸಕರು ಇದೇ 27ರೊಳಗೆ ರಸ್ತೆಗಳ ದುರಸ್ಥಿ ಮಾಡಿಸುವ ಭರವಸೆ ನೀಡಿದರು.

‘ನಮ್ಮ ಬಡಾವಣೆಯು ಸಮಸ್ಯೆಗಳ ಆಗರವಾಗಿದೆ. ಹತ್ತು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಶಾಸಕರು ಇಲ್ಲಿ ಕಾಲಿಟ್ಟಿದ್ದಾರೆ. ಒಳಚರಂಡಿ ಪೈಪ್ ಅಳವಡಿಕೆಗಾಗಿ ಸುಸ್ಥಿತಿಯಲ್ಲಿದ್ದ ರಸ್ತೆಯನ್ನು ಅಗೆದು ಹಾಗೆ ಬಿಟ್ಟಿದ್ದಾರೆ. ಕುಡಿಯುವ ನೀರಿನ ಪೈಪ್‌ಗಳನ್ನೂ ಕತ್ತರಿಸಿ ಬಿಸಾಡಿದ್ದಾರೆ. ನಾವು ನಿತ್ಯವೂ ನರಕ ಯಾತನೆ ಅನುಭವಿಸುವಂತಾಗಿದೆ’ ಎಂದು ಸ್ಥಳೀಯರು ದೂರಿದರು.

ಮೊಬೈಲ್ ಕಳ್ಳನಿಂದ ₹4 ಲಕ್ಷ ಮೌಲ್ಯದ ಸ್ವತ್ತು ಜಪ್ತಿ

ಪ್ರಜಾವಾಣಿ ವಾರ್ತೆ



ಆರೋಪಿಯಿಂದ ಜಪ್ತಿ ಮಾಡಿರುವ ಮೊಬೈಲ್ ಹಾಗೂ ದ್ವಿಚಕ್ರ ವಾಹನ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ಜನರ ಮೊಬೈಲ್ ಕಿತ್ತುಕೊಂಡು ಪರಾರಿಯಾಗುತ್ತಿದ್ದ ಆರೋಪಿಯನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಅರ್ಬಾಜ್ ಖಾನ್ (22) ಬಂಧಿತ. ಈತನಿಂದ ನಾಲ್ಕು ಮೊಬೈಲ್, ಎರಡು ಬೈಕ್ ಹಾಗೂ ಒಂದು ಸ್ಕೂಟರ್ ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹4 ಲಕ್ಷ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಇದೇ 8ರಂದು ರಾತ್ರಿ 8.45ರ ಸುಮಾರಿಗೆ ವ್ಯಕ್ತಿಯೊಬ್ಬರು ಠಾಣೆ ವ್ಯಾಪ್ತಿಯ ಬಸ್ ನಿಲ್ದಾಣದಲ್ಲಿ ಮೊಬೈಲ್‌ನಲ್ಲಿ ಮಾತನಾಡುತ್ತಾ ನಿಂತಿದ್ದರು. ಈ ವೇಳೆ ಬೈಕ್‌ನಲ್ಲಿ ಬಂದಿದ್ದ ಆರೋಪಿ ಅದನ್ನು ಕಿತ್ತುಕೊಂಡು ಪರಾರಿಯಾಗಿದ್ದ. ಇದೇ 10ರಂದು ಆತನನ್ನು ಬಂಧಿಸಲಾಗಿತ್ತು. ಮೊಬೈಲ್ ಕದ್ದಿದ್ದನ್ನು ಆತ ಒಪ್ಪಿಕೊಂಡಿದ್ದ’ ಎಂದು ಹೇಳಿದ್ದಾರೆ.

‘ಜಪ್ತಿ ಮಾಡಿರುವ ಎಲ್ಲ ಮೊಬೈಲ್‌ಗಳನ್ನು ಈತ ಠಾಣೆ ವ್ಯಾಪ್ತಿಯ ವಿವಿಧ ಭಾಗಗಳಲ್ಲಿ ಕಳವು ಮಾಡಿದ್ದ. ಜ್ಞಾನಭಾರತಿ ಹಾಗೂ ಗಿರಿನಗರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬೈಕ್ ಮತ್ತು ಸ್ಕೂಟರ್ ಕದ್ದಿದ್ದ. ವಿಚಾರಣೆ ವೇಳೆ ಈ ಕುರಿತ ಮಾಹಿತಿ ನೀಡಿದ್ದಾನೆ’ ಎಂದು ಅಧಿಕಾರಿ ತಿಳಿಸಿದ್ದಾರೆ.

ನಿವೃತ್ತ ಯೋಧ ಬಂಧನ

ಬೆಂಗಳೂರು: ಗಾಳಿಯಲ್ಲಿ ಗುಂಡು ಹಾರಿಸಿದ್ದಲ್ಲದೆ, ಸಾರ್ವಜನಿಕರನ್ನು ಬೆದರಿಸಿದ ಆರೋಪದಡಿ ನಿವೃತ್ತ ಯೋಧ ರಾಜೇಶ್‌ಕುಮಾರ್ ಪಾಂಡೆ ಎಂಬಾತನನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಠಾಣೆ ವ್ಯಾಪ್ತಿಯ ಆನಂದರಾಮ್ ರೆಡ್ಡಿ ಬಡಾವಣೆಯಲ್ಲಿ ವಾಸವಿದ್ದ ರಾಜೇಶ್, ಖಾಸಗಿ ಕಂಪನಿಯೊಂದರಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ. ಕಂಪನಿಯವರು ಸಿಬ್ಬಂದಿಗಾಗಿ ಶುಕ್ರವಾರ ರಾತ್ರಿ ಪಾರ್ಟಿ ಆಯೋಜಿಸಿದ್ದರು. ಜೋರಾಗಿ ಹಾಡು ಹಾಕಿದ್ದನ್ನು ಸ್ಥಳೀಯರೊಬ್ಬರು ಪ್ರಶ್ನಿಸಿದ್ದರು. ಆಗ ಆರೋಪಿಯು ಗಾಳಿಯಲ್ಲಿ ಗುಂಡು ಹಾರಿಸಿದ್ದ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗಲಾಟೆ ಪ್ರಶ್ನಿಸಿದ್ದಕ್ಕೆ ಯುವಕನ ಕೊಲೆ

ಬೆಂಗಳೂರು: ಮನೆ ಎದುರಿನ ರಸ್ತೆ ಬದಿ ಕುಳಿತು ಸಿಗರೇಟು ಸೇದುತ್ತಿದ್ದ, ಆಗಾಗ ವ್ಹೀಲಿಂಗ್ ಮಾಡುತ್ತಾ ಕೂಗಾಡುತ್ತಿದ್ದುದನ್ನು ಪ್ರಶ್ನಿಸಿದ್ದಕ್ಕೆ ಯುವಕರ ಗುಂಪೊಂದು ಥಾಮಸ್ (20) ಎಂಬಾತನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದೆ. ಈ ಸಂಬಂಧ ಕೆ.ಪಿ.ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮೃತ ಥಾಮಸ್, ಪೈಪ್‌ಲೈನ್ ರಸ್ತೆಯ ನಿವಾಸಿ. ಆರೋಪಿಗಳು ಈತನ ಸ್ನೇಹಿತರಾಗಿದ್ದರು. ಪ್ರತಿನಿತ್ಯ ಆತನ ಮನೆ ಎದುರು ಕುಳಿತು ಗಲಾಟೆ ಮಾಡುತ್ತಿದ್ದರು. ಕೂಗಾಡದಂತೆ ಹೇಳಿದರೂ ಕೇಳಿರಲಿಲ್ಲ. ಇದರಿಂದ ಬೇಸತ್ತಿದ್ದ ಥಾಮಸ್, ವಿಷಯವನ್ನು ಆರೋಪಿಗಳ ಪೋಷಕರಿಗೆ ತಿಳಿಸಿದ್ದ. ಇದರಿಂದ ಕುಪಿತಗೊಂಡ ಅವರು ಕೊಲೆ ಮಾಡಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಸೂರ್ಯ ಹಾಗೂ ಚಂದನ್ ಎಂಬುವವರ ಪೋಷಕರ ಅಂಗಡಿ ಬಳಿ ಹೋಗಿದ್ದ ಥಾಮಸ್, ರಾತ್ರಿ 7.30ರ ಸುಮಾರಿಗೆ ಮನೆಗೆ ಮರಳುತ್ತಿದ್ದ. ಈ ವೇಳೆ ರಸ್ತೆಯಲ್ಲಿ ಆತನನ್ನು ತಡೆದ ಆರೋಪಿಗಳು ಚಾಕುವಿನಿಂದ ಎದೆ ಹಾಗೂ ಪಕ್ಕೆಲುಬಿಗೆ ಇರಿದು ಪರಾರಿಯಾಗಿದ್ದಾರೆ. ತೀವ್ರ ರಕ್ತಸ್ರಾವದಿಂದ ಬಳಲಿದ್ದ ಥಾಮಸ್‌ನನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಆತ ಮೃತಪಟ್ಟಿದ್ದಾನೆ. ಆರೋಪಿಗಳೆಲ್ಲಾ ತಲೆಮರೆಸಿಕೊಂಡಿದ್ದಾರೆ’ ಎಂದು ಮಾಹಿತಿ ನೀಡಿದ್ದಾರೆ.

ಕ್ರಿಕೆಟ್ ಬೆಟ್ಟಿಂಗ್: ಇಬ್ಬರ ಬಂಧನ

ಬೆಂಗಳೂರು: ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದ ಮಂಜುನಾಥ್ ಮತ್ತು ನಾಗರಾಜ್ ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಇವರಿಂದ ₹2.20 ಲಕ್ಷ ನಗದು ಹಾಗೂ ಕೃತ್ಯಕ್ಕೆ ಬಳಸಿದ್ದ ಎರಡು ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದಾರೆ.

‘ಆರೋಪಿಗಳು ಮಹಿಳೆಯರ ಏಕದಿನ ವಿಶ್ವಕಪ್‌ಗೆ ಸಂಬಂಧಿಸಿದಂತೆ ಬೆಟ್ಟಿಂಗ್ ನಡೆಸುತ್ತಿದ್ದರು. ದಕ್ಷಿಣ ಆಫ್ರಿಕಾ ಮತ್ತು ಪಾಕಿಸ್ತಾನ ತಂಡಗಳ ನಡುವಣ ಪಂದ್ಯದ ಸೋಲು ಗೆಲುವಿನ ಕುರಿತು ಹಣ ಕಟ್ಟಿಸಿಕೊಂಡಿದ್ದರು. ಸೋತ ಬೆಟ್ಟರ್‌ಗಳಿಂದ ಹಣ ಸಂಗ್ರಹಿಸಿ ಅದನ್ನು ಗೆದ್ದವರಿಗೆ ನೀಡಲು ಮುಂದಾಗಿದ್ದರು’ ಎಂದು ಅಧಿಕಾರಿ ಯೊಬ್ಬರು ಹೇಳಿದ್ದಾರೆ.

ಅಪರಾಧ ಸುದ್ದಿ

ಕಾರಿನಲ್ಲಿ ಮಾದಕ ವಸ್ತು ಇಟ್ಟು ಮಾರಾಟ

ಕಾರಿನಲ್ಲಿ ಮಾದಕ ವಸ್ತು ಇಟ್ಟುಕೊಂಡು ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದ ಆರೋಪಿ ಫೈಜಾನ್ ಅಹಮದ್ (22) ಎಂಬಾತನನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ 5 ಗ್ರಾಂ ಎಂ.ಡಿ.ಎಂ.ಎ.ಪೌಡರ್, ₹2 ಸಾವಿರ ನಗದು ಹಾಗೂ ಕೃತ್ಯಕ್ಕೆ ಬಳಸಿದ್ದ ಕಾರು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಇದೇ 9ರ ಸಂಜೆ 4 ಗಂಟೆ ಸುಮಾರಿಗೆ ವ್ಯಕ್ತಿಯೊಬ್ಬ ಕಾರಿನಲ್ಲಿ ಎಂ.ಡಿ.ಎಂ.ಎ.ಪೌಡರ್ ಇಟ್ಟುಕೊಂಡು ಅದನ್ನು ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಲಭಿಸಿತ್ತು. ಇದರ ಆಧಾರದಲ್ಲಿ ದಾಳಿ ನಡೆಸಿ ಆತನನ್ನು ಬಂಧಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಶತಮಾನೋತ್ಸವ ಕಂಡ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನಲ್ಲೂ ಬಗೆಹರಿಯದ ಸಮಸ್ಯೆಗಳು

ಐಐಟಿ ಮಾದರಿಯ ಸಂಸ್ಥೆಗೂ ಕೊರತೆ

• ಸಚ್ಚಿದಾನಂದ ಕುರಗುಂದ



ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ ನೋಟ ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಬೆಂಗಳೂರು: ನೂರು ವರ್ಷಗಳನ್ನು ಪೂರೈಸಿರುವ ಬೆಂಗಳೂರಿನ ಪ್ರತಿಷ್ಠಿತ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು (ಯುವಿಸಿಇ) ಈಗ ಐಐಟಿ ಮಾದರಿಯ ಸ್ವಾಯತ್ತ ಸಂಸ್ಥೆ. ವಿಧಾನಸೌಧದಿಂದ ಕೂಗಳತೆಯ ದೂರದಲ್ಲಿರುವ ಈ ಕಾಲೇಜಿನ ಸ್ಥಾನಮಾನ ಹೆಚ್ಚಿದ್ದರೂ, ಕೊರತೆಗಳು ನೀಗಿಲ್ಲ.

ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸಲೆಂದೇ ರೂಪಿಸಲಾದ ಮಸೂದೆಗೆ ಅಂಗೀಕಾರ ದೊರೆತು 2022ರ ಫೆ.28ರಂದು ಗೆಜೆಟ್ ಅಧಿಸೂಚನೆಯನ್ನೂ ಹೊರಡಿಸಲಾಗಿದೆ. ಕಾಲೇಜು 'ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ' (ಯುವಿಸಿಇ) ಎಂದು ಬದಲಾಗಿದೆ.

ಮಂಜೂರಾದ 175 ಬೋಧಕರ ಹುದ್ದೆಗಳ ಪೈಕಿ, ಅರ್ಧದಷ್ಟು, ಅಂದರೆ ಕೇವಲ 88 ಮಂದಿ ಖಾಯಂ ಆಧಾರದಲ್ಲಿ ಇರುವುದರಿಂದ ಅತಿಥಿ ಉಪನ್ಯಾಸಕರನ್ನೇ ನೆಚ್ಚಿಕೊಳ್ಳಬೇಕಾಗಿದೆ. ಮಂಜೂರಾದ 150ರಲ್ಲಿ 20 ಬೋಧಕೇತರ ಸಿಬ್ಬಂದಿಯಷ್ಟೇ ಇದ್ದಾರೆ. ಬೋಧಕರು ಆಡಳಿತಾತ್ಮಕ ಕೆಲಸಗಳನ್ನೂ ಮಾಡುತ್ತಿದ್ದಾರೆ. ಬೋಧಕರ ಕೊರತೆಯಿಂದಾಗಿ ರಾಷ್ಟ್ರೀಯ ಮಾನ್ಯತಾ ಮಂಡಳಿಯ (ಎನ್‌ಬಿಎ) ಮಾನ್ಯತೆಯೂ ದೊರೆಯುತ್ತಿಲ್ಲ.

'ಕಾಲೇಜನ್ನು ಸರ್ಕಾರವೇ ಕುಸಿಯುವಂತೆ ಮಾಡುತ್ತಿದೆ. ಪರಿಪೂರ್ಣವಾಗಿ ಬೋಧಿಸಲಾಗದೆ ಕಣ್ಣೀರು ಹಾಕುತ್ತಿದ್ದೇವೆ. ಗ್ರಾಮೀಣ ವಿದ್ಯಾರ್ಥಿಗಳೇ ಹೆಚ್ಚಿರುವ ಸಂಸ್ಥೆಗೆ ಪ್ರಾಧ್ಯಾಪಕರನ್ನೇ ನೇಮಿಸಿಕೊಳ್ಳದಿದ್ದರೆ ಹೇಗೆ? ಗ್ರೂಪ್ ಡಿ ಉದ್ಯೋಗಿಗಳಿಗೆ ಬಡ್ತಿ ನೀಡಿ ಇನ್‌ಸ್ಟ್ರಕ್ಟರ್ ಹುದ್ದೆಗಳಿಗೆ ನೇಮಿಸಿಕೊಳ್ಳಲಾಗಿದೆ. ಉತ್ತಮ ಸಿಬ್ಬಂದಿಯನ್ನು ನೇಮಿಸದೆ ಐಐಟಿ ದರ್ಜೆ ಸ್ಥಾನಮಾನ ನೀಡಿದರೆ ಸಾಕೇ' ಎಂದು ಪ್ರಾಧ್ಯಾಪಕರೊಬ್ಬರು ಪ್ರಶ್ನಿಸುತ್ತಾರೆ.

'ಸ್ಥಾನಮಾನವನ್ನು ಹೆಚ್ಚಿಸಿದ್ದರೂ, ಬಜೆಟ್‌ನಲ್ಲಿ ಅಭಿವೃದ್ಧಿಗೆ ಅನುದಾನವನ್ನೇ ಮೀಸಲಿಟ್ಟಿಲ್ಲ. ಐಐಟಿ ಮಾದರಿಯಲ್ಲಿ ಅಭಿವೃದ್ಧಿ ಹೊಂದಲು ಕನಿಷ್ಠ ₹500 ಕೋಟಿ ನೀಡಬೇಕು. ಮೂಲಸೌಕರ್ಯಗಳನ್ನು ಕಲ್ಪಿಸಿ, ಬೋಧಕರು ಮತ್ತು ಸಿಬ್ಬಂದಿಯನ್ನು ನೇಮಿಸಬೇಕು' ಎಂದು ಅಧಿಕಾರಿಯೊಬ್ಬರು ಆಗ್ರಹಿಸಿದರು.

ಮೆಕ್ಯಾನಿಕಲ್ ವಿಭಾಗದ ಕಟ್ಟಡ ಹಳೆಯದಾಗಿದೆ. ಆರು ಅಂತಸ್ತುಗಳ ಹೊಸ ಕಟ್ಟಡಕ್ಕೆಂದು ಸರ್ಕಾರ ₹85 ಕೋಟಿ ಮಂಜೂರು ಮಾಡಿದೆ. ಕಾಲೇಜಿನ ಅಭಿವೃದ್ಧಿಯಲ್ಲಿ ಭಾಗಿಯಾಗಿರುವ ಹಳೆಯ ವಿದ್ಯಾರ್ಥಿಗಳ ಸಂಘವು ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹತ್ತು ವರ್ಷಗಳಿಂದ ಆರ್ಥಿಕ ನೆರವು ನೀಡುತ್ತಿದೆ.

'ವಿಶ್ವದಾದ್ಯಂತ ನೆಲೆಸಿರುವ ಹಳೆಯ ವಿದ್ಯಾರ್ಥಿಗಳು ಲಕ್ಷಾಂತರ ರೂಪಾಯಿ ದೇಣಿಗೆ ನೀಡಲು ಸಿದ್ಧರಿದ್ದಾರೆ. ಆದರೆ, ಸ್ವಾಯತ್ತತೆ ಸಮರ್ಪಕವಾಗಿ ಜಾರಿಯಾಗಬೇಕು. ನಮಗೂ ಅವಕಾಶ ಇರಬೇಕು' ಎಂದು ಹಳೆಯ ವಿದ್ಯಾರ್ಥಿಯೊಬ್ಬರು ಹೇಳುತ್ತಾರೆ.

ಗುಣಮಟ್ಟ ಬಿಟ್ಟುಕೊಡದ ಯುಬಿಡಿಟಿ

• ಬಾಲಕೃಷ್ಣ ಪಿ.ಎಚ್.



ದಾವಣಗೆರೆಯ ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜು

–ಪ್ರಜಾವಾಣಿ ಚಿತ್ರ / ಸತೀಶ ಬಡಿಗೇರ್

ದಾವಣಗೆರೆ: ಬ್ರಹ್ಮಪ್ಪ, ದೇವೇಂದ್ರಪ್ಪ ತವನಪ್ಪ ಎಂಬ ಸಹೋದರರು ದಾನ ಮಾಡಿದ ಜಾಗದಲ್ಲಿ 1951ರಲ್ಲಿ ಆರಂಭಗೊಂಡ ಎಂಜಿನಿಯರಿಂಗ್ ವಿದ್ಯಾಸಂಸ್ಥೆಯೇ ಬಿಡಿಟಿ. 70 ವರ್ಷಗಳ ಬಳಿಕವೂ ಗುಣಮಟ್ಟವನ್ನು ಬಿಟ್ಟುಕೊಡದೆ, ವಿದ್ಯಾರ್ಥಿಗಳ ಕೊರತೆಯಾಗದಂತೆ ನೋಡಿಕೊಂಡಿದೆ.

ರಾಜ್ಯದ ಪ್ರಥಮ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು–ಬಿಡಿಟಿ ಮೊದಲು ಸರ್ಕಾರದ ಅಧೀನದಲ್ಲಿತ್ತು. 1992ರಲ್ಲಿ ಕುವೆಂಪು ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಂಡು, 'ಯುನಿವರ್ಸಿಟಿ' ಸೇರಿ ಯುಬಿಡಿಟಿ ಎಂದಾಯಿತು. 2009ರಲ್ಲಿ ದಾವಣಗೆರೆ ವಿಶ್ವವಿದ್ಯಾಲಯದ ಕಾಲೇಜು ಘಟಕವಾಗಿ, 2011ರಲ್ಲಿ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವ್ಯಾಪ್ತಿಗೆ ಸೇರಿ ವಿಟಿಯು ಕಾಲೇಜು ಘಟಕವಾಗಿಯೇ ಮುಂದುವರಿದಿದೆ.

ವಿಶಾಲ ಕಟ್ಟಡವಿದೆ. ಮೂಲಸೌಕರ್ಯಗಳ ಕೊರತೆ ಇಲ್ಲ. ಬೇರೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಕಡಿಮೆಯಾಗಿದ್ದರೂ, ಇಲ್ಲಿ ಕೊರತೆಯಾಗಿಲ್ಲ. ಪ್ರಥಮ ವರ್ಷದ ಯುಜಿಯಲ್ಲಿ 440 ಮತ್ತು ಪಿಜಿಯಲ್ಲಿ 426 ವಿದ್ಯಾರ್ಥಿಗಳು ಸೇರಿ ಒಟ್ಟು 2,500ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಬೋಧಕರು–ಸಿಬ್ಬಂದಿಯ ಕೊರತೆಯೂ ಇಲ್ಲ. ಕಾಯಂ ಬೋಧಕರಿಲ್ಲದ ಕೊರತೆಯನ್ನು ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ಮೂಲಕ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ.

'ಎಂಬಿಎ, ಎಂಸಿಎ ಸೇರಿ 9 ಪಿಜಿಗಳಿದ್ದು, ಎಲ್ಲವೂ ಸಂಶೋಧನಾ ಕೇಂದ್ರಗಳು. ಸುಮಾರು 100 ಮಂದಿ ಪಿಎಚ್.ಡಿ, ಎಂ.ಎಸ್ಸಿ ಸಂಶೋಧಕರಿದ್ದಾರೆ. ರಾಜ್ಯದಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳ ಪೈಕಿ ನಾವು ಪ್ರಥಮ ಸ್ಥಾನದಲ್ಲಿದ್ದೇವೆ. ಖಾಸಗಿ ಕಾಲೇಜುಗಳಿಗಿಂತ ಚೆನ್ನಾಗಿದೆ. ವಿಟಿಯು ಫಲಿತಾಂಶದಲ್ಲಿ 13 ರ‍್ಯಾಂಕ್‌ಗಳು ನಮ್ಮ ವಿದ್ಯಾರ್ಥಿಗಳಿಗೇ ಬಂದಿವೆ. ಮೂವರು ಚಿನ್ನದ ಪದಕ ಪಡೆದಿದ್ದಾರೆ' ಎಂದು ಪ್ರಾಚಾರ್ಯ ಡಾ. ಮಲ್ಲಿಕಾರ್ಜುನ ಎಸ್. ಹೊಳಿ ತಿಳಿಸಿದರು.

ಸಿಇಟಿ ಮೂಲಕವೇ ಪ್ರವೇಶ ನೀಡಲಾಗುತ್ತಿದ್ದು, ಮ್ಯಾನೇಜ್‌ಮೆಂಟ್ ಕೋಟಾ ಇಲ್ಲ. 300 ಯುವಕರು, 300 ಯುವತಿಯರು ವಸತಿನಿಲಯಗಳಲ್ಲಿದ್ದುಕೊಂಡು ಓದುತ್ತಿದ್ದಾರೆ.

₹ 139 ಕೋಟಿ ವೆಚ್ಚದ ಕಟ್ಟಡಕ್ಕೆ ಸೌಲಭ್ಯವೇ ಇಲ್ಲ!

ಕೋವಿಡ್ ಆರೈಕೆ ಕೇಂದ್ರವಾಗಿದ್ದ ತಳಕಲ್ ಕಾಲೇಜು!

• ಸಿದ್ದನಗೌಡ ಪಾಟೀಲ

ಮುಖ್ಯಾಂಶಗಳು

- ಬಿಕೋ ಎನ್ನುತ್ತಿರುವ ಬೃಹತ್ ಕಟ್ಟಡ.
- ಕಲ್ಯಾಣ ಕರ್ನಾಟಕ ವಿದ್ಯಾರ್ಥಿಗಳ ಆಶಾಕಿರಣ
- ಇನ್ನೂ ₹ 40 ಕೋಟಿ ವೆಚ್ಚದ ಕಾಮಗಾರಿ ಬಾಕಿ



ಕಾಲೇಜಿನಲ್ಲಿ ಸೌಲಭ್ಯಗಳಿಲ್ಲ. ಸಿಬ್ಬಂದಿ ಕೊರತೆ ಇದೆ. ತಾಂತ್ರಿಕ ಶಿಕ್ಷಣ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ

–ವಿರುಪಾಕ್ಷಪ್ಪ ಬಾಗೋಡಿ, ಪ್ರಾಚಾರ್ಯ, ತಳಕಲ್ ಕಾಲೇಜು

ಕೊಪ್ಪಳ: ಜಿಲ್ಲೆಯ ಕುಕನೂರ ತಾಲ್ಲೂಕಿನ ತಳಕಲ್ ಗ್ರಾಮದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಕೋವಿಡ್ ಸಂದರ್ಭದಲ್ಲಿ ಎರಡು ತಿಂಗಳು ಸೋಂಕಿತರ ಆರೈಕೆ ಕೇಂದ್ರವಾಗಿದ್ದರೂ, ಶೈಕ್ಷಣಿಕ ಮೂಲಸೌಕರ್ಯದ ವಿಷಯದಲ್ಲಿ ರೋಗಪೀಡಿತ ಸ್ಥಿತಿಯಲ್ಲಿದೆ.

250 ಹಾಸಿಗೆ ಸಾಮರ್ಥ್ಯದ ಇಲ್ಲಿನ ಉತ್ತಮ ಪರಿಸರದಿಂದ ಅನೇಕ ಸೋಂಕಿತರು ಗುಣಮುಖರಾದರು. ಆದರೆ ಸ್ಥಾಪನೆಯಾದ ನಾಲ್ಕು ವರ್ಷದಿಂದ ಎಂಜಿನಿಯರಿಂಗ್ ಕೌಶಲ ಕಲಿಸಲು ಬೇಕಾದ ಸೌಕರ್ಯವಿಲ್ಲದೆ ಕಾಲೇಜು ನರಳುತ್ತಿದೆ.

ಜಿಲ್ಲಾ ಕೇಂದ್ರದಿಂದ 15 ಕಿ.ಮೀ ದೂರದಲ್ಲಿ, 'ಬಿಕೋ ಎನ್ನುತ್ತಿರುವ ಬೃಹತ್ ಭವನವಾದ' ಕಾಲೇಜಿನಲ್ಲಿ ಕಲ್ಯಾಣ ಕರ್ನಾಟಕದವರಿಗೆ ಮೊದಲ ಪ್ರಾಶಸ್ತ್ಯ. ಈ ಕಾಲೇಜನ್ನು ₹ 139 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, 100ಕ್ಕೂ ಹೆಚ್ಚು ಕೊಠಡಿಗಳಿವೆ. 155 ವಿದ್ಯಾರ್ಥಿಗಳಿದ್ದಾರೆ. ಆರು ಕಾಯಂ ಬೋಧಕರು ಹಾಗೂ 25 ಅರೆಕಾಲಿಕ ಬೋಧಕರಿದ್ದಾರೆ.

ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಾನಿಕ್ ಅಂಡ್ ಕಂಪ್ಯೂಟರ್ ಸೈನ್ಸ್, ಕಂಪ್ಯೂಟರ್ ಸೈನ್ಸ್, ಇ-ಕಮ್ಯುನಿಕೇಶನ್ ಸೇರಿದಂತೆ 5 ಕೋರ್ಸ್‌ಗಳಿವೆ. 3 ಕೊಠಡಿಗಳಲ್ಲಿ ತರಗತಿ, 2 ಕೊಠಡಿಗಳಲ್ಲಿ ಪ್ರಯೋಗಾಲಯ, ಪ್ರಾಚಾರ್ಯರು–ಕಚೇರಿ ಸಿಬ್ಬಂದಿ ಒಂದು ಕೊಠಡಿ ಇದೆ. ಪ್ರಯೋಗಾಲಯ, ಡಿ ದರ್ಜೆ ನೌಕರರಿಲ್ಲ. ಉದ್ಯಾನ, ಕಚೇರಿ, ಪೀಠೋಪಕರಣ ಕೊರತೆ ಇದೆ.

ಕಾಲೇಜು ಆರಂಭವಾಗಿ ತಿಂಗಳಾದರೂ ವಿದ್ಯಾರ್ಥಿಗಳಿಗೆ ವಸತಿ, ಊಟವಿಲ್ಲವೆಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದ ಬಳಿಕ ಸಿಬ್ಬಂದಿ ವಸತಿಗೃಹಗಳನ್ನೇ ತಾತ್ಕಾಲಿಕ ವಸತಿ ನಿಲಯಗಳನ್ನಾಗಿಸಿ, ಊಟದ ವ್ಯವಸ್ಥೆ ಮಾಡಲಾಗಿದೆ. ಕ್ಯಾಂಟಿನ್, ಪ್ರಯೋಗಾಲಯ, ಬಸ್ ಸೌಲಭ್ಯವಿಲ್ಲ. ಅಂದಾಜಿಸಿದ್ದಕ್ಕಿಂತಲೂ ₹ 40 ಕೋಟಿ ವೆಚ್ಚದ ಕಾಮಗಾರಿಗಳು ಬಾಕಿ ಇವೆ.

ಕಾಲೇಜಿಗೆ ಕನಿಷ್ಠ 50 ಸ್ವಚ್ಛತಾ ಸಿಬ್ಬಂದಿ ಬೇಕು. ಆದರೆ ಕೇವಲ ಇಬ್ಬರು ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. 'ಸೌಕರ್ಯಗಳನ್ನು ಕೊಡದಿದ್ದರೆ ಕಾಲೇಜು ಹಾಳುಕೊಂಪೆಯಾಗುವುದರಲ್ಲಿ ಸಂಶಯವೇ ಇಲ್ಲ' ಎನ್ನುವ ಆತಂಕ ಕೆಲವು ಸಿಬ್ಬಂದಿಯದ್ದು.

ಕಾಲೇಜಿನಲ್ಲಿ ಕೌಶಲ ಕೇಂದ್ರವೂ ಆರಂಭವಾಗಿದ್ದು, ಶಿಥಿಲಗೊಂಡ ಹಳೆಯ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವನ್ನು ಇಲ್ಲಿಯೇ ಆರಂಭಿಸಬೇಕೆಂಬ ಒತ್ತಾಯವೂ ಇದೆ.

'ಗಂಗಾವತಿ ನಗರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ 316 ವಿದ್ಯಾರ್ಥಿಗಳಿದ್ದಾರೆ. ಆರು ಕಾಯಂ ಬೋಧಕರಿದ್ದಾರೆ. ಪ್ರಯೋಗಾಲಯದ ಕೊರತೆ ನೀಗಿಸಲು ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಪ್ರಾಚಾರ್ಯ ಡಾ.ನಾಗರಾಜ ಪಾಟೀಲ್ ತಿಳಿಸಿದರು.



ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ತಳಕಲ್ ಗ್ರಾಮದಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಭವ್ಯ ಕಟ್ಟಡ

ಕಟ್ಟಡಗಳಿವೆ; ಸೌಕರ್ಯಗಳೇ ಇಲ್ಲ!

ಒಂದನೇ ಪುಟದಿಂದ

ಕಾಲೇಜುಗಳನ್ನು ಮಂಜೂರು ಮಾಡಲು ಕಾಳಜಿ ವಹಿಸಿದ ಸರ್ಕಾರವು ಸೌಲಭ್ಯಗಳನ್ನು ಕಲ್ಪಿಸಿಕೊಡಲಿಲ್ಲ. 2010ರ ಬಳಿಕ ಬೋಧಕರ ನೇಮಕವಾಗಿಲ್ಲ. ಒಮ್ಮೆಯೂ ಬೋಧಕೇತರ ಸಿಬ್ಬಂದಿಯ ನೇಮಕವಾಗಿಲ್ಲ. ಲ್ಯಾಬ್ ಟೆಕ್ನಿಷಿಯನ್‌ಗಳು, ಕಚೇರಿ ಸಿಬ್ಬಂದಿಯೂ ಇಲ್ಲ. ಕೆಲವೆಡೆ ಶೇಕಡ 10ರಷ್ಟು ಬೋಧಕೇತರ ಸಿಬ್ಬಂದಿ ಪಾಲಿಟೆಕ್ನಿಕ್‌ಗಳಿಂದ ವರ್ಗಾವಣೆಯಾಗಿ ಬಂದಿದ್ದಾರೆ. ಉಳಿದೆಡೆ ಬೆರಳೆಣಿಕೆಯಷ್ಟು ಹೊರಗುತ್ತಿಗೆ ಸಿಬ್ಬಂದಿ ಇದ್ದಾರೆ. ಕೆಲವೆಡೆ ಪ್ರಯೋಗಾಲಯಗಳಿದ್ದರೂ, ಸಿಬ್ಬಂದಿ ಇಲ್ಲದೆ, ಬೋಧಕರೇ ಬೀಗ ತೆಗೆದು ದೂಳು ಕೊಡವಬೇಕು. ಕೆಲವೆಡೆ ಹೊರಗುತ್ತಿಗೆ ಆಧಾರದಲ್ಲಿರುವ ಕೌಶಲರಹಿತ ಸಿಬ್ಬಂದಿಯನ್ನು ಮುಂದುವರಿಸಲು ಏಜೆನ್ಸಿಗಳು ಲಂಚ ಕೇಳುವುದರಿಂದ ಅವರು ಮುಂದುವರಿಯಲು ಬಯಸುತ್ತಿಲ್ಲ.

'ಕಾಲೇಜು ನಿರ್ವಹಣೆಗೆ ಅಗತ್ಯವಿರುವ ಅನುದಾನ ಸಕಾಲಕ್ಕೆ ಬಿಡುಗಡೆಯಾಗುತ್ತಿಲ್ಲ. ಸ್ವಂತ ಹಣದಲ್ಲಿ ನೀರು, ಪೊರಕೆ, ಸೀಮೆಸುಣ್ಣ ಬಾಕ್ಸ್, ಡಸ್ಟರ್ ತರಿಸಬೇಕಾಗಿದೆ' ಎಂದು ಪ್ರಾಂಶುಪಾಲರೊಬ್ಬರು ವಿಷಾದಿಸಿದರು.

ಲ್ಯಾಬ್‌ಗಳೇ ಇಲ್ಲ: ಹೊಸ ಕಾಲೇಜುಗಳಿಗೆ ಕಟ್ಟಡವಿದ್ದರೂ ಪ್ರಯೋಗಾಲಯಗಳು ಪೂರ್ಣ ಪ್ರಮಾಣದಲ್ಲಿಲ್ಲ. ಕೆಲವೆಡೆ ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಪ್ರಯೋಗಾಲಯಗಳಿದ್ದರೂ ಹಳೆಯ ಉಪಕರಣಗಳೇ ಇವೆ. ಅವು ಈಗಿನ ಪಠ್ಯಕ್ಕೆ ಪೂರಕವಾಗಿಲ್ಲ.

ಸಿವಿಲ್, ಮೆಕ್ಯಾನಿಕಲ್ ವಿಭಾಗಗಳಲ್ಲಿ ಪ್ರಯೋಗಾಲಯಗಳಿಲ್ಲದೆ ಹತ್ತಿರದ ಖಾಸಗಿ ಕಾಲೇಜುಗಳನ್ನೇ ಅವಲಂಬಿಸಬೇಕಾಗಿದೆ. ರಾಮನಗರ ಕಾಲೇಜಿನವರು ಗೌಸಿಯಾ ಎಂಜಿನಿಯರಿಂಗ್ ಕಾಲೇಜಿಗೆ, ಚಾಮರಾಜನಗರ ಕಾಲೇಜಿನವರು ಮೈಸೂರಿನ ಜೆ.ಸಿ.ಇ ಕಾಲೇಜು, ಎನ್‌ಐಇ, ಪಾಲಿಟೆಕ್ನಿಕ್‌ಗೆ ಹಾಗೂ ಕೆ.ಆರ್.ಪೇಟೆ ಕಾಲೇಜಿನವರು ಮಂಡ್ಯದ ಪಿಇಎಸ್ ಕಾಲೇಜಿನ ಪ್ರಯೋಗಾಲಯಕ್ಕೆ ಬರುತ್ತಾರೆ.

ಉಳಿದ ಕಾಲೇಜುಗಳೂ 'ಆಪ್ತಮಿತ್ರ' ಯೋಜನೆಯ ಒಪ್ಪಂದದಡಿ ಖಾಸಗಿ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಕಳಿಸುತ್ತಿವೆ. ಪ್ರತಿ ವಿದ್ಯಾರ್ಥಿಗೆ ₹ 500ರಂತೆ, ಎಲ್ಲರ ವೆಚ್ಚವನ್ನು ಸರ್ಕಾರವೇ ಭರಿಸುತ್ತಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಆರಂಭವಾದ ಬೆಂಗಳೂರಿನ ಸರ್ಕಾರಿ ಶ್ರೀಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ಕಾಲೇಜಿನಲ್ಲಿ ಟೆಕ್ಸ್‌ಟೈಲ್ಸ್ ಮತ್ತು ಸಿಲ್ಕ್ ವಿಭಾಗವಿದ್ದು, ಲ್ಯಾಬ್‌ನಲ್ಲಿರುವ 50 ವರ್ಷ ಹಿಂದಿನ ಉಪಕರಣಗಳು ಬಳಕೆಯಾಗುತ್ತಿಲ್ಲ. ಒಬ್ಬ ಕಾಯಂ ಸಿಬ್ಬಂದಿಯಷ್ಟೇ ಇದ್ದಾರೆ. ಉಳಿದವರೆಲ್ಲ ಅತಿಥಿ ಉಪನ್ಯಾಸಕರು. 2007ರವರೆಗೂ ಅಲ್ಲಿದ್ದ ಟೆಕ್ಸ್‌ಟೈಲ್ಸ್, ಸಿಲ್ಕ್ ಟೆಕ್ನಾಲಜಿ ಕೋರ್ಸ್‌ಗಳನ್ನು ವಿಲೀನ ಮಾಡಿ, ನಾಲ್ಕು ಹೊಸ ಕೋರ್ಸ್‌ಗಳನ್ನು ಆರಂಭಿಸಲಾಗಿದೆ.

'ಕಂಪ್ಯೂಟರ್ ಸೈನ್ಸ್ ವಿಭಾಗಕ್ಕೆ ನಿಯಮಾವಳಿ ಪ್ರಕಾರ 12 ಬೋಧಕ ಹುದ್ದೆಗಳಿರಬೇಕು. ಏಳಷ್ಟೇ ಮಂಜೂರಾಗಿವೆ. ಲೋಪವನ್ನು ಸರಿಪಡಿಸುವಂತೆ ತಾಂತ್ರಿಕ ಶಿಕ್ಷಣ ಇಲಾಖೆಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಇಲಾಖೆಯ ಕೇಂದ್ರ ಕಚೇರಿಗೆ ಪಾಲಿಟೆಕ್ನಿಕ್‌ಗಳಿಂದ ಬಂದಿರುವ ಸಿಬ್ಬಂದಿಗೆ ಎಂಜಿನಿಯರಿಂಗ್ ಕಾಲೇಜುಗಳ ಬಗ್ಗೆ ಗಂಧಗಾಳಿಯೂ ಗೊತ್ತಿಲ್ಲ. ಅವರ ಮಲತಾಯಿ ಧೋರಣೆಯಿಂದಾಗಿ ಕಾಲೇಜುಗಳ ಅಸ್ತಿತ್ವಕ್ಕೆ ಕುಂದು ಬರುವಂತಾಗಿದೆ' ಎಂಬ ಮಾತುಗಳು ಕೇಳಿಬರುತ್ತಿವೆ.

'ಅಧಿಕಾರಿಗಳಿಗೆ ಸಮಸ್ಯೆ ಬಗೆಹರಿಸಲು ಒಲವಿಲ್ಲ. 2008ರ ಬಳಿಕ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿಯಾಗದಿರುವುದರಿಂದ ಹೊಸ ನೇಮಕಾತಿ ಮಾಡಲಾಗದು ಎಂದು ಕೆಪಿಎಸ್‌ಸಿಯವರು ಹೇಳುತ್ತಾರೆ. ಅವ್ಯವಸ್ಥೆಗಳನ್ನು ಸರಿಪಡಿಸದೆ ಕಾಲೇಜುಗಳನ್ನು ದುರ್ಬಲಗೊಳಿಸುವ ಸಂಚು ಕೆಲ ಅಧಿಕಾರಿಗಳಿಂದ ನಡೆದಿದೆ' ಎಂದು ಪ್ರಾಂಶುಪಾಲರೊಬ್ಬರು ದೂರಿದರು.

ಸ್ಪರ್ಧೆ ಎದುರಿಸುವುದು ಕಷ್ಟ: 'ಖಾಸಗಿ ಕಾಲೇಜುಗಳಲ್ಲಿ ಓದಿದವರೊಂದಿಗೆ ಸ್ಪರ್ಧಿಸಬೇಕಾದರೆ ಸರ್ಕಾರಿ ಕಾಲೇಜುಗಳಲ್ಲಿ ಓದಿದವರು ಕೌಶಲ ಹೆಚ್ಚಿಸಿಕೊಳ್ಳಬೇಕು. ಗುಣಮಟ್ಟದ ಶಿಕ್ಷಣ ಸಿಗಬೇಕು. ಆದರೆ, ಹಾಗಾಗುತ್ತಿಲ್ಲ. ಪ್ರಯೋಗಾಲಯದಲ್ಲಿ ಯೂನಿವರ್ಸಲ್ ಟೆಸ್ಟಿಂಗ್ ಮಷಿನ್ ಇಲ್ಲದಿದ್ದರೂ ಪಾಸಾಗುವವರಿಂದ ಉತ್ತಮ ಕೌಶಲ ನಿರೀಕ್ಷಿಸಲು ಸಾಧ್ಯವೇ' ಎಂಬುದು ಪ್ರಾಂಶುಪಾಲರೊಬ್ಬರ ಪ್ರಶ್ನೆ.

ಕೋವಿಡ್‌ನಿಂದಾಗಿ ಇಳಿಕೆ: 'ಕೋವಿಡ್‌ನಿಂದಾಗಿ ಎರಡು ವರ್ಷಗಳಿಂದ ದಾಖಲಾತಿಯಲ್ಲಿ ಸ್ವಲ್ಪ ಕಡಿಮೆಯಾಗಿದೆ. ಖಾಸಗಿ ಕಾಲೇಜುಗಳಲ್ಲೂ ಇದೇ ಪರಿಸ್ಥಿತಿ. ಎರಡನೇ ವರ್ಷದಲ್ಲಿ ಲ್ಯಾಟರಲ್ ಎಂಟ್ರಿ ಮೂಲಕ ಡಿಪ್ಲೊಮಾ ವಿದ್ಯಾರ್ಥಿಗಳು ಬರುತ್ತಾರೆ. ಆಗ ಸೀಟುಗಳು ಖಾಲಿ ಇರುವುದಿಲ್ಲ. ಕಾಲೇಜುಗಳಿಗೆ ಬೇಡಿಕೆ ಕಡಿಮೆಯಾಗುವುದಿಲ್ಲ. ಆದರೆ, ಸೌಲಭ್ಯಗಳನ್ನು ಕಲ್ಪಿಸಬೇಕಾದ್ದು ಸರ್ಕಾರದ ಜವಾಬ್ದಾರಿ' ಎಂಬುದು ಮತ್ತೊಬ್ಬ ಪ್ರಾಂಶುಪಾಲರ ಪ್ರತಿಪಾದನೆ.

'ಉದ್ಯೋಗ ಕಡಿತವಾಗಿದ್ದರಿಂದ ಸಿವಿಲ್, ಮೆಕ್ಯಾನಿಕಲ್‌ಗೆ ಬೇಡಿಕೆ ಕಡಿಮೆಯಾಗಿತ್ತು. ಮುಂದೆ ಸುಧಾರಣೆಯಾಗಲಿದೆ. ಹೊಸ ತಂತ್ರಜ್ಞಾನಕ್ಕೆ ಅನುಗುಣವಾಗಿ ಹೊಸ ಕೋರ್ಸ್‌ಗಳನ್ನು ಆರಂಭಿಸಬೇಕು. ಆದರೆ, ಇಚ್ಛಾಶಕ್ತಿಯ ಕೊರತೆ ಹಾಗೂ ಕೆಲವು ಶಕ್ತಿಗಳ ಕೈವಾಡದಿಂದ ಆಗಿಲ್ಲ. ಹೀಗಾಗಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಸೊರಗುತ್ತಿವೆ' ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರಿ ಎಂಜಿನಿಯರಿಂಗ್ ಕಾಲೇಜು	ಮಂಜೂರಾದ ಹುದ್ದೆ	ಭರ್ತಿ	ಖಾಲಿ	ಮೊದಲ ವರ್ಷದ ಸೀಟುಗಳ ಸಂಖ್ಯೆ	ದಾಖಲಾತಿ
ಶ್ರೀಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು	55 (152)*	35 (39)	20 (113)	230	152
ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಹೂವಿನಹಡಗಲಿ	53 (45)	21 (12)	32 (33)	260	116
ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ರಾಮನಗರ	55 (99)	44 (12)	11 (87)	240	240
ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಹಾವೇರಿ	53 (108)	43 (12)	10 (96)	240	200
ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಕಾರವಾರ	57 (114)	14 (8)	43 (106)	252	124
ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ರಾಯಚೂರು	91 (85)	35 (16)	56 (69)	240	133
ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಚಾಮರಾಜನಗರ	48 (46)	33 (5)	15 (41)	240	114
ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಹಾಸನ	52 (38)	37 (1)	15 (37)	240	203
ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಕೆ.ಆರ್.ಪೇಟೆ	107 (54)	31 (8)	76 (46)	240	180
ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಕುಶಾಲನಗರ	62 (100)	26 (10)	36 (10)	240	170
ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಮೊಸಳೆಹೊಸಹಳ್ಳಿ	67	19	48	300	204
ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ತಳಕಲ್	30	7	23	300	168
ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಗಂಗಾವತಿ	34	6	28	300	102
ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಚಳ್ಳಕೆರೆ	10	3	7	120	63

(* ಆವರಣದಲ್ಲಿ ಇರುವುದು ಬೋಧಕೇತರ ಹುದ್ದೆಗಳ ಮಾಹಿತಿ)

'ಐಐಟಿ ಮಾದರಿಯಲ್ಲಿ ಅನುದಾನ ನೀಡಲಿ'

ಸರ್ಕಾರಿ ಸ್ವಾಮ್ಯದ ಐಐಟಿ, ಐಐಎಂ, ಐಐಎಸ್ಸಿ ಸ್ವಾಯತ್ತ ಸಂಸ್ಥೆಗಳಾಗಿದ್ದು, ಅವು ಮಾದರಿಯಾಗಿವೆ. ಅವುಗಳ ನಿರ್ವಹಣೆಗೆ ಅಗತ್ಯವಿರುವ ಅನುದಾನವನ್ನು ಪ್ರತಿವರ್ಷ ನೀಡಲಾಗುತ್ತದೆ. ಅದೇ ರೀತಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಗೂ ನೀಡಬೇಕು. ಅಲ್ಲದೆ ಎಂಜಿನಿಯರಿಂಗ್ ಕಾಲೇಜುಗಳಿಗೆ ಸೀಮಿತವಾಗಿ ಪ್ರತ್ಯೇಕ ಆಯುಕ್ತಾಲಯ ಸ್ಥಾಪಿಸಿ, ಅದರ ವ್ಯಾಪ್ತಿಗೆ ಇವುಗಳನ್ನು ತರಬೇಕು. ಆಗ ತ್ವರಿತವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಲಿದೆ ಎಂಬುದು ಪ್ರಾಧ್ಯಾಪಕರೊಬ್ಬರ ಅಭಿಪ್ರಾಯ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 13-3-1997

• ಮಹಿಳಾ ಮೀಸಲು ಮಸೂದೆ ಪ್ರಸಕ್ತ ಅಧಿವೇಶನದಲ್ಲಿ ಮಂಡನೆ

ಬೀದರ್, ಮಾರ್ಚ್ 12: ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33 ರಷ್ಟು ಸ್ಥಾನ ಮೀಸಲಾತಿ ಕಲ್ಪಿಸುವ ಮಸೂದೆಯನ್ನು ಸಂಸತ್ತಿನ ಪ್ರಸಕ್ತ ಅಧಿವೇಶ ಮುಗಿಯುವುದರೊಳಗೆ ಮಂಡಿಸಲಾಗುವುದು ಎಂದು ಪ್ರಧಾನಿ ಎಚ್.ಡಿ ದೇವೇಗೌಡ ಇಂದು ಇಲ್ಲಿ ಸ್ಪಷ್ಟಪಡಿಸಿದರು.

• ಉ.ಪ್ರದೇಶ: ರಂಗದ ಸದಸ್ಯರಿಗೆ 'ವಿಪ್'

ನವದೆಹಲಿ,ಮಾರ್ಚ್ 12 (ಪಿಟಿಐ)– ಉತ್ತರ ಪ್ರದೇಶದಲ್ಲಿ ರಾಷ್ಟ್ರಪತಿ ಆಡಳಿತ ವಿಸ್ತರಿಸಲು ಲೋಕಸಭೆಯಲ್ಲಿ ನಾಳೆ ಬೆಂಬಲ ಕೋರಲಿರುವ ಸಂದರ್ಭದಲ್ಲಿ ಎಲ್ಲಾ ಸಂಸತ್ತು ಸದಸ್ಯರು ಹಾಜರಿರಬೇಕೆಂದು ಮೂರು ಸಾಲುಗಳ 'ವಿಪ್' ಅನ್ನು ಸಂಯುಕ್ತ ರಂಗ ಇಂದು ತನ್ನ ಲೋಕಸಭಾ ಸದಸ್ಯರಿಗೆ ನೀಡಿದೆ.

50 ವರ್ಷಗಳ ಹಿಂದೆ

ಸೋಮವಾರ, 13-3-1972

• ಆಡಳಿತ ಕಾಂಗ್ರೆಸ್‌ಗೆ 166 ಸ್ಥಾನಗಳ ಪ್ರಚಂಡ ಜಯ

ನವದೆಹಲಿ, ಮಾರ್ಚ್.12 – ಮಹಾರಾಷ್ಟ್ರದಲ್ಲಿ ತನ್ನ ಸಂಖ್ಯಾಬಲವನ್ನು ಗಣನೀಯವಾಗಿ ಹೆಚ್ಚಿಸಿಕೊಂಡ ಕಾಂಗ್ರೆಸ್ ಸಂಸ್ಥಾ ಕಾಂಗ್ರೆಸನ್ನು ಈ ಮೊದಲು ಅದರ ಸುಭದ್ರ ರಾಜ್ಯಗಳಾಗಿದ್ದ ಮೈಸೂರು ಮತ್ತು ಗುಜರಾತ್‌ಗಳಲ್ಲಿ ಬಗ್ಗು ಬಡಿದ ಕಾಂಗ್ರೆಸ್ ಪಕ್ಷ ಇಂದು ಆಂಧ್ರ, ಹಿಮಾಚಲ ಪ್ರದೇಶ ಮತ್ತು ದೆಹಲಿಗಳಲ್ಲಿ ಕೂಡ ಬಹುಮತ ಪಕ್ಷವಾಗಿ ಜಯಭೇರಿ ಹೊಡೆದಿದ್ದಾರೆ.

• ಅರಸುಗೆ ಹೈಕಮಾಂಡ್ ಬೆಂಬಲ?

ನವದೆಹಲಿ,ಮಾರ್ಚ್.12– ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ದೇವರಾಜು ಅರಸು ರಾಜ್ಯದ ಮುಖ್ಯಮಂತ್ರಿಯಾಗುವುದನ್ನು ಕಾಂಗ್ರೆಸ್ ಹೈಕಮಾಂಡ್ ಬೆಂಬಲಿಸುವ ನಿರೀಕ್ಷೆಯಿದೆ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಮಾರ್ಚ್ 13, 2022

13 ಮಾರ್ಚ್ 2022 ಭಾನುವಾರ
ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಕುಂಭ ಮಾಸದ 29 ನೇ ದಿನ
ತಿಥಿ: (ಫಾಲ್ಗುಣ ಶುಕ್ಲ) ದಶಮಿ ಗಂ. 10-22 ನಕ್ಷತ್ರ: ಪುನರ್ವಸು ಗಂ. 20-06
ಯೋಗ: ಶೋಭನ ಗಂ. 28-17, ಕರಣ: ಗರಜೆ ಗಂ. 10-22.
ರಾಹುಕಾಲ: ಸಾಯಂಕಾಲ 04:30–06:00
ಸೂರ್ಯೋದಯ: 06-43 ಸೂರ್ಯಾಸ್ತ: 06-37
ಮುಸ್ಲಿಂ ದಿನಾಂಕ: 09 ಶಬನ್, ಅದೃಷ್ಟ ಸಂಖ್ಯೆ: 6, 10

ಮೇಷ: ಮನೆಯಲ್ಲಿನ ಕೌಟುಂಬಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಹಿರಿಯರ ಸಲಹೆ ಪಡೆದು ಒಂದು ತೀರ್ಮಾನಕ್ಕೆ ಬರುವುದು ಉತ್ತಮ. ಅಭಿನಯ ಕಲಿಯಲು ಆಸಕ್ತಿ ಉಂಟಾಗುವುದು

ವೃಷಭ: ತುಂಬಾ ಆತ್ಮೀಯರಂತೆ ಮುಖವಾಡ ಹೊಂದಿರುವ ನಿಮ್ಮ ಹಿತಶತ್ರುಗಳ ಬಣ್ಣ ಬಯಲಾಗಲಿದೆ. ಮನೆಯಲ್ಲಿ ನೆಡೆಯಬೇಕಾದ ಮಂಗಳ ಕಾರ್ಯದ ಕುರಿತು ಹಿರಿಯರೊಂದಿಗೆ ಹೆಚ್ಚಿನ ಸಮಾಲೋಚನೆ ನಡೆಸುವಿರಿ.

ಮಿಥುನ: ಆರ್ಥಿಕವಾಗಿ ಖರ್ಚಿನ ಮೇಲೆ ನಿಯಂತ್ರಣವಿರಲಿ. ನಿಮ್ಮ ಅಭಿವೃದ್ಧಿಗೆ ನಿಮ್ಮ ಸ್ನೇಹಿತರ ಬಳಗವು ಕಾರಣವಾಗುತ್ತದೆ. ಸಜ್ಜನರ ಒಡನಾಟದಿಂದ ಯಶೋಭಿವೃದ್ಧಿ ಉಂಟಾಗಲಿದೆ.

ಕರ್ಕಾಟಕ: ಈ ದಿನ ಕೆಲಸಗಳನ್ನು ಸಮರ್ಪಕವಾಗಿ ಮಾಡಿದ ತೃಪ್ತಿಕರ ಭಾವ ನಿಮ್ಮಲ್ಲುಂಟಾಗಲಿದೆ. ದಿನದಲ್ಲಿ ಅಧಿಕ ಸಮಯ ಸಂತೋಷವಿರುವುದು. ಸಾಮಾಜಿಕ ಸಂಘ-ಸಂಸ್ಥೆಗಳ ಪದಾಧಿಕಾರ ಆಕಸ್ಮಿಕವಾಗಿ ದೊರಕುವುದು.

ಸಿಂಹ: ವ್ಯಾವಹಾರಿಕವಾದ ಸುಖ ಸಂಪತ್ತು ಅಧಿಕ ಮಟ್ಟದಲ್ಲಿ ಇದ್ದರೂ ಭವಿಷ್ಯದ ಚಿಂತೆಯು ನಿದ್ದೆಗೆಡೆಸುತ್ತದೆ. ವಸ್ತ್ರ ವಿನ್ಯಾಸ, ಚಿತ್ರಕಲೆ, ಕಥೆ-ಕವನಗಳ ಬರವಣಿಗೆಯಲ್ಲಿ ಹೆಚ್ಚಿನ ಆಸಕ್ತಿ ಮೂಡಲಿದೆ. ಆಹಾರದಲ್ಲಿ ಪಥ್ಯವಿರಲಿ.

ಕನ್ಯಾ: ಆಗೊಂದು ಈಗೊಂದು ಸಲ ನೆರೆಹೊರೆಯವರ ಕಿರಿಕಿರಿ ತಪ್ಪದು. ಎಲ್ಲಾ ವಿಚಾರದಲ್ಲೂ ಸಾವಧಾನವಾಗಿ ಮುಂದುವರಿಯುವುದು ಉತ್ತಮವಾಗಿರುತ್ತದೆ.

ತುಲಾ: ಅತೀ ಸಂಭ್ರಮದ ಜೀವನ ಶೈಲಿಯಿಂದ ಖರ್ಚುಗಳು ಸಂಭವಿಸುವುದು. ಆದರೆ ಆದಾಯಕ್ಕೆ ಯಾವುದೇ ರೀತಿಯಲ್ಲಿಯೂ ತೊಂದರೆಯಾಗಲಾರದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುತ್ತದೆ.

ವೃಶ್ಚಿಕ: ಈ ದಿನ ನೀವು ಮಾಡುವ ತಪ್ಪಿನಿಂದಾಗಿ ಜೀವನ ಪರ್ಯಂತ ನೆನಪಿಟ್ಟುಕೊಳ್ಳುವ ಪಾಠವನ್ನು ಕಲಿಯುವಂತಾಗಲಿದೆ. ಅವಿವಾಹಿತರಿಗೆ ಬಹಳ ದಿನಗಳಿಂದ ನಿರೀಕ್ಷಿಸಿದ ಸಂಬಂಧಗಳು ಕೂಡಿ ಬರಲಿದೆ.

ಧನು: ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರುವುದು ಲೇಸು. ಕುಟುಂಬದಲ್ಲಿ ಶುಭಕಾರ್ಯಗಳ ಸಂಭ್ರಮವು ಹಿರಿಯರ ಮನಸ್ಸಿಗೆ ನೆಮ್ಮದಿ ತರುತ್ತದೆ.

ಮಕರ: ಸಹೋದ್ಯೋಗಿಗಳಲ್ಲಿ ಗೌರವಾನ್ವಿತವಾಗಿ ವರ್ತಿಸುವುದರಿಂದ ನಿಮ್ಮ ಕೆಲಸ ಸರಾಗವಾಗಿ ಸಾಗಲಿದೆ. ಹಿಂದಿನ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಗಮನ ನೀಡಿ.

ಕುಂಭ: ಮಕ್ಕಳ ವಿದ್ಯಾಭ್ಯಾಸ ಅಥವಾ ವಿವಾಹದ ವಿಚಾರವಾಗಿ ಅನಾವಶ್ಯಕವಾದ ಹಾಗು ಅತೀಯಾದ ಯೋಚನೆಗಳನ್ನು ಮಾಡಬೇಡಿ. ಬಂಧು-ಮಿತ್ರರ ಮನೆಗೆ ಬೇಟಿ ಕೊಡುವ ಮನಸ್ಸಾಗಲಿದೆ.


ಮೀನ: ಮುಂದಿನ ಯೋಜನೆಗಳ ಬಗ್ಗೆ ಈ ದಿನದಿಂದಲೇ ಕಾರ್ಯಾಚರಣೆ ಪ್ರಾರಂಭಿಸುವಿರಿ. ಕಟ್ಟಡ ಕಾರ್ಮಿಕರಿಗೆ ಮತ್ತು ದಿನಕೂಲಿಗಾರರಿಗೆ ಸಾಕಷ್ಟು ಅವಕಾಶಗಳು ಸಿಗುವುದು.

ಪದಬಂಧ 4896

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕನ್ನಡಿಗರ ನಾಡು (4)
3.ಸಜ್ಜನನನ್ನು ಹೀಗೂ ಕರೆವರು (3)
4.ಜೊತೆಯಲ್ಲಿ ವಾಸಿಸುವಿಕೆ (4)
6.ಆದಾಯ ಮತ್ತು ಖರ್ಚು (4)
7.ಬಿಡದಿ ಹತ್ತಿರವಿರುವ ಹೆಂಡತಿ (3)
8.ಲಲಿತ ಕಲೆಗಳನ್ನು ಬಲ್ಲವನು (4)
11.ಹಜಾರ ಇಲ್ಲಿದೆ (4)
13.ಗರಿಯನ್ನು ಹೆಣೆದು ಮಾಡಿದ ತಟ್ಟಿ (3)
14.ಸುತ್ತಲಿನ ಜನ (4)

ಮೇಲಿಂದ ಕೆಳಕ್ಕೆ
1.ಇದು ಕನ್ನಡಿಗನ ಚಾಳೀಸು (4)
2.ಕನಸಲ್ಲಿ ಕಾಣಿಸಿದ ಕೊಳೆ! (2)
3.ಕಬ್ಬಿಣದ ಭಾರೀ ಪೆಟ್ಟಿಗೆ (3)
5.ಮಯನ ಹತ್ತಿರ ಕಳೆದ ಕಾಲ (3)
6.ಅಂತ್ಯದ ವಿರುದ್ಧ ಪದ (2)
7.ಮನದಲ್ಲೇ ಇರುವ ಸೊಕ್ಕು! (2)
8.ಕದಕ್ಕಾಗಿ ನಡೆದ ಯುದ್ಧ (3)
9.ಅನ್ಯಮಾರ್ಗವು ಈ ತರ ಬಂದಿದೆಯಲ್ಲಾ! (4)
10.ಓಬವ್ವನ ಆಯುಧ (3)
12.ನೆನಪಲ್ಲೇ ಇರುವ ಕಾರಣ ಗೊತ್ತಾಯಿತೇ? (2)



4895ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ರುದ್ರಭೂಮಿ 3.ನಾಟಕ 5.ಉಯಬ 7.ನಾಸಿಕ 8.ವಶೀಕರಣ 11.ಹೂಬಾಣ 12.ಶರಭ 15.ಜನನಿ 16.ಪರಾಜಿತ
ಮೇಲಿಂದ ಕೆಳಕ್ಕೆ: 1.ರುಮಾಲು 2.ಮಿಥ್ಯ 3.ನಾಸ್ತಿಕ 4.ಕಟವಾಯಿ 6.ಬಡವ 7.ನಾಮಕರಣ 9.ಣರಶ 10.ಮಲಯಜ 11.ಹೂದಾನಿ 13.ಭರತ 14.ಶಾಪ

ಸುಡೊಕು 5282

7				1			8	
	3	6	8		9	5	1	7
4			7				9	
	7							
		4	9	3	8		7	
8		1						
	8			9			4	
1		2		8		7		
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5281 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಉಕ್ರೇನ್‌ನಲ್ಲಿ ಜೈವಿಕ ಅಸ್ತ್ರ ಪ್ರಯೋಗಾಲಯ: ರಷ್ಯಾ ಗಂಭೀರ ಆರೋಪ; ಅಮೆರಿಕ ನಿರಾಕರಣೆ

ಜೈವಿಕ, ಅಣ್ವಸ್ತ್ರ: ಚರ್ಚೆಗೆ ಭಾರತ ಸಲಹೆ

ವಿಶ್ವಸಂಸ್ಥೆ (ಪಿಟಿಐ): ಜೈವಿಕ ಮತ್ತು ಅಣ್ವಸ್ತ್ರಗಳಿಗೆ ಸಂಬಂಧಿಸಿದ ಯಾವುದೇ ವಿಷಯವು ಸಂಬಂಧಿತ ಭಾಗಿದಾರ ದೇಶಗಳ ಜತೆ ಸಮಾಲೋಚನೆ ಮತ್ತು ಸಹಕಾರದಲ್ಲಿಯೇ ಇತ್ಯರ್ಥವಾಗಬೇಕು ಎಂದು ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಭಾರತ ಪ್ರತಿಪಾದಿಸಿದೆ.

ಯುದ್ಧಪೀಡಿತ ಉಕ್ರೇನ್‌ನಲ್ಲಿ ಇರುವ ಜೈವಿಕ ಪ್ರಯೋಗಾಲಯ ಕುರಿತ ವಿಷಯ ಚರ್ಚೆಗೆ ಬಂದಾಗ ಭಾರತ ತನ್ನ ನಿಲುವನ್ನು ಸ್ಪಷ್ಟಪಡಿಸಿತು. ಅಮೆರಿಕ ನೆರವಿನಲ್ಲಿ ಉಕ್ರೇನ್ ರಾಸಾಯನಿಕ, ಜೈವಿಕ ಅಸ್ತ್ರಗಳ ಪ್ರಯೋಗಾಲಯಗಳನ್ನು ನಿರ್ವಹಿಸುತ್ತಿದೆ ಎಂದು ರಷ್ಯಾ ಆರೋಪಿಸಿದೆ. ಅಮೆರಿಕ ಈ ಆರೋಪ ನಿರಾಕರಿಸಿದ ಬೆನ್ನಲ್ಲೇ, ರಷ್ಯಾ ಸಭೆಗೆ ಆಗ್ರಹಪಡಿಸಿತ್ತು.

'ಉಕ್ರೇನ್‌ನ ಬೆಳವಣಿಗೆ ಬಗ್ಗೆ ನಾವು ಆತಂಕ ವ್ಯಕ್ತಪಡಿಸಿದ್ದೇವೆ. ಜೈವಿಕ ಅಸ್ತ್ರಗಳ ಪ್ರಯೋಗಾಲಯದ ಚಟುವಟಿಕೆ ಕುರಿತಂತೆ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಸದಸ್ಯ ರಾಷ್ಟ್ರಗಳು ಇತ್ತೀಚೆಗೆ ನೀಡಿರುವ ಹೇಳಿಕೆಗಳನ್ನು ಭಾರತ ಗಮನಿಸಿದೆ' ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿ ಟಿ.ಎಸ್.ತಿರುಮೂರ್ತಿ ಅವರು ಹೇಳಿದರು.

ಜೈವಿಕ ಮತ್ತು ಅಣ್ವಸ್ತ್ರ ಸಮಾವೇಶದಲ್ಲಿ (ಬಿಟಿಡಬ್ಲ್ಯುಸಿ) ಭಾರತ ತನ್ನ ನಿಲುವನ್ನು ಪುನರುಚ್ಚರಿಸಲಿದೆ. ಬಿಟಿಡಬ್ಲ್ಯುಸಿ ನಿರ್ಣಯಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ಅಗತ್ಯವಾಗಿದೆ ಎಂದು ಅವರು ಹೇಳಿದರು.

ಉಕ್ರೇನ್ ಮೇಲಿನ ದಾಳಿ ಕುರಿತು ವಿವರಿಸಿದ ವಿಶ್ವಸಂಸ್ಥೆಯ ರಾಜಕೀಯ ಮತ್ತು ಶಾಂತಿ ಸ್ಥಾಪನಾ ಸಮಿತಿಯ ಪ್ರಧಾನ ಕಾರ್ಯದರ್ಶಿ ರೋಸ್‌ಮೇರಿ ಡಿಕಾರ್ಲೊ ಅವರು, 'ಉಕ್ರೇನ್‌ನ ಮರಿಯುಪೋಲ್, ಹಾರ್ಕಿವ್, ಸುಮಿ ಮತ್ತು ಚೆರ್ನಿವ್‌ನಲ್ಲಿ ಪರಿಸ್ಥಿತಿ ಗಂಭೀರವಾಗಿದೆ. ವಸತಿ ಪ್ರದೇಶ, ಮೂಲಸೌಕರ್ಯಗಳ ಮೇಲೆ ದಾಳಿ ನಡೆದಿದೆ' ಎಂದರು.



ಉಕ್ರೇನ್‌ನ ಕೀವ್ ನಗರದಲ್ಲಿ ಶನಿವಾರ ರಷ್ಯಾ ಪಡೆಗಳು ನಡೆಸಿದ ಶೆಲ್ ದಾಳಿಗೆ ಮನೆಗಳು ಹೊತ್ತಿ ಉರಿದವು. ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಲು ಹರಸಾಹಸಪಟ್ಟರು – ಎಎಫ್‌ಪಿ ಚಿತ್ರ

ಇಂಧನ ಸಂಘರ್ಷಕ್ಕೂ ಸೈ: ರಷ್ಯಾ ಎಚ್ಚರಿಕೆ

ಮಾಸ್ಕೊ (ರಾಯಿಟರ್ಸ್): ಉಕ್ರೇನ್ ಮೇಲಿನ ದಾಳಿಯಿಂದಾಗಿ ರಷ್ಯಾದ ಮೇಲೆ ವಿವಿಧ ದೇಶಗಳು ಹೇರಿರುವ ನಿರ್ಬಂಧದ ಕಾರಣ ಇಂಧನ ದರ ತೀವ್ರಗತಿಯಲ್ಲಿ ಏರಿಕೆಯಾಗಬಹುದು ಎಂದು ರಷ್ಯಾವು ಯುರೋಪ್ ರಾಷ್ಟ್ರಗಳಿಗೆ ಎಚ್ಚರಿಸಿದೆ.

ರಷ್ಯಾದ ವಿದೇಶಾಂಗ ಸಚಿವಾಲಯದ ಹಿರಿಯ ಅಧಿಕಾರಿ ನಿಕೊಲಾಯ್ ಕೊಬ್ರಿನೆಟ್ಸ್ ಅವರು, ಇಂಧನ ಪೂರೈಕೆಯಲ್ಲಿ ರಷ್ಯಾ ಸ್ವಾವಲಂಬಿ. ಅಗತ್ಯ ಬಿದ್ದರೆ ಈ ಕ್ಷೇತ್ರದಲ್ಲಿ ಸಂಘರ್ಷಕ್ಕೂ ಸಿದ್ಧ ಎಂದರು. ಆದರೆ, ಎದುರಾಗಬಹುದಾದ ಸಂಘರ್ಷದ ಸ್ವರೂಪದ ಬಗ್ಗೆ ಅವರು ಏನನ್ನೂ ಹೇಳಲಿಲ್ಲ.

ರಷ್ಯಾ ತೊರೆಯುತ್ತಿರುವ ಕಂಪನಿಗಳು

ಕೀವ್ (ಎಪಿ): ಉಕ್ರೇನ್ ಹಾಗೂ ರಷ್ಯಾ ನಡುವಿನ ಸಂಘರ್ಷ ತೀವ್ರಗೊಳ್ಳುತ್ತಿದ್ದು, ರಷ್ಯಾದ ಆರ್ಥಿಕತೆಯ ಮೇಲೆ ಹೊಡೆತ ಬೀಳುತ್ತಿದೆ.

ರಷ್ಯಾ ನಡೆಸುತ್ತಿರುವ ಯುದ್ಧದಿಂದ ದೇಶದಲ್ಲಿರುವ ದೊಡ್ಡ ಕಂಪನಿಗಳು ತೀವ್ರ ನಲುಗಿದ್ದು, ಇಲ್ಲಿನ ತಮ್ಮ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸಿ ದೇಶ ತೊರೆಯುತ್ತಿವೆ. ಇನ್ನೊಂದೆಡೆ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಇಂತಹ ಕಂಪನಿಗಳಿಗೆ ಕಠಿಣ ಎಚ್ಚರಿಕೆ ನೀಡಿದ್ದಾರೆ.

'ಒಂದು ವೇಳೆ ವಿದೇಶಿ ಕಂಪನಿಗಳು ದೇಶ ತೊರೆದರೆ, ಆ ಕಂಪನಿಗಳಿಗೆ ಸಂಬಂಧಿಸಿದ ಆಸ್ತಿ ಮುಟ್ಟುಗೋಲು ಹಾಕಿಕೊಂಡು, ಹೊಸಬರಿಗೆ ಅವಕಾಶ ನೀಡಲಾಗುತ್ತದೆ' ಎಂದು ಪುಟಿನ್ ಹೇಳಿದ್ದಾರೆ.

ಮಾಸ್ಕೊದಲ್ಲಿರುವ 'ಎವ್ರೊಪಿಸ್ಕಿ' ಮಾಲ್ ಜಾಗತಿಕ ಮಟ್ಟದಲ್ಲಿ ಹೆಸರು ಪಡೆದಿದೆ. ಉಕ್ರೇನ್‌ನೊಡನೆ ಸಂಘರ್ಷ ಆರಂಭವಾದಾಗಿನಿಂದ ಅನೇಕ ಕಂಪನಿಗಳು ಎವ್ರೊಪಿಸ್ಕಿ ಮಾಲ್ ತೊರೆಯುತ್ತಿವೆ. ಜನರಿಂದ ಸದಾ ಕಿಕ್ಕಿರಿದು ತುಂಬಿರುತ್ತಿದ್ದ ಮಾಲ್ ಈಗ ನಿರ್ಜನವಾಗಿದೆ.

ಭಾರತಕ್ಕೆ ಶಸ್ತ್ರಾಸ್ತ್ರ ಪೂರೈಕೆ ಮುಂದುವರಿಕೆ: ಅಮೆರಿಕ

ವಾಷಿಂಗ್ಟನ್ (ಪಿಟಿಐ): 'ಚೀನಾ ಗಡಿಯಲ್ಲಿ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಉದ್ದಕ್ಕೂ ಭಾರತಕ್ಕೆ ಅಗತ್ಯವಿರುವ ಶಸ್ತ್ರಾಸ್ತ್ರಗಳ ಪೂರೈಕೆ ಮುಂದುವರಿಯಲಿದೆ' ಎಂದು ಅಮೆರಿಕ ಹೇಳಿದೆ.

ಸಶಸ್ತ್ರ ಸೇವೆಗಳ ಮೇಲಿನ ಸದನ ಸಮಿತಿಯು ನಡೆಸಿದ ವಿಚಾರಣೆ ವೇಳೆ, ಅಮೆರಿಕ ಮತ್ತು ಇಂಡೊ-ಪೆಸಿಫಿಕ್ ಪ್ರದೇಶಕ್ಕೆ ಸಂಬಂಧಿಸಿದ ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಜಾನ್ ಅಕ್ವಿಲಿನೊ ಈ ವಿಷಯ ತಿಳಿಸಿದರು.

'ಮಿಲಿಟರಿ ನೆರವಿನಲ್ಲಿ ದ್ವಿಪಕ್ಷೀಯ ಸಂಬಂಧ ಸೇರಿ ಭಾರತದ ಜತೆಗಿನ ಬಾಂಧವ್ಯ ಉತ್ತಮವಾಗಿದೆ' ಎಂದು ಅವರು ಸಮಿತಿ ಸದಸ್ಯ ಗ್ಯಾರಿ ಪೀಟರ್ಸ್ ಅವರ ಪ್ರಶ್ನೆಗೆ ಉತ್ತರಿಸಿದರು.

ಕೀವ್ ನಗರದ ಮೇಲೆ ರಷ್ಯಾ ಪ್ರಹಾರ

ಒಂದನೇ ಪುಟದಿಂದ

ಶನಿವಾರದ ದಾಳಿಯಲ್ಲಿ ಎರಡೂ ಕಡೆಯ ಸಾವಿರಾರು ಯೋಧರು ಜತೆಗೆ ನಾಗರಿಕರು ಹತರಾಗಿದ್ದಾರೆ ಎಂದು ಝೆಲೆನ್‌ಸ್ಕಿ ಹೇಳಿದ್ದಾರೆ.

ಯುದ್ಧ 17ನೇ ದಿನಕ್ಕೆ ಕಾಲಿಟ್ಟಿದ್ದು, ತಂತ್ರ ಬದಲಿಸಿರುವ ರಷ್ಯಾ ಪಡೆಗಳು, ಕೈಗಾರಿಕ ಪ್ರದೇಶಗಳು, ನಾಗರಿಕ ಪ್ರದೇಶಗಳನ್ನೇ ಹೆಚ್ಚು ಗುರಿಯಾಗಿಸಿ ದಾಳಿ ನಡೆಸುತ್ತಿವೆ. ರಷ್ಯಾದ ಯುದ್ಧ ಟ್ಯಾಂಕ್‌ಗಳು ಸಾಗುವ ಮಾರ್ಗದಲ್ಲಿ ಉಕ್ರೇನ್ ನಾಗರಿಕರು ಮಂಡಿಯೂರಿ ಕುಳಿತು, ತಮ್ಮ ದೇಶದ ಮೇಲೆ ದಾಳಿ ಮಾಡದಂತೆ ಮೊರೆಯಿಡುತ್ತಿರುವ ದೃಶ್ಯಗಳು ಕಾಣಿಸಿದವು.

ಕೀವ್ ಮತ್ತು ಡೊನೆಟ್ಸ್ಕ್ ಪ್ರದೇಶದಲ್ಲಿ ನಾಗರಿಕರನ್ನು ಸ್ಥಳಾಂತರಿಸುವ 'ಮಾನವೀಯ ಕಾರಿಡಾರ್'ಗಳಲ್ಲೂ ರಷ್ಯಾ ಪಡೆಗಳ ದಾಳಿ ಶನಿವಾರವೂ ಮುಂದುವರಿದಿದೆ ಎಂದು ಕೀವ್ ಮತ್ತು ಡೊನೆಟ್ಸ್ಕ್‌ನ ಗವರ್ನರ್‌ಗಳು ಪ್ರತ್ಯೇಕ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹೊತ್ತಿ ಉರಿಯುತ್ತಿರುವ ಕಟ್ಟಡಗಳಲ್ಲಿ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸುತ್ತಿರುವ, ದಾಳಿಯಲ್ಲಿ ಜೀವ ಕಳೆದುಕೊಂಡವರ ರಕ್ತಸಿಕ್ತ ದೇಹಗಳು ಬಿದ್ದಿರುವ ಚಿತ್ರಗಳನ್ನು ಶನಿವಾರ ಉಕ್ರೇನ್ ತುರ್ತು ಸೇವೆಗಳ ಏಜೆನ್ಸಿ ಬಿಡುಗಡೆ ಮಾಡಿದೆ.

ಕೀವ್, ಹಾರ್ಕಿವ್, ವಾಸಿಕಿವ್, ಮರಿಯುಪೋಲ್, ಮೈಕೊಲೈವ್ ಹಾಗೂ ಡಾನ್‌ಬಾಸ್ ಪ್ರದೇಶದಲ್ಲಿ ರಷ್ಯಾದಿಂದ ಮತ್ತಷ್ಟು ತೀವ್ರ ದಾಳಿ ನಡೆಯುವ ಸಾಧ್ಯತೆ ಇದೆ ಎಂದು ಉಕ್ರೇನ್ ಅಧ್ಯಕ್ಷರ ಮುಖ್ಯ ಸಲಹೆಗಾರ ಒಲೆಕ್ಸಿ ಅರೆಸ್ಟೋವಿಚ್ ಶನಿವಾರ ಹೇಳಿದ್ದಾರೆ.

ಉಕ್ರೇನ್ ಯೋಧರೂ ನೆಲದಿಂದ ನಭಕ್ಕೆ ಚಿಮ್ಮುವ ಕ್ಷಿಪಣಿಗಳು, ರಾಕೆಟ್ ಚಾಲಿತ ಗ್ರೆನೇಡ್‌ಗಳು ಮತ್ತು ಡ್ರೋನ್‌ಗಳಿಂದ ರಷ್ಯಾ ಪಡೆಗಳಿಗೆ ತೀವ್ರ ಪ್ರತಿರೋಧ ತೋರುತ್ತಿದ್ದಾರೆ.

ಕೀವ್ ವಶಕ್ಕೆ ದಾಳಿ ತೀವ್ರ: ಕೀವ್ ವಶಕ್ಕೆ ಹಾತೊರೆಯುತ್ತಿರುವ ರಷ್ಯಾ ಸೇನೆ ದಾಳಿಯನ್ನು ತೀವ್ರಗೊಳಿಸಿದೆ. ಶನಿವಾರ ರಾಷ್ಟ್ರದ ಹಲವೆಡೆ ವಾಯು ದಾಳಿಯ ಸೈರನ್ ಕೇಳಿದ್ದಾಗಿ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಕೀವ್, ಒಡೆಸ್ಸಾ, ಲುವಿವ್, ಹಾರ್ಕಿವ್, ಚೆರ್ಕಾಸಿ, ಸುಮಿ ಮತ್ತಿತರ ನಗರಗಳಲ್ಲಿ ಶನಿವಾರ ನಸುಕಿನಲ್ಲಿ ವಾಯು ದಾಳಿಯ ಸೈರನ್ ಕೇಳಿಬಂದಿದ್ದಾಗಿ ಸ್ಥಳೀಯ ಮಾಧ್ಯಮಗಳ ಮಾಹಿತಿ ಉಲ್ಲೇಖಿಸಿ 'ರಾಯಿಟರ್ಸ್' ಸುದ್ದಿ ಸಂಸ್ಥೆ ವರದಿ ಮಾಡಿದೆ.

ರಷ್ಯಾದಿಂದ 810 ಕ್ಷಿಪಣಿಗಳ ಉಡಾವಣೆ

ರಷ್ಯಾದ ವಾಯುಪಡೆಯ ಪೈಲಟ್‌ಗಳು ದಿನಕ್ಕೆ ಸರಾಸರಿ 200 ಬಾರಿ ವೈಮಾನಿಕ ಹಾರಾಟಗಳನ್ನು ನಡೆಸುತ್ತಿದ್ದಾರೆ. ಸುಮಾರು 810 ಕ್ಷಿಪಣಿಗಳನ್ನು ಉಕ್ರೇನ್ ಮೇಲೆ ಉಡಾಯಿಸಲಾಗಿದೆ ಎಂದು ಅಮೆರಿಕದ ರಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ.

ಅಲ್ಲದೇ, ರಷ್ಯಾ ಪಡೆಗಳು ಜನನಿಬಿಡ ಪ್ರದೇಶಗಳಲ್ಲಿ ನಿಷೇಧಿತ ಕ್ಲಸ್ಟರ್ ಬಾಂಬ್‌ಗಳನ್ನು ಹಾಕುತ್ತಿವೆ ಎಂದು ವಿಶ್ವಸಂಸ್ಥೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸೇನಾ ಕಾರ್ಯಾಚರಣೆ ಆರಂಭವಾದಾಗಿನಿಂದ ಈವರೆಗೆ ಉಕ್ರೇನ್‌ನ ಒಟ್ಟು 3,491 ಸೇನಾ ಮೂಲಸೌಕರ್ಯಗಳನ್ನು ನಾಶಪಡಿಸಲಾಗಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ ಇಗೊರ್ ಕೊನಶೆಂಕೊವ್ ತಿಳಿಸಿರುವುದಾಗಿ ರಷ್ಯಾದ ಸುದ್ದಿ ಸಂಸ್ಥೆ ವರದಿ ಮಾಡಿದೆ.

ದಿನದ ಬೆಳವಣಿಗೆಗಳು

- ಉಕ್ರೇನ್‌ನಿಂದ ನಾಲ್ವರು ನೇಪಾಳಿ ಪ್ರಜೆಗಳನ್ನು ಕರೆತಂದಿದ್ದಕ್ಕೆ ಪ್ರಧಾನಿ ನರೇಂದ್ರ ಮೋದಿಗೆ ಧನ್ಯವಾದ ಸಲ್ಲಿಸಿದ ನೇಪಾಳ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ
- ಉಕ್ರೇನ್‌ಗೆ ಪಾಶ್ಚಾತ್ಯ ದೇಶಗಳ ಶಸ್ತ್ರಾಸ್ತ್ರ ಪೂರೈಕೆ ಅಪಾಯಕಾರಿ ನಡೆ. ಈ ಶಸ್ತ್ರಾಸ್ತ್ರಗಳೂ ನಮ್ಮ ಗುರಿ– ರಷ್ಯಾ ಎಚ್ಚರಿಕೆ
- ಚೆರ್ನೊಬಿಲ್ ಅಣು ವಿದ್ಯುತ್ ಸ್ಥಾವರದಲ್ಲಿ ವಿದ್ಯುತ್ ಮಾರ್ಗಗಳ ದುರಸ್ತಿ ಕಾರ್ಯ ಆರಂಭ– ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆ (ಐಎಇಎ)
- ಅಮೆರಿಕ ಒಪ್ಪುವುದಾದರೆ, ಶಸ್ತ್ರಾಸ್ತ್ರಗಳ ಬಳಕೆಗೆ ಕಡಿವಾಣ ಹಾಕುವ ಬಗ್ಗೆ ಆ ದೇಶದ ಜತೆ ಮಾತುಕತೆಗೆ ಸಿದ್ಧ– ರಷ್ಯಾ ಆಹ್ವಾನ
- ಪಾಶ್ಚಾತ್ಯ ದೇಶಗಳು ನಿರ್ಬಂಧ ಕೈಬಿಡದಿದ್ದರೆ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಭೂಮಿಗೆ ಅಪ್ಪಳಿಸಬಹುದು– ರಷ್ಯಾ ಬಾಹ್ಯಾಕಾಶ ಸಂಸ್ಥೆಯ ಮುಖ್ಯಸ್ಥ ಡಿಮಿಟ್ರ ರೊಗೊಜಿನ್ ಎಚ್ಚರಿಕೆ
- ಉಕ್ರೇನ್ ಮೇಲೆ ರಷ್ಯಾ ಸಾರಿರುವ ಯುದ್ಧಕ್ಕೆ ನಿಮ್ಮ ಮಕ್ಕಳನ್ನು ಕಳಿಸದಿರಿ– ರಷ್ಯಾದ ಯೋಧರ ತಾಯಂದಿರಿಗೆ ಝೆಲೆನ್‌ಸ್ಕಿ ಮನವಿ
- ರಷ್ಯಾ ಗಡಿಗೆ ಹೊಂದಿಕೊಂಡಿರುವ ನ್ಯಾಟೊ ರಾಷ್ಟ್ರಗಳಲ್ಲಿ ಅಮೆರಿಕದ 12,000 ಯೋಧರನ್ನು ನಿಯೋಜಿಸಲಾಗಿದೆ– ಅಧ್ಯಕ್ಷ ಜೋ ಬೈಡನ್
- ಅಮೆರಿಕ, ನ್ಯಾಟೊ ರಾಷ್ಟ್ರಗಳಿಂದ ಉಕ್ರೇನ್‌ಗೆ ವಾಯು ರಕ್ಷಣಾ ವ್ಯವಸ್ಥೆಯ ಕ್ಷಿಪಣಿಗಳೂ ಸೇರಿ ಅತ್ಯಂತ ಪ್ರಮುಖ ಶಸ್ತ್ರಾಸ್ತ್ರಗಳ ರವಾನೆ
- ರಷ್ಯಾ ನಿರ್ಮಿತ ಡ್ರೋನ್‌ವೊಂದು ಉಕ್ರೇನ್ ನೆಲದಿಂದ ನ್ಯಾಟೊ ರಾಷ್ಟ್ರಗಳನ್ನು ದಾಟಿ ಬಂದು ಕ್ರೊವೇಷಿಯಾದ ರಾಜಧಾನಿಯಲ್ಲಿ ಪತನಗೊಂಡಿದೆ, ಆದರೂ ನ್ಯಾಟೊ ಇದಕ್ಕೆ ತ್ವರಿತವಾಗಿ ಪ್ರತಿಕ್ರಿಯಿಸಿಲ್ಲ– ಕ್ರೊವೇಷಿಯಾ ಅಧಿಕಾರಿಗಳ ಟೀಕೆ

ಪದಾಧಿಕಾರಿಗಳ ನೇಮಕ: ಡಿ.ಕೆ. ಶಿವಕುಮಾರ್ ದೆಹಲಿಗೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೆಪಿಸಿಸಿ ಪದಾಧಿಕಾರಿಗಳು ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ನೇಮಕದ ಕುರಿತು ಚರ್ಚಿಸಲು ಪಕ್ಷದ ಹೈಕಮಾಂಡ್ ಸೂಚನೆ ಮೇರೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಶನಿವಾರ ರಾತ್ರಿ ದೆಹಲಿಗೆ ತೆರಳಿದ್ದಾರೆ.

ಕೆಪಿಸಿಸಿ ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಸೇರಿದಂತೆ ವಿವಿಧ ಹಂತದ ಪದಾಧಿಕಾರಿಗಳ ನೇಮಕಾತಿ ಬಹುದಿನಗಳಿಂದ ಬಾಕಿ ಇದೆ. ಜಿಲ್ಲಾ ಘಟಕಗಳಿಗೆ ಅಧ್ಯಕ್ಷರ ನೇಮಕದ ಸಂಬಂಧ ಆಯಾ ಜಿಲ್ಲೆಗಳಿಂದ ಅಭಿಪ್ರಾಯವನ್ನೂ ಪಡೆಯಲಾಗಿತ್ತು. ಎಲ್ಲ ಮಾಹಿತಿಯನ್ನು ಮುಂದಿಟ್ಟುಕೊಂಡು ಪಕ್ಷದ ಸಂಘಟನೆ ಬಲಪಡಿಸಲು ಅವಶ್ಯ ಇರುವವರನ್ನು ನೇಮಕ ಮಾಡುವ ಬಗ್ಗೆ ರಾಜ್ಯದ ನಾಯಕರ ಜತೆ ಹಲವು ಸುತ್ತಿನ ಸಮಾಲೋಚನೆಯನ್ನೂ ಶಿವಕುಮಾರ್ ನಡೆಸಿದ್ದರು.

ಪಟ್ಟಿ ಕುರಿತು ಚರ್ಚಿಸಲು ತಕ್ಷಣವೇ ದೆಹಲಿಗೆ ಬರುವಂತೆ ಹೈಕಮಾಂಡ್ ಸೂಚನೆ ಹಿನ್ನೆಲೆಯಲ್ಲಿ ಶಿವಕುಮಾರ್ ದೆಹಲಿಗೆ ತೆರಳಿದರು ಎಂದು ಮೂಲಗಳು ತಿಳಿಸಿವೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಕೆಪಿಸಿಸಿ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ ಅವರನ್ನು ಭೇಟಿಯಾಗಿ ಚರ್ಚಿಸಲಿದ್ದಾರೆ ಎಂದೂ ಹೇಳಿವೆ.

ಸೌದಿ: 81 ಮಂದಿಗೆ ಮರಣದಂಡನೆ

ರಿಯಾದ್(ಎಎಫ್‌ಪಿ): ಭಯೋತ್ಪಾದಕ ಚಟುವಟಿಕೆ, ಕೊಲೆ, ಸುಲಿಗೆ ಸೇರಿ ಗಂಭೀರ ಪ್ರಕರಣಗಳಲ್ಲಿ ಬಂಧಿತರಾಗಿದ್ದ ಒಟ್ಟು 81 ಮಂದಿಗೆ ಒಂದೇ ದಿನ ಮರಣದಂಡನೆ ಶಿಕ್ಷೆ ವಿಧಿಸಲಾಗಿದೆ ಎಂದು ಸೌದಿ ಅರೇಬಿಯಾ ಶನಿವಾರ ಹೇಳಿದೆ.

ಸೌದಿ ಅರೇಬಿಯಾದಲ್ಲಿ ಇತ್ತೀಚಿನ ದಿನಗಳಲ್ಲಿ ಒಂದೇ ದಿನ ಅತಿಹೆಚ್ಚು ಮಂದಿಯನ್ನು ಮರಣದಂಡನೆಗೆ ಗುರಿಪಡಿಸಲಾದ ಘಟನೆ ಇದು.

ಮಹಿಳೆಯರು, ಮಕ್ಕಳು ಸೇರಿ ಅಮಾಯಕ ಜನರನ್ನು ಕೊಲೆಗೈದ, ಅಲ್ ಕೈದಾ, ಐಎಸ್ ಉಗ್ರರು ಹಾಗೂ ಯೆಮನ್‌ನ ಹುತಿ ಬಂಡುಕೋರರುಗಲ್ಲು ಶಿಕ್ಷೆಗೆ ಗುರಿಯಾದ ಗುಂಪಿನಲ್ಲಿದ್ದರು ಎಂದು ಸರ್ಕಾರಿ ಸ್ವಾಮ್ಯದ 'ಸೌದಿ ಪ್ರೆಸ್ ಏಜೆನ್ಸಿ' ವರದಿ ಮಾಡಿದೆ.

'ಉಗ್ರ ಸಿದ್ಧಾಂತಗಳ ವಿರುದ್ಧ ರಾಜಮನೆತನ ಇಂಥದ್ದೇ ಕಠಿಣ ಕ್ರಮ ಕೈಗೊಳ್ಳಲಿದೆ' ಎಂದೂ ವರದಿ ಮಾಡಿದೆ.

ಖಾಲಿ ಉಳಿದಿರುವ 8,000 ಸೀಟುಗಳ ಭರ್ತಿಗೆ ಕ್ರಮ

ವೈದ್ಯಕೀಯ ಪಿ.ಜಿ: ಕಟ್‌ಆಫ್ ಪ್ರಮಾಣ ಇಳಿಕೆಗೆ ಸೂಚನೆ

ನವದೆಹಲಿ (ಪಿಟಿಐ): 2021ನೇ ಸಾಲಿನಲ್ಲಿ ಖಾಲಿ ಉಳಿದಿರುವ ವೈದ್ಯಕೀಯ ಶಿಕ್ಷಣದ ಸ್ನಾತಕೋತ್ತರ ಕೋರ್ಸ್‌ನ ಸೀಟುಗಳನ್ನು ಭರ್ತಿ ಮಾಡಲು ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್-ಪಿ.ಜಿ)ಯ ಕಟ್ ಆಫ್ ಅಂಕಗಳ ಪ್ರಮಾಣವನ್ನು ಶೇ 15ರಷ್ಟು ಇಳಿಸುವಂತೆ ಕೇಂದ್ರದ ಆರೋಗ್ಯ ಸಚಿವಾಲಯವು ರಾಷ್ಟ್ರೀಯ ಪರೀಕ್ಷಾ ಮಂಡಳಿಗೆ ನಿರ್ದೇಶನ ನೀಡಿದೆ.

ಈ ಸಂಬಂಧ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ)ದೊಂದಿಗೆ ಸಮಾಲೋಚನೆ ನಡೆಸಿರುವ ಆರೋಗ್ಯ ಸಚಿವಾಲಯವು, ಅರ್ಹತಾ ಪರೀಕ್ಷೆಯ ಕಟ್- ಆಫ್ ಪ್ರಮಾಣವನ್ನು ಕಡಿಮೆ ಮಾಡಲು ನಿರ್ಧರಿಸಿದೆ. ಎಲ್ಲ ವರ್ಗಗಳ ಅಂಕಗಳ ಪ್ರಮಾಣವನ್ನು ಶೇಕಡಾ 15ರಷ್ಟು ಇಳಿಸುವಂತೆ ವೈದ್ಯಕೀಯ ಸಮಾಲೋಚನೆ ಸಮಿತಿ (ಎಂಸಿಸಿ)ಯ ಸದಸ್ಯ ಕಾರ್ಯದರ್ಶಿ ಬಿ.ಶ್ರೀನಿವಾಸ್ ಅವರು ಪರೀಕ್ಷಾ ಮಂಡಳಿಯ ಕಾರ್ಯನಿರ್ವಾಹಕ ನಿರ್ದೇಶಕ ಮಿನು ಬಾಜಪೈ ಅವರಿಗೆ ಪತ್ರ ಬರೆದು ಸೂಚಿಸಿದ್ದಾರೆ.

ಕೂಡಲೇ ಪರಿಷ್ಕೃತ ಫಲಿತಾಂಶ ಪ್ರಕಟಿಸಬೇಕಲ್ಲದೆ, ಹೊಸದಾಗಿ ಅರ್ಹತೆ ಪಡೆಯಲಿರುವ ಅಭ್ಯರ್ಥಿಗಳ ಪರಿಷ್ಕೃತ ಫಲಿತಾಂಶದ ಮಾಹಿತಿಯನ್ನು ಕಳುಹಿಸುವಂತೆ ಅವರು ಸೂಚಿಸಿದ್ದಾರೆ.

ಅಖಿಲ ಭಾರತ ಹಾಗೂ ಆಯಾ ರಾಜ್ಯಗಳ ಕೋಟಾ ಹಂಚಿಕೆಯ ಎರಡು ಸುತ್ತಿನ ಕೌನ್ಸೆಲಿಂಗ್‌ನ ನಂತರವೂ ಅಂದಾಜು 8,000 ಪಿ.ಜಿ ಸೀಟುಗಳು ಖಾಲಿ ಉಳಿದಿರುವ ಕಾರಣ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಆರೋಗ್ಯ ಸಚಿವಾಲಯದ ಮೂಲಗಳು ಹೇಳಿವೆ.

ಪ್ರಸಕ್ತ ಸಾಲಿನಲ್ಲಿ ಲಭ್ಯವಿರುವ ಸೀಟುಗಳು ವ್ಯರ್ಥವಾಗುವುದನ್ನು ತಡೆಯಲು ಈ ನಿರ್ಧಾರ ಕೈಗೊಳ್ಳಲಾಗಿದೆ. ಕಟ್ ಆಫ್ ಪ್ರಮಾಣದ ಶೇಕಡವಾರು ಕಡಿತದೊಂದಿಗೆ 25,000 ಹೊಸ ಅಭ್ಯರ್ಥಿಗಳು ಕೌನ್ಸೆಲಿಂಗ್‌ನ ಅಂತಿಮ ಸುತ್ತಿನಲ್ಲಿ ಪಾಲ್ಗೊಳ್ಳಬಹುದಾಗಿದೆ.

ಸಂಕ್ಷಿಪ್ತ ಸುದ್ದಿ

ರನ್ ವೇ ಬಿಟ್ಟು ಮುಂದೆ ಹೋಗಿ ನಿಂತ ವಿಮಾನ!

ನವದೆಹಲಿ(ಪಿಟಿಐ): ದೆಹಲಿಯಿಂದ ಹೊರಟಿದ್ದ ಅಲಯನ್ಸ್ ಏರ್ ವಿಮಾನವು ಮಧ್ಯಪ್ರದೇಶದ ಜಬಲ್ಪುರ ವಿಮಾನ ನಿಲ್ದಾಣದಲ್ಲಿ ರನ್ ವೇಗಿಂತಲೂ ಮುಂದೆ ಹೋಗಿರುವ ಘಟನೆ ಶನಿವಾರ ನಡೆದಿದೆ ಎಂದು ನಾಗರಿಕ ವಿಮಾನಯಾನ ಪ್ರಧಾನ ನಿರ್ದೇಶನಾಲಯ(ಡಿಜಿಸಿಎ) ತಿಳಿಸಿದೆ. ವಿಮಾನ ಪ್ರಯಾಣಿಕರು ಅಥವಾ ಸಿಬ್ಬಂದಿ ಸೇರಿ ಯಾರಿಗೂ ತೊಂದರೆಯಾಗಿಲ್ಲ ಎಂದಿರುವ ಡಿಜಿಸಿಎ, ಈ ಘಟನೆ ಬಗ್ಗೆ ತನಿಖೆ ಆರಂಭಿಸಲಾಗಿದೆ ಎಂದು ಹೇಳಿದೆ.

ಭ್ರಷ್ಟಾಚಾರ ಪ್ರಕರಣ: ಫಡಣವೀಸ್‌ಗೆ ಸಮನ್ಸ್



ಮುಂಬೈ: ಪೊಲೀಸರ ವರ್ಗಾವಣೆ ಮತ್ತು ನಿಯುಕ್ತಿ ವೇಳೆ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಹಾಜರಾಗುವಂತೆ ಮಹಾರಾಷ್ಟ್ರದ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಅವರಿಗೆ ಮುಂಬೈ ಪೊಲೀಸರು ಸಮನ್ಸ್ ನೀಡಿದ್ದಾರೆ.

ವರ್ಗಾವಣೆ, ನಿಯುಕ್ತಿಗೊಳಿಸುವ ಹಗರಣಕ್ಕೆ ಸಂಬಂಧಿಸಿ ದಾಖಲಾಗಿರುವ ಪ್ರಕರಣಗಳಲ್ಲಿ ವಿಚಾರಣೆಗೆ ಹಾಜರಾಗುವಂತೆ ಫಡಣವೀಸ್‌ಗೆ ಸೂಚಿಸಲಾಗಿದೆ.

10ನೇ ತರಗತಿ: ಪರೀಕ್ಷಾ ಫಲಿತಾಂಶ ಶಾಲೆಗಳಿಗೆ ರವಾನೆ

ನವದೆಹಲಿ(ಪಿಟಿಐ): ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯ(ಸಿಬಿಎಸ್‌ಇ) ಪಠ್ಯಕ್ರಮದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ನಡೆದ ಮೊದಲ ಹಂತದ ಪರೀಕ್ಷಾ ಫಲಿತಾಂಶವನ್ನು ಆಯಾ ಶಾಲೆಗಳಿಗೆ ಕಳುಹಿಸಲಾಗಿದೆ ಎಂದು ಸಿಬಿಎಸ್‌ಇ ತಿಳಿಸಿದೆ.

ಕಮಾಂಡರ್ ಸೇರಿ ನಾಲ್ವರ ಹತ್ಯೆ

ಶ್ರೀನಗರ: ಕಾಶ್ಮೀರ ಕಣಿವೆಯ ವಿವಿಧೆಡೆ ಶನಿವಾರ ಭದ್ರತಾಪಡೆಗಳು ನಡೆಸಿದ ಪ್ರತ್ಯೇಕ ಮೂರು ಎನ್‌ಕೌಂಟರ್‌ಗಳಲ್ಲಿ ಜೈಶ್-ಮೊಹಮ್ಮದ್‌ನ (ಜೆಇಎಂ) ಪಾಕಿಸ್ತಾನದ ಕಮಾಂಡರ್ ಸೇರಿ ನಾಲ್ವರು ಉಗ್ರರು ಹತರಾಗಿದ್ದು, ಒಬ್ಬನನ್ನು ಸೆರೆಹಿಡಿಯಲಾಗಿದೆ.

ರೊಹಿಂಗ್ಯಾ ಸಮುದಾಯಕ್ಕೆ ನೆರವು: 6 ಮಂದಿ ಬಂಧನ

ಗುವಾಹಟಿ: ಸಿಲಿಕಾನ್ ಸಿಟಿ ಬೆಂಗಳೂರಿನಿಂದ ಮಾನವ ಕಳ್ಳಸಾಗಣೆ ದಂಧೆ ನಿರ್ವಹಣೆ ಹಾಗೂ ರೊಹಿಂಗ್ಯಾ ನಿರಾಶ್ರಿತರಿಗೆ ನಕಲಿ ದಾಖಲೆಗಳನ್ನು ನೀಡಿ ಭಾರತದಲ್ಲಿ ನೆಲೆಸಲು ನೆರವು ನೀಡುತ್ತಿದ್ದ ಅಸ್ಸಾಂ ಮೂಲದ ಪ್ರಮುಖ ಆರೋಪಿ ಸೇರಿದಂತೆ ಒಟ್ಟು ಆರು ಮಂದಿಯನ್ನು ರಾಷ್ಟ್ರೀಯ ತನಿಖಾ ದಳ(ಎನ್‌ಐಎ) ಬಂಧಿಸಿದೆ.

ಸುಧಾಮಂಗಳ ಮಹೋತ್ಸವಕ್ಕೆ ವೈಭವದ ತೆರೆ

ಪ್ರಜಾವಾಣಿ ವಾರ್ತೆ

ಮಳಖೇಡ (ಕಲಬುರಗಿ ಜಿಲ್ಲೆ): ಇಲ್ಲಿನ ಜಯತೀರ್ಥರ ಮೂಲ ವೃಂದಾವನ ಸನ್ನಿಧಾನದಲ್ಲಿ ಮೂರು ದಿನ ನಡೆದ 11ನೇ 'ಶ್ರೀಮನ್ನ್ಯಾಯಸುಧಾ ಮಂಗಳ' ಮಹೋತ್ಸವಕ್ಕೆ ಶನಿವಾರ ವೈಭವೋಪೇತ ತೆರೆ ಬಿದ್ದಿತು. ತಿರುಪತಿ, ಕಂಚಿ, ಅಯೋಧ್ಯೆ ಮುಂತಾದ ಧರ್ಮಕ್ಷೇತ್ರಗಳಿಂದ ಆಚಾರ್ಯರು ಉತ್ತರಾದಿ ಮಠದ ಸತ್ಯಾತ್ಮತೀರ್ಥ ಶ್ರೀಪಾದರಿಗೆ ನಿರ್ಮಾಲ್ಯ ಪ್ರಸಾದವಿತ್ತರು.

ಇದಕ್ಕೂ ಮುನ್ನ ಪೇಜಾವರ ಮಠಾಧೀಶರಾದ ವಿಶ್ವಪ್ರಸನ್ನ ತೀರ್ಥರು, ಕೂಡ್ಲಿ ಆರ್ಯ ಅಕ್ಷೋಭ್ಯತೀರ್ಥರ ಮಠಾಧೀಶರಾದ ರಘುವಿಜಯ ತೀರ್ಥರು, ಚಿತ್ತಾಪುರದ ವಿದ್ಯೇಂದ್ರ ತೀರ್ಥರು, ಭಂಡಾರಕೇರಿಯ ವಿದ್ಯೇಶತೀರ್ಥರು, ಸೋಸಲೆ ವ್ಯಾಸರಾಜರ ಮಠಾಧೀಶ ವಿದ್ಯಾಶ್ರೀಶ ತೀರ್ಥರು, ಭೀಮನಕಟ್ಟೆಯ ರಘುವೇಂದ್ರ ತೀರ್ಥರು ಒಂದೇ ವೇದಿಕೆಯಲ್ಲಿ ತಮ್ಮತಮ್ಮ ಪಟ್ಟದ ದೇವರುಗಳ ಪೂಜೆ ನೆರವೇರಿಸಿದರು.

ದೇಶದ ವಿವಿಧೆಡೆಯಿಂದ ಬಂದಿದ್ದ ಅಪಾರ ಭಕ್ತರು ಏಕಕಾಲಕ್ಕೆ ನಡೆದ ಪಟ್ಟದ್ದೇವರ ಪೂಜಾಕೈಂಕರ್ಯಗಳನ್ನು ಶ್ರದ್ಧಾ- ಭಕ್ತಿಯಿಂದ ವೀಕ್ಷಿಸಿದರು. 'ಹರಿ ಸರ್ವೋತ್ತಮ, ವಾಯು ಜೀವೋತ್ತಮ' ಎಂಬ ಘೋಷಣೆಗಳು ಮೊಳಗಿದವು.

ಪೀಠಾಧಿಪತಿಗಳ ಅನುಗ್ರಹ ಸಂದೇಶ ಮುಗಿದ ಬಳಿಕ ವ್ಯಾಸರಾಜರ ಮೂಲ ವೃಂದಾವನದಿಂದ ಬಂದ ಪೂಜ್ಯರು ಸತ್ಯಾತ್ಮರಿಗೆ ವಿಶೇಷ ವಸ್ತ್ರ ನೀಡಿ ಸನ್ಮಾನಿಸಿದರು. ವಾದ್ಯಮೇಳದೊಂದಿಗೆ ತಿರುಪತಿಯಿಂದ ತಂದ ನಿರ್ಮಾಲ್ಯ ಪ್ರಸಾದಗಳನ್ನು ಅರ್ಪಿಸಲಾಯಿತು.

'ಯಾರೇ ಆಗಲಿ, ಎಲ್ಲ ಮಾಧ್ವ ಪೀಠಗಳ ಮಹನೀಯರ ಬಗ್ಗೆ ಅಲ್ಲ ಸಲ್ಲದ ಮಾತುಗಳನ್ನು ಆಡಿದರೆ ಅದು ಖಂಡನೀಯ. ಇದರಲ್ಲಿ ಮತೀಯ ದುರಭಿಮಾನ ಸಲ್ಲದು' ಎಂದು ಸತ್ಯಾತ್ಮತೀರ್ಥರು ನುಡಿದರು.

'ಉತ್ತರಾದಿ ಮಠಕ್ಕೂ, ವ್ಯಾಸರಾಜ ಮಠಕ್ಕೂ ಗ್ರಂಥಗಳ ಬಾಂಧವ್ಯ ಮೊದಲಿನಿಂದಲೂ ಇದೆ. ಇದೇ ರೀತಿಯ ಬಾಂಧವ್ಯ ಎಲ್ಲ ಮಠಗಳಲ್ಲಿ ಬೆಳೆಯಬೇಕಿದೆ' ಎಂದು ವಿದ್ಯಾಶ್ರೀಶರು ಆಶಯ ವ್ಯಕ್ತಪಡಿಸಿದರು.ಸೌಲಿಯಾ ಬೇಗಂ, ರಾಬಿಯಾ ಬೇಗಂ ಅವರು ತಂದಿದ್ದ ಸಾಂಪ್ರದಾಯಿಕ ಗಾಜಿನ ಬಳೆಗಳನ್ನು ತೊಟ್ಟುಕೊಳ್ಳಲು ಮಹಿಳೆಯರು ಮುಗಿಬಿದ್ದರು. ಬೆಂಗಳೂರಿನ ರಂಗರಾವ್ ಅವರು ಲಕ್ಷ ಬಳೆಗಳನ್ನು ಪ್ರತಿ ಸುಧಾನುವಾದ ಕಾರ್ಯಕ್ರಮದಲ್ಲೂ ನೀಡುತ್ತ ಬಂದಿದ್ದು ವಿಶೇಷ.



ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡದಲ್ಲಿ ನಡೆದ 'ಶ್ರೀಮನ್ನ್ಯಾಯಸುಧಾ ಮಂಗಳ' ಮಹೋತ್ಸವದಲ್ಲಿ ಶನಿವಾರ, ಸತ್ಯಾತ್ಮತೀರ್ಥ ಶ್ರೀಪಾದರಿಗೆ ತಿರುಪತಿ ಕ್ಷೇತ್ರದಿಂದ ತಂದ ನಿರ್ಮಾಲ್ಯ ಪ್ರಸಾದ ಅರ್ಪಿಸಲಾಯಿತು –ಪ್ರಜಾವಾಣಿ ಚಿತ್ರ

2ನೇ ದಿನವೂ ಪ್ರಧಾನಿ ರೋಡ್ ಷೋ

ಗಾಂಧಿನಗರ (ಪಿಟಿಐ): ಗುಜರಾತ್ ರಾಜ್ಯ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ, ಶನಿವಾರವೂ ರೋಡ್ ಷೋ ನಡೆಸಿದರು. ದೇಹ್‌ಗಂ ಪಟ್ಟಣದಿಂದ ಲಾವಡ್ ಗ್ರಾಮದಲ್ಲಿನ ರಾಷ್ಟ್ರೀಯ ರಕ್ಷಾ ವಿ.ವಿವರೆಗೂ ರ‍್ಯಾಲಿ ನಡೆಯಿತು. ರಸ್ತೆಯ ಇಕ್ಕೆಲಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಜನರತ್ತ ಕೈಬೀಸಿ 'ವಿಜಯದ ಸಂಕೇತ' ತೋರಿದರು.

ರೋಡ್ ಷೋ ಸುಮಾರು 12 ಕಿ.ಮೀ. ಉದ್ದಕ್ಕೂ ನಡೆದಿದ್ದು, ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಪ್ರಧಾನಿ ಜೊತೆಗೆ ತೆರೆದ ಜೀಪಿನಲ್ಲಿದ್ದರು. ಜನರು ಅಲ್ಲಲ್ಲಿ ಮಾಲಾರ್ಪಣೆ, ಪುಷ್ಪಾರ್ಚನೆ ಮಾಡಿ ಮುಖಂಡರನ್ನು ಬರಮಾಡಿಕೊಂಡರು. ಪ್ರಧಾನಿ ಮೋದಿ ಶುಕ್ರವಾರವೂ ಅಹಮದಾಬಾದ್ ವಿಮಾನನಿಲ್ದಾಣದಿಂದ, ಪಕ್ಷದ ಕಚೇರಿಯಾಗಿರುವ 'ಕಮಲಂ'ವರೆಗೂ ರೋಡ್ ಷೋ ನಡೆಸಿದ್ದರು.

'ಸುಧಾರಣೆ ಕಾಣದ ಭದ್ರತಾ ವ್ಯವಸ್ಥೆ': ಸ್ವಾತಂತ್ರ್ಯ ನಂತರ ದೇಶದಲ್ಲಿ ಭದ್ರತೆ, ರಕ್ಷಣಾ ಕ್ಷೇತ್ರದಲ್ಲಿ ಯಾವುದೇ ಸುಧಾರಣೆ ಕಾರ್ಯಗಳು ನಡೆದಿಲ್ಲ ಎಂದು ರಾಷ್ಟ್ರೀಯ ರಕ್ಷಾ ವಿಶ್ವವಿದ್ಯಾಲಯದ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮೋದಿ ಹೇಳಿದರು.

₹ 4,300 ಕೋಟಿ ಬಂಡವಾಳ ಸಂಗ್ರಹ ನಿರೀಕ್ಷೆ

ರುಚಿ ಸೋಯಾ ಎಫ್‌ಪಿಒ ಮಾರ್ಚ್ 24ರಿಂದ ಆರಂಭ



ನವದೆಹಲಿ (ಪಿಟಿಐ): ಪತಂಜಲಿ ಆಯುರ್ವೇದ ಸಂಸ್ಥೆಯ ಒಡೆತನದ ರುಚಿ ಸೋಯಾ ಕಂಪನಿಯು ₹ 4,300 ಕೋಟಿ ಬಂಡವಾಳ ಸಂಗ್ರಹಿಸಲು ಎಫ್‌ಪಿಒ (ಫಾಲೊ ಆನ್ ಪಬ್ಲಿಕ್ ಆಫರ್) ಮೂಲಕ ಮಾರ್ಚ್ 24ರಂದು ಬಂಡವಾಳ ಮಾರುಕಟ್ಟೆ ಪ್ರವೇಶಿಲಿದೆ.

ಆಡಳಿತ ಮಂಡಳಿಯು ಎಫ್‌ಪಿಒಗೆ ಒಪ್ಪಿಗೆ ನೀಡಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಎಫ್‌ಪಿಒ ವಿತರಣೆಯು ಮಾರ್ಚ್ 24ರಂದು ಆರಂಭ ಆಗಲಿದ್ದು, 28ರಂದು ಮುಕ್ತಾಯ ಆಗಲಿದೆ.

ಕಂಪನಿಯು 2021ರ ಜೂನ್‌ನಲ್ಲಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಎಫ್‌ಪಿಒ ಕುರಿತು ಕರಡು ದಾಖಲೆ ಪತ್ರಗಳನ್ನು ಸಲ್ಲಿಸಿತ್ತು. 2021ರ ಆಗಸ್ಟ್‌ನಲ್ಲಿ ಸೆಬಿ ಅದಕ್ಕೆ ಒಪ್ಪಿಗೆ ನೀಡಿದೆ.

ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿಗಳಲ್ಲಿ ಸಾರ್ವಜನಿಕ ಷೇರು ಪಾಲು ಕನಿಷ್ಠ ಶೇ 25ರಷ್ಟು ಇರಬೇಕು ಎನ್ನುವ ಸೆಬಿಯ ನಿಯಮಕ್ಕೆ ಅನುಗುಣವಾಗಿ ಕಂಪನಿಯು ಎಫ್‌ಪಿಒಗೆ ಮುಂದಾಗಿದೆ. ಕಂಪನಿಯಲ್ಲಿ ಸದ್ಯ ಪ್ರವರ್ತಕರ ಪಾಲು ಶೇ 99ರಷ್ಟಿದೆ. ಪ್ರವರ್ತಕರ ಷೇರುಪಾಲನ್ನು ಮೂರು ವರ್ಷಗಳ ಒಳಗಾಗಿ ಶೇ 75ಕ್ಕೆ ಇಳಿಕೆ ಮಾಡಬೇಕಿದೆ.

ಎಫ್‌ಪಿಒದಿಂದ ಸಂಗ್ರಹ ಆಗಲಿರುವ ಹಣವನ್ನು ಬಾಕಿ ಉಳಿಸಿಕೊಂಡಿರುವ ಕೆಲವು ಸಾಲಗಳ ಮರುಪಾವತಿ ಮಾಡಲು, ದುಡಿಯುವ ಬಂಡವಾಳದ ಅಗತ್ಯವನ್ನು ಈಡೇರಿಸಿಕೊಳ್ಳಲು ಹಾಗೂ ಇನ್ನಿತರೆ ಕಾರ್ಪೊರೇಟ್ ಉದ್ದೇಶಗಳಿಗೆ ಬಳಸಿಕೊಳ್ಳಲಾಗುವುದು ಎಂದು ಕಂಪನಿಯು ಕರಡು ದಾಖಲೆಪತ್ರದಲ್ಲಿ ತಿಳಿಸಿದೆ.

ದಿವಾಳಿ ಪ್ರಕ್ರಿಯೆಗೆ ಒಳಗಾಗಿದ್ದ ರುಚಿ ಸೋಯಾ ಕಂಪನಿಯನ್ನು ಪತಂಜಲಿ ಆಯುರ್ವೇದ ಸಂಸ್ಥೆಯು 2019ರಲ್ಲಿ ಸ್ವಾಧೀನಪಡಿಸಿಕೊಂಡಿದೆ.

ತೈಲ, ಅನಿಲ ಕ್ಷೇತ್ರದಲ್ಲಿ ಹೂಡಿಕೆ: ಭಾರತಕ್ಕೆ ರಷ್ಯಾ ಮನವಿ

ನವದೆಹಲಿ (ರಾಯಿಟರ್ಸ್): ದೇಶದ ತೈಲ ಮತ್ತು ಅನಿಲ ಕ್ಷೇತ್ರದಲ್ಲಿ ದೊಡ್ಡ ಮಟ್ಟದಲ್ಲಿ ಹೂಡಿಕೆ ಮಾಡುವಂತೆ ರಷ್ಯಾ ದೇಶವು ಭಾರತಕ್ಕೆ ಶನಿವಾರ ಮನವಿ ಮಾಡಿದೆ. ಭಾರತದಲ್ಲಿ ತನ್ನ ವ್ಯಾಪಾರ ಜಾಲವನ್ನು ವಿಸ್ತರಿಸುವ ಆಸಕ್ತಿ ಹೊಂದಿರುವುದಾಗಿಯೂ ರಷ್ಯಾ ಹೇಳಿದೆ.

ಉಕ್ರೇನ್ ಮೇಲಿನ ಆಕ್ರಮಣಕ್ಕೆ ಪ್ರತಿಯಾಗಿ ಪಾಶ್ಚಾತ್ಯ ರಾಷ್ಟ್ರಗಳು ರಷ್ಯಾದ ಮೇಲೆ ಕಠಿಣ ನಿರ್ಬಂಧಗಳನ್ನು ವಿಧಿಸಿವೆ. ಹೀಗಾಗಿ, 1991ರ ಸೋವಿಯತ್ ಒಕ್ಕೂಟದ ಪತನದ ನಂತರ ಇದೇ ಮೊದಲ ಬಾರಿಗೆ ರಷ್ಯಾದ ಆರ್ಥಿಕತೆಯು ತೀವ್ರ ಬಿಕ್ಕಟ್ಟು ಎದುರಿಸುತ್ತಿದೆ.

ಉಕ್ರೇನ್ ಮೇಲೆ ಯುದ್ಧ ಸಾರಿರುವ ರಷ್ಯಾದ ನಿಲುವನ್ನು ಖಂಡಿಸುವಂತೆ ಹಲವು ದೇಶಗಳು ಒತ್ತಡ ಹಾಕಿದ್ದರು ಸಹ ಭಾರತವು ಸದ್ಯಕ್ಕೆ ತಟಸ್ಥ ಧೋರಣೆ ತಳೆದಿದೆ.

'ಭಾರತಕ್ಕೆ ರಷ್ಯಾದ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನದ ರಫ್ತು ಮೌಲ್ಯವು ₹ 7,600 ಕೋಟಿಗಳಷ್ಟಿದೆ. ಇದನ್ನು ಇನ್ನಷ್ಟು ಹೆಚ್ಚಿಸಲು ವಿಪುಲ ಅವಕಾಶಗಳಿವೆ' ಎಂದು ರಷ್ಯಾದ ಉಪಪ್ರಧಾನಿ ಅಲೆಕ್ಸಾಂಡರ್ ನೊವಾಕ್ ಶುಕ್ರವಾರ ತಡರಾತ್ರಿ ಹೇಳಿದ್ದಾರೆ. ಈ ಕುರಿತು ಭಾರತದಲ್ಲಿರುವ ರಷ್ಯಾದ ರಾಯಭಾರ ಕಚೇರಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದೆ.

'ರಷ್ಯಾದ ತೈಲ ಮತ್ತು ಅನಿಲ ಕ್ಷೇತ್ರದಲ್ಲಿ ಭಾರತದ ಹೂಡಿಕೆಯನ್ನು ಆಕರ್ಷಿಸಲು ಮತ್ತು ಭಾರತದಲ್ಲಿ ರಷ್ಯಾದ ಕಂಪನಿಗಳ ವ್ಯಾಪಾರ ಜಾಲಗಳನ್ನು ವಿಸ್ತರಿಸಲು ನಾವು ಆಸಕ್ತಿ ಹೊಂದಿದ್ದೇವೆ' ಎಂದು ನೊವಾಕ್ ಅವರು ಭಾರತದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ತಿಳಿಸಿದ್ದಾರೆ.

ಅಮೆರಿಕವು ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವುದಕ್ಕೆ ನಿಷೇಧ ಹೇರಿದೆ. ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವುದನ್ನು ವರ್ಷದ ಒಳಗಾಗಿ ಹಂತ ಹಂತವಾಗಿ ನಿಲ್ಲಿಸಲಾಗುವುದು ಎಂದು ಬ್ರಿಟನ್ ತಿಳಿಸಿದೆ. ಈ ನಿರ್ಧಾರಗಳಿಂದಾಗಿ ಅಂತರರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಇನ್ನಷ್ಟು ಬಿಕ್ಕಟ್ಟು ಎದುರಾಗುವ ನಿರೀಕ್ಷೆ ಮಾಡಲಾಗಿದೆ. ಕಚ್ಚಾ ತೈಲ ರಫ್ತು ಮಾಡುವ ದೇಶಗಳ ಸಾಲಿನಲ್ಲಿ ರಷ್ಯಾ ಎರಡನೇ ಸ್ಥಾನದಲ್ಲಿದೆ.

ಬೆಂಗಳೂರಿನಲ್ಲಿ ತಂತ್ರಜ್ಞಾನ ಕೇಂದ್ರ: ಏರ್‌ಬಿಎನ್‌ಬಿ

ನವದೆಹಲಿ (ಪಿಟಿಐ): ಏರ್‌ಬಿಎನ್‌ಬಿ ಕಂಪನಿಯು ಬೆಂಗಳೂರಿನಲ್ಲಿ ತಂತ್ರಜ್ಞಾನ ಕೇಂದ್ರ ಆರಂಭಿಸುವುದಾಗಿ ಶನಿವಾರ ಹೇಳಿದೆ.

ತನ್ನ ಜಾಗತಿಕ ಸಮುದಾಯಕ್ಕೆ ಅಗತ್ಯವಾದ ಸೇವೆಗಳನ್ನು ನೀಡಲು ಇದು ನೆರವಾಗಲಿದೆ. ಇದರಿಂದಾಗಿ ಸ್ಥಳೀಯ ಎಂಜಿನಿಯರ್‌ಗಳು ಮತ್ತು ತಾಂತ್ರಿಕ ತಜ್ಞರಿಗೆ ಉದ್ಯೋಗಾವಕಾಶಗಳು ತೆರೆದುಕೊಳ್ಳಲಿವೆ ಎಂದು ತಿಳಿಸಿದೆ.

ಕಂಪನಿಗೆ ಭಾರತವು ಪ್ರಮುಖ ಮಾರುಕಟ್ಟೆ ಆಗಿದೆ. ತಂತ್ರಜ್ಞಾನ ಕೇಂದ್ರದ ಆರಂಭವು ಭಾರತದಲ್ಲಿ ಕಂಪನಿಯು ಸದ್ಯ ಮಾಡುತ್ತಿರುವ ಹೂಡಿಕೆಯ ಭಾಗವಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

12-3-2022

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10550-10600
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1620)
ಒಂದು ವಾರದ ಡೆಲಿವರಿ	1635 (1625)
ಸೋಯಾ ಕಚ್ಚಾ	1570 (1570)
ಪಾಮ್ ವಾರದ ಡೆಲಿವರಿ	1595 (1593)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,400 (52,000)
ಬೆಳ್ಳಿ ಕೆ.ಜಿ 69,900 (69,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಓಮೈಕ್ರಾನ್‌ನ 'ಬಿಎ.2' ತಳಿ ಸೋಂಕು ಪ್ರಸರಣ ತೀವ್ರ

ಜರ್ಮನಿ: ಕೋವಿಡ್ ಹೆಚ್ಚಳ

ಬರ್ಲಿನ್ (ಎಪಿ): ಜರ್ಮನಿಯಲ್ಲಿ ಕೊರೊನಾ ವೈರಸ್‌ನ ರೂಪಾಂತರಿ ಓಮೈಕ್ರಾನ್‌ನ 'ಬಿಎ.2' ತಳಿ ಸೋಂಕಿನ ಪ್ರಕರಣಗಳಲ್ಲಿ ತೀವ್ರ ಹೆಚ್ಚಳ ಕಂಡುಬಂದಿದೆ. ಶುಕ್ರವಾರ ಒಂದೇ ದಿನ 2.5 ಲಕ್ಷಕ್ಕಿಂತ ಹೆಚ್ಚು ಪ್ರಕರಣಗಳು ವರದಿಯಾಗಿದ್ದು, 249 ಮಂದಿ ಮೃತಪಟ್ಟಿದ್ದಾರೆ.

ಅಲ್ಲದೆ, ಕಳೆದೊಂದು ವಾರದಿಂದ ಪ್ರತಿ 1 ಲಕ್ಷ ಮಂದಿಯಲ್ಲಿ 1,400 ಮಂದಿಗೆ ಹೊಸದಾಗಿ ಸೋಂಕು ವ್ಯಾಪಿಸುತ್ತಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಸೋಂಕು ಪ್ರಸರಣ ನಿಯಂತ್ರಣಕ್ಕಾಗಿ ದೇಶದಲ್ಲಿ ಹೇರಲಾಗಿರುವ ನಿರ್ಬಂಧಗಳನ್ನು ಸಡಿಲಗೊಳಿಸಲಾಗುತ್ತಿದೆ. ಅಲ್ಲದೆ ಮಾರ್ಚ್ 20ರಂದು ಬಹುತೇಕ ನಿರ್ಬಂಧಗಳನ್ನು ಹಿಂಪಡೆಯಲು ಸರ್ಕಾರ ನಿರ್ಧರಿಸಿದೆ.

ಕೋವಿಡ್ ಲಸಿಕೆಯನ್ನು ಕಡ್ಡಾಯಗೊಳಿಸಿರುವ ಸರ್ಕಾರದ ಕ್ರಮವನ್ನು ವಿರೋಧಿಸಿ ಜರ್ಮನಿಯ ಹ್ಯಾಂಬರ್ಗ್‌ನಲ್ಲಿ ಜನರು ಶನಿವಾರ ಪ್ರತಿಭಟಿಸಿದರು

ಈ ನಡುವೆ ದೇಶದ ಪ್ರಜೆಗಳನ್ನು ಉದ್ದೇಶಿಸಿ ಮಾತನಾಡಿರುವ ಆರೋಗ್ಯ ಸಚಿವ ಕಾರ್ಲ್ ಲಾಟರ್‌ಬಾಕ್ ಅವರು, 'ಕೋವಿಡ್–19 ಪಿಡುಗು ಅಂತ್ಯವಾಗಿದೆ ಎಂದು ಭಾವಿಸಿ, ಯಾರೂ ಮೈಮರೆಯಬಾರದು' ಎಂದು ಮನವಿ ಮಾಡಿದ್ದಾರೆ.

'ದೇಶದಲ್ಲಿ ಕಳೆದ ಕೆಲವು ದಿನಗಳಿಂದ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದೆ. ಪ್ರತಿ ದಿನ 200 ರಿಂದ 250 ಮಂದಿ ಸೋಂಕಿನಿಂದಾಗಿ ಸಾವನ್ನಪ್ಪುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಈ ಸಂಖ್ಯೆ ಏರಿಕೆಯಾಗುವ ಭೀತಿಯಿದೆ. ಹೀಗಾಗಿ ದೇಶದ ಪರಿಸ್ಥಿತಿ ಈಗ ಗಂಭೀರವಾಗಿದೆ' ಎಂದೂ ಅವರು ಹೇಳಿದ್ದಾರೆ.

ಬೀಜಿಂಗ್ ವರದಿ(ಪಿಟಿಐ): ಹಾಂಗ್‌ಕಾಂಗ್‌ನಲ್ಲಿ ಸಹ ಪ್ರಕರಣಗಳು ಹೆಚ್ಚುತ್ತಿದ್ದು, ಶಾಲಾಕಾಲೇಜು ಹಾಗೂ ಪಾರ್ಕುಗಳನ್ನು ಮುಚ್ಚಲಾಗಿದೆ. ಶನಿವಾರ ಒಂದೇ ದಿನ ಹಾಂಗ್ ಕಾಂಗ್‌ನಲ್ಲಿ 27,647 ಹೊಸ ಪ್ರಕರಣಗಳು ವರದಿಯಾಗಿವೆ.

ಸಿಂಗಪುರದಲ್ಲಿ ಸಹ ಕೋವಿಡ್ ಪ್ರಕರಣಗಳು ಹೆಚ್ಚುತ್ತಿವೆ.



ಚೀನಾದ ಈಶಾನ್ಯ ಭಾಗದ ಜಿಲಿನ್ ಪ್ರಾಂತ್ಯದಲ್ಲಿ ಶನಿವಾರ ನಿವಾಸಿಯೊಬ್ಬರ ಕೋವಿಡ್ ಪರೀಕ್ಷೆ ನಡೆಸಲಾಯಿತು —ಎಎಫ್‌ಪಿ ಚಿತ್ರ

2020ರ ಮೇ ಬಳಿಕ ಕನಿಷ್ಠ ಕೋವಿಡ್

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ದೃಢ ಪ್ರಮಾಣ 2020ರ ಮೇ 12ರ ನಂತರ ಕನಿಷ್ಠ ಮಟ್ಟಕ್ಕೆ ಇಳಿದಿದ್ದು, ಶನಿವಾರ ಕೇವಲ 3,614 ಪ್ರಕರಣಗಳಷ್ಟೇ ವರದಿಯಾಗಿವೆ. ಈ ಅವಧಿಯಲ್ಲಿ 89 ಮಂದಿ ಮೃತಪಟ್ಟಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 40,559ಕ್ಕೆ ಇಳಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಮೇಲಿನ ನಿರ್ಬಂಧ ತೆರವು

ನವದೆಹಲಿ (ಪಿಟಿಐ): ತನ್ನ ಮೇಲಿನ ಎಲ್ಲಾ ನಿರ್ಬಂಧಗಳನ್ನೂ ಆರ್‌ಬಿಐ ತೆರವು ಮಾಡಿದ್ದು, ಹೊಸ ಡಿಜಿಟಲ್ ಉತ್ಪನ್ನಗಳನ್ನು ಬಿಡುಗಡೆ ಮಾಡಲು ಅನುಮತಿಯನ್ನೂ ನೀಡಿದೆ ಎಂದು ಎಚ್‌ಡಿಎಫ್‌ಸಿ ಬ್ಯಾಂಕ್ ಶನಿವಾರ ತಿಳಿಸಿದೆ.

ತಾಂತ್ರಿಕ ಸಮಸ್ಯೆಗಳ ಕಾರಣಕ್ಕಾಗಿ ಆರ್‌ಬಿಐ 2020ರ ಡಿಸೆಂಬರ್‌ನಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್ ವಿರುದ್ಧ ಕೆಲವು ಕಠಿಣ ಕ್ರಮಗಳನ್ನು ಜರುಗಿಸಿತ್ತು. ಹೊಸ ಡಿಜಿಟಲ್ ಉತ್ಪನ್ನಗಳನ್ನು ಬಿಡುಗಡೆ ಮಾಡುವಂತಿಲ್ಲ, ಹೊಸದಾಗಿ ಕ್ರೆಡಿಟ್ ಕಾರ್ಡ್ ವಿತರಣೆ ಮಾಡುವಂತೆ ಇಲ್ಲ ಎಂದು ಆರ್‌ಬಿಐ ತಾಕೀತು ಮಾಡಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹385
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹385

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1620)
ಸೋಯಾ (ರಿಫೈನ್ಡ್)	₹1600 (1595)
ಸೂರ್ಯಕಾಂತಿ (ರಿಫೈನ್ಡ್)	--- (---)
ಪಾಮೋಲಿನ್	₹1597 (1595)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250

ಕಾಳು ಮೆಣಸು	510
ರಾಮನಗರ ರೇಷ್ಮೆ	
ಮಿಶ್ರತಳಿ	400-788
ದ್ವಿತಳಿ	366-966

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15600	15550	221.95 ಸೆಂಟ್ಸ್
ಎಸಿ	7560	7600	7950	
ಆರ್‌ಪಿ	8250	8250	8500	ಲಂಡನ್
ಆರ್‌ಸಿ	4000	3900	3925	2095 ಡಾಲರ್ಸ್

ಉದ್ಯಾನನಗರಿಯ ಮೊದಲ ಪಿಂಕ್ ಬಾಲ್ ಟೆಸ್ಟ್: ಪ್ರಥಮ ದಿನವೇ 16 ವಿಕೆಟ್‌ಗಳ ಪತನ

ಬೌಲರ್‌ಗಳ ಭರಾಟೆಯಲ್ಲಿ ಮಿನುಗಿದ ಶ್ರೇಯಸ್

• ಗಿರೀಶ ದೊಡ್ಡಮನಿ



ಅರ್ಧಶತಕ ಗಳಿಸಿ ಸಂಭ್ರಮಿಸಿದ ಭಾರತದ ಶ್ರೇಯಸ್ ಅಯ್ಯರ್ –ಪಿಟಿಐ ಚಿತ್ರ

ಬೆಂಗಳೂರು: ಸುಮಾರು ಆರು ಗಂಟೆಗಳ ಆಟ..ಒಟ್ಟು ಮುನ್ನೂರಾ-ಮೂವತ್ತೆಂಟು ರನ್‌ಗಳು.. ಐದನೂರ ಮೂವತ್ತೈದು ಎಸೆತಗಳು ಮತ್ತು ಹದಿನಾರು ವಿಕೆಟ್‌ಗಳ ಪತನದ ನಡುವೆ ಮಿನುಗಿದವರು ಶ್ರೇಯಸ್ ಅಯ್ಯರ್.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದೇ ಮೊದಲ ಬಾರಿಗೆ ನಡೆಯುತ್ತಿರುವ ಭಾರತ ಮತ್ತು ಶ್ರೀಲಂಕಾ ನಡು ವಣ ಹೊನಲು ಬೆಳಕಿನ ಟೆಸ್ಟ್ ಪಂದ್ಯದ ಮೊದಲ ದಿನದಾಟದ ಪೂರ್ಣ ಪಾಠವಿದು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಭಾರತ ತಂಡವು 59.1 ಓವರ್‌ಗಳಲ್ಲಿ 252 ರನ್‌ಗಳಿಸಿ ಆಲೌಟ್ ಆಯಿತು. ಊಟದ ವಿರಾಮದ ನಂತರ ಬ್ಯಾಟಿಂಗ್ ಆರಂಭಿಸಿದ ಶ್ರೀಲಂಕಾ ತಂಡವು ದಿನದಾಟದ ಮುಕ್ತಾಯಕ್ಕೆ 30 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 86 ರನ್ ಗಳಿಸಿತು.ಲಂಕಾದ ಸ್ಪಿನ್ನರ್‌ಗಳು ಪಾರಮ್ಯ ಮೆರೆದ ಅಂಗಣದಲ್ಲಿಯೇ ಭಾರತದ ವೇಗದ ಜೋಡಿ ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಶಮಿ ಮೇಲುಗೈ ಸಾಧಿಸಿದ್ದು ವಿಶೇಷ.

ಪ್ರವಾಸಿ ಬಳಗದ ಸ್ಪಿನ್ನರ್‌ಗಳಾದ ಎಂಬುಲ್ದೇನಿಯಾ, ಜಯವಿಕ್ರಮ ಮತ್ತು ಧನಂಜಯ ಡಿಸಿಲ್ವಾ ಸೇರಿ ಏಳು ವಿಕೆಟ್ ಗಳಿಸಿದರು. ಒಂದು ವಿಕೆಟ್ ಮಾತ್ರ ಮಧ್ಯಮವೇಗಿ ಲಕ್ಮಲ್ ಪಾಲಾಯಿತು. ನಂತರ ಬ್ಯಾಟಿಂಗ್ ಆರಂಭಿಸಿದ ಲಂಕಾ ತಂಡದ ಆರು ವಿಕೆಟ್‌ಗಳಲ್ಲಿ ಬೂಮ್ರಾ ಮೂರು ಮತ್ತು ಶಮಿ ಎರಡು ಕಬಳಿಸಿದರು. ಅಕ್ಷರ್ ಪಟೇಲ್‌ಗೆ ಸಿಕ್ಕಿದ್ದು ಒಂದೇ ವಿಕೆಟ್. ಸ್ಲೋ ಕಟರ್ ಮತ್ತು ಸ್ವಿಂಗ್ ಮೂಲಕ ಬೂಮ್ರಾ ಹಾಗೂ ಶಮಿ ಚಾಣಾಕ್ಷ ಬೌಲಿಂಗ್ ಮಾಡಿದರು.

ಶ್ರೇಯಸ್ ಅರ್ಧಶತಕದ ಸಂಭ್ರಮ: ಪಂದ್ಯ ಆರಂಭವಾಗಿ ಅರ್ಧ ಗಂಟೆ ಕಳೆಯುಷ್ಟರಲ್ಲಿಯೇ ಮೆಲ್ಲಗೆ ಹುಡಿ ಹಾರಲು ಆರಂಭಿಸಿದ್ದ ಪಿಚ್‌ನಲ್ಲಿ ಲಂಕಾ ತಂಡದ ನಾಯಕ ದಿಮುತ ಕರುಣರತ್ನೆ ಬೇಗನೆ ಸ್ಪಿನ್ನರ್‌ಗಳನ್ನು ದಾಳಿಗೆ ಇಳಿಸಿದರು ಇದು ಫಲ ನೀಡಿತು.

ಅಗ್ರಕ್ರಮಾಂಕದ ಬ್ಯಾಟರ್‌ಗಳು ವಿಫಲರಾದರು. ರೋಹಿತ್ ಒಂದು ಸಿಕ್ಸರ್ ಹೊಡೆದು ದೊಡ್ಡ ಇನಿಂಗ್ಸ್ ಆಡುವ ಸೂಚನೆ ನೀಡಿದ್ದರು. ಆದರೆ ಅವರು ಹೆಚ್ಚು ಹೊತ್ತು ನಿಲ್ಲಲಿಲ್ಲ. ತಾಳ್ಮೆಯ ಆಟವಾಡಲು ಪ್ರಯತ್ನಿಸಿದ ಹನುಮವಿಹಾರಿ ಕೂಡ ಹೆಚ್ಚು ರನ್ ಗಳಿಸಲಿಲ್ಲ. ವಿರಾಟ್ ಕೊಹ್ಲಿಯ ಶತಕ ರಹಿತ ಪಯಣ ಮತ್ತೂ ಮುಂದು ವರಿಯಿತು. ಆದರೆ ಕ್ರೀಸ್‌ಗೆ ಕಾಲಿಟ್ಟ ಕೂಡಲೇ ರಿಷಭ್ ಬೀಸಾಟ ಆರಂಭಿಸಿದರು. ತಂಡದ ಮೊತ್ತ 80 ರನ್ ಆಗಿದ್ದಾಗ ಜೀವದಾನ ಪಡೆದರು.

ಇನ್ನೊಂದೆಡೆ ಅವರಿಗೆ ಜೊತೆಯಾದ ಮುಂಬೈಕರ್ ಶ್ರೇಯಸ್ ಅಯ್ಯರ್ ಅಂದದ ಡ್ರೈವ್‌ಗಳನ್ನು ಪ್ರದರ್ಶಿಸಿದರು.

ತಮಗೆ ಲಭಿಸಿದ ಒಂದು ಜೀ ವ ದಾನವನ್ನು ಬಳಸಿಕೊಂಡರು. ಚೆಂಡು ತಿರುವು ಪಡೆಯುವ ಮುನ್ನವೇ ಮುಂದೆ ಬಂದು ಬ್ಯಾಟ್ ಬೀಸಿದ ಅವರ 'ನರ್ತನ ಶೈಲಿ'ಯ ಬ್ಯಾಟಿಂಗ್ ಮುಂದೆ ಬೌಲರ್‌ಗಳು ಬಸವಳಿದರು. ಆದರೆ ಮತ್ತೊಂದೆಡೆ ಬ್ಯಾಟರ್‌ಗಳು ಕಾಲೂರಲಿಲ್ಲ. ಹೋದ ಪಂದ್ಯದಲ್ಲಿ 97 ರನ್ ಹೊಡೆದಿದ್ದ ಪಂತ್ ಮತ್ತು 175 ರನ್ ಬಾರಿಸಿದ್ದ ರವೀಂದ್ರ ಜಡೇಜ ಅವರಿಗೆ ಲಂಕಾ ಬೌಲರ್‌ಗಳು ಇಲ್ಲಿ ಕಡಿವಾಣ ಹಾಕಿದರು. ಶ್ರೇಯಸ್ (92; 98ಎ, 4X10, 6X4) ಕ್ರೀಡಾಂಗಣದಲ್ಲಿ ಸೇರಿದ್ದ 21 ಸಾವಿರಕ್ಕೂ ಹೆಚ್ಚು ಅಭಿಮಾನಿಗಳಿಗೆ ರಸದೌತಣ ನೀಡಿದರು. 54 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ ಶ್ರೇಯಸ್, ತೋಳಗಲಿಸಿ ಬ್ಯಾಟ್ ತೋರಿಸಿ ಸಂಭ್ರಮಿಸಿದರು. ಜನರ ಉತ್ಸಾಹ ಮುಗಿಲುಮುಟ್ಟಿದಂತೆ ಅವರ ಆಟವೂ ರಂಗೇರಿತು.

ನೋಬಾಲ್‌ನಲ್ಲಿ ಮಯಂಕ್ ಔಟ್: ಮಯಂಕ್ ಅಗರವಾಲ್ ನೋಬಾಲ್‌ನಲ್ಲಿ ಔಟಾದರು! ಇನಿಂಗ್ಸ್‌ನ 2ನೇ ಓವರ್‌ನಲ್ಲಿ ವಿಶ್ವ ಫರ್ನಾಂಡೊ ಎಸೆತ ಮಯಂಕ್ ಪ್ಯಾಡ್‌ಗೆ ಬಡಿದು ಆಫ್‌ಸೈಡ್‌ನತ್ತ ಉರುಳಿತು. ಶ್ರೀಲಂಕಾ ಫೀಲ್ಡರ್‌ಗಳು ಎಲ್‌ಬಿಡಬ್ಲ್ಯುಗೆ ಮನವಿ ಮಾಡುವ ಹೊತ್ತಿನಲ್ಲಿ ನಾನ್‌ಸ್ಟ್ರೈಕರ್ ರೋಹಿತ್ ಶರ್ಮಾ ರನ್ ಗಳಿಸಲು ಕರೆಕೊಟ್ಟರು. ಮಯಂಕ್ ಕ್ರೀಸ್ ಬಿಟ್ಟರು. ಆದರೆ, ರೋಹಿತ್ ಮನಸ್ಸು ಬದಲಿಸಿ ತಮ್ಮ ಕ್ರೀಸ್‌ಗೆ ಮರಳಿದರು. ಅರ್ಧ ಹಾದಿ ಕ್ರಮಿಸಿದ್ದ ಮಯಂಕ್ ಪೆವಿಲಿಯನ್‌ನತ್ತ ಹೆಜ್ಜೆ ಹಾಕಿದರು. ಎಲ್‌ಬಿಡಬ್ಲ್ಯು ರಿವೀವ್‌ನಲ್ಲಿ ಈ ಎಸೆತ ನೋಬಾಲ್ ಆಗಿದ್ದು ತಿಳಿಯಿತು.

ರೋಹಿತ್ ಸಿಕ್ಸರ್: ಯುವಕನಿಗೆ ಗಾಯ

ಭಾರತದ ರೋಹಿತ್ ಶರ್ಮಾ ಸಿಕ್ಸರ್‌ಗೆತ್ತಿದ ಚೆಂಡು ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ 22 ವರ್ಷದ ಗೌರವ್ ವಿಕಾಸ್ ಅವರ ಮೂಗಿಗೆ ಬಡಿದು ಗಾಯವಾಗಿದೆ. ಇನಿಂಗ್ಸ್‌ನ ಆರನೇ ಓವರ್‌ನ ಐದನೇ ಎಸೆತದಲ್ಲಿ ಈ ಘಟನೆ ನಡೆದಿದೆ. ವಿಶ್ವ ಫರ್ನಾಂಡೊ ಹಾಕಿದ ಎಸೆತವನ್ನು ಪುಲ್ ಮಾಡಿದ ರೋಹಿತ್ ಸಿಕ್ಸರ್ ಎತ್ತಿದ್ದರು. ಚೆಂಡು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದ ಗೌರವ್ ಮೂಗಿಗೆ ಬಡಿದು ಮೂಳೆಗೆ ಹಾನಿ ಮಾಡಿತ್ತು. ಅವರಿಗೆ ಹಾಸ್ಮಾಟ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಚೇತರಿಸಿಕೊಂಡ ಅವರು ಮತ್ತೆ ಪಂದ್ಯ ವೀಕ್ಷಿಸಿದ್ದಾರೆ. 'ಎಕ್ಸ್‌-ರೇಯಲ್ಲಿ ಮೂಗಿನ ಮೂಳೆಗೆ ಹಾನಿಯಾಗಿರುವುದು ಖಚಿತವಾಗಿದ್ದು, ಚಿಕಿತ್ಸೆ ನೀಡಲಾಗಿದೆ' ಎಂದು ಹಾಸ್ಮಾಟ್ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಸಜಿತ್ ಬೆನೆಡಿಕ್ಟ್ ರೇಯಾನ್ ತಿಳಿಸಿದರು.

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 252 (59.1 ಓವರ್‌ಗಳಲ್ಲಿ)
ಮಯಂಕ್ ರನೌಟ್ (ಜಯವಿಕ್ರಮ/ಡಿಕ್ವೆಲಾ) 4(7ಎ, 4x1), ರೋಹಿತ್ ಸಿ ಡಿಸಿಲ್ವಾ ಬಿ ಎಂಬುಲ್ದೆನಿಯಾ 15 (25ಎ, 4x1, 6x1), ಹನುಮವಿಹಾರಿ ಸಿ ನಿರೋಷನ್ ಬಿ ಜಯವಿಕ್ರಮ 31(81ಎ, 4x4), ವಿರಾಟ್ ಎಲ್‌ಬಿಡಬ್ಲ್ಯು ಬಿ 23 (48ಎ, 4x2), ಪಂತ್ ಬಿ ಎಂಬುಲ್ದೆನಿಯಾ 39 (26ಎ, 4x7), ಶ್ರೇಯಸ್ ಸ್ಟಂಪ್ಡ್ ಡಿಕ್ವೆಲಾ ಬಿ ಜಯವಿಕ್ರಮ 92 (98ಎ, 4x10, 6x4), ಜಡೇಜ ತಿರಿಮಾನೆ ಬಿ ಎಂಬುಲ್ದೆನಿಯಾ 4 (14ಎ, 4x1), ಅಶ್ವಿನ್ ಸಿ ಡಿಕ್ವೆಲಾ ಬಿ ಡಿಸಿಲ್ವಾ 13(33ಎ, 4x1), ಅಕ್ಷರ್ ಬಿ ಲಕ್ಮಲ್ 9 (ಅಕ್ಷರ್ ಪಟೇಲ್; 49.6), ಶಮಿ ಸಿ ಡಿಸಿಲ್ವಾ ಬಿ ಜಯವಿಕ್ರಂ 5 (7ಎ, 4x1), ಬೂಮ್ರಾ ಔಟಾಗದೆ 0 (10ಎ)
ಇತರೆ 17 (ಬೈ 7, ಲೆಗ್‌ಬೈ 8, ನೋಬಾಲ್ 2
ವಿಕೆಟ್ ಪತನ: 1- 10 (ಮಯಂಕ್ ಅಗರವಾಲ್; 1.3), 2-29 (ರೋಹಿತ್ ಶರ್ಮಾ; 9.3), 3-76 (ಹನುಮವಿಹಾರಿ; 26.2), 4-86 (ವಿರಾಟ್ ಕೊಹ್ಲಿ; 27.3), 5-126 (ರಿಷಭ್ ಪಂತ್; 32.4), 6-148 (ರವೀಂದ್ರ ಜಡೇಜ; 36.4), 7-183 (ಅಶ್ವಿನ್; 47.1), 8-215 (ಅಕ್ಷರ್ ಪಟೇಲ್; 49.6), 9-229 (ಮೊಹಮ್ಮದ್ ಶಮಿ; 53.5), 10-252 (ಶ್ರೇಯಸ್ ಅಯ್ಯರ್; 59.1)
ಬೌಲಿಂಗ್: ಸುರಾಂಗ ಲಕ್ಮಲ್ 8-3-12-1, ವಿಶ್ವ ಫರ್ನಾಂಡೊ 3-0-18-0, ಲಸಿತ್ ಎಂಬುಲ್ದೆನಿಯಾ 24-2-94-3, ಪ್ರವೀಣ ಜಯವಿಕ್ರಮ 17.1-3-81-3, ಧನಂಜಯ ಡಿಸಿಲ್ವಾ 7-1-32-2

ಶ್ರೀಲಂಕಾ ಮೊದಲ ಇನಿಂಗ್ಸ್ 6ಕ್ಕೆ 86 (30 ಓವರ್)
ಕುಶಾಲ್ ಸಿ ಶ್ರೇಯಸ್ ಬಿ ಜಸ್‌ಪ್ರೀತ್ 2 (7 ಎ), ದಿಮುತ ಕರಣಾರತ್ನೆ ಬಿ ಶಮಿ 4 (13 ಎ 4x1), ಲಾಹಿರು ಸಿ ಶ್ರೇಯಸ್ ಬಿ ಜಸ್‌ಪ್ರೀತ್ 8 (6 ಎ, 4x2), ಏಂಜೆಲೊ ಸಿ ರೋಹಿತ್ ಬಿ ಜಸ್‌ಪ್ರೀತ್ 43 (85 ಎ, 4x3, 6x2), ಧನಂಜಯ ಎಲ್‌ಬಿಡಬ್ಲ್ಯು ಬಿ ಶಮಿ 10 (24 ಎ, 4x1), ಚರಿತ್ ಸಿ ರವಿಚಂದ್ರನ್ ಬಿ ಅಕ್ಷರ್ 5 (8 ಎ, 4x1), ನಿರೋಷನ್ ಬ್ಯಾಟಿಂಗ್ 13 (29 ಎ, 4x1), ಲಸಿತ್ ಬ್ಯಾಟಿಂಗ್ 0 (8 ಎ))
ಇತರೆ (ಬೈ 1) 1
ವಿಕೆಟ್ ಪತನ: 1-2 (ಕುಶಾಲ್ ಮೆಂಡಿಸ್, 2.1), 2-14 (ಲಾಹಿರು ತಿರಿಮನ್ನೆ, 4.1), 3-14 (ದಿಮುತ ಕರುಣಾರತ್ನೆ, 5.1), 4-28 (ಧನಂಜಯ ಡಿ ಸಿಲ್ವಾ, 11.5), 5-50 (ಚರಿತ್ ಅಸಲಂಕ, 17.3), 6-85 (ಏಂಜೆಲೊ ಮ್ಯಾಥ್ಯೂಸ್, 28.1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 7-3-15-3, ರವಿಚಂದ್ರನ್ ಅಶ್ವಿನ್ 6-1-16-0, ಮೊಹಮ್ಮದ್ ಸಿರಾಜ್ 6-1-18-2, ರವೀಂದ್ರ ಜಡೇಜ 6-1-15-0, ಅಕ್ಷರ್ ಪಟೇಲ್ 5-1-21-1



ಬೆಂಗಳೂರಿನಲ್ಲಿ ಕ್ರಿಕೆಟ್‌ಪ್ರೇಮಿಗಳ ಸಡಗರ–ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಐಎಸ್‌ಎಲ್: ಎಚ್‌ಎಫ್‌ಸಿಗೆ ಜಯ

ಬ್ಯಾಂಬೊಲಿಮ್ (ಪಿಟಿಐ): ಎಟಿಕೆ ಮೋಹನ್ ಬಾಗನ್ ತಂಡದ ಆಕ್ರಮಣವನ್ನು ಸಮರ್ಥವಾಗಿ ಎದುರಿಸುವುದರೊಂದಿಗೆ ಆ ತಂಡದ ರಕ್ಷಣಾ ಗೋಡೆಯನ್ನು ಕೆಡಹುವಲ್ಲಿಯೂ ಹೈದರಾಬಾದ್ ಎಫ್‌ಸಿ (ಎಚ್‌ಎಫ್‌ಸಿ) ಯಶಸ್ವಿಯಾಯಿತು. ಇದರಿಂದಾಗಿ ಭರ್ಜರಿ ಜಯ ಗಳಿಸಿತು.

ಅಥ್ಲೆಟಿಕ್ಸ್ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಎರಡನೇ ಸೆಮಿಫೈನಲ್‌ನ ಮೊದಲ ಲೆಗ್ ಪಂದ್ಯದಲ್ಲಿ ಎಟಿಕೆಎಂಬಿಯನ್ನು ಹೈದರಾಬಾದ್ 3-1ರಲ್ಲಿ ಮಣಿಸಿತು.

ಇದೇ 20ರಂದು ನಡೆಯಲಿರುವ ಫೈನಲ್ ಪಂದ್ಯ ವೀಕ್ಷಿಸಲು ಪ್ರೇಕ್ಷರಿಗೆ ಅವಕಾಶ ನೀಡಲಾಗುವುದು ಎಂದು ಟೂರ್ನಿಯ ಆಯೋಜಕರಾದ ಫುಟ್‌ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಲಿಮಿಟೆಡ್ (ಎಫ್‌ಎಸ್‌ಡಿಎಲ್) ಶನಿವಾರ ತಿಳಿಸಿದೆ.

ಜಿಆರ್‌ವಿ ಆತ್ಮಚರಿತ್ರೆ 'ರಿಸ್ಟ್ ಅಶ್ಯೂರ್ಡ್' ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ



ಮಾಜಿ ಕ್ರಿಕೆಟಿಗ ಜಿ.ಆರ್. ವಿಶ್ವನಾಥ್ (ಬಲತುದಿ) ಅವರ ಜೀವನಚರಿತ್ರೆ 'ರಿಸ್ಟ್ ಅಶ್ಯೂರ್ಡ್' ಕೃತಿಯನ್ನು ಬೆಂಗಳೂರಿನಲ್ಲಿ ಶನಿವಾರ ಬಿಡುಗಡೆ ಮಾಡಲಾಯಿತು. ಚಿತ್ರದಲ್ಲಿ (ಎಡದಿಂದ): ಬಿಸಿಸಿಐ ಖಜಾಂಜಿ ಅರುಣ್ ಧುಮಾಲ್, ಸಹ ಲೇಖಕ ಆರ್.ಕೌಶಿಕ್, ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಮಾಜಿ ಕ್ರಿಕೆಟಿಗ ಕಪಿಲ್ ದೇವ್ ಇದ್ದಾರೆ

ಬೆಂಗಳೂರು: ಕಲಾತ್ಮಕ ಬ್ಯಾಟಿಂಗ್ ಮಾಸ್ಟರ್ ಗುಂಡಪ್ಪ ವಿಶ್ವನಾಥ್ ಅವರ 'ರಿಸ್ಟ್ ಅಶ್ಯೂರ್ಡ್' ಆತ್ಮಚರಿತ್ರೆ ಬಿಡುಗಡೆಯಾಯಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ಭಾರತ ಮತ್ತು ಶ್ರೀಲಂಕಾ ನಡುವಣ ಪಿಂಕ್ ಬಾಲ್ ಟೆಸ್ಟ್ ಪಂದ್ಯದ ಮೊದಲ ದಿನವಾದ ಶನಿವಾರ ಊಟದ ವಿರಾಮದಲ್ಲಿ ಕ್ರಿಕೆಟ್ ಲೋಕದ ದಿಗ್ಗಜರ ಹಾಜರಾತಿಯಲ್ಲಿ ಕೃತಿಯನ್ನು ಮಾಜಿ ಕ್ರಿಕೆಟಿಗರಾದ ಕಪಿಲ್ ದೇವ್ ಮತ್ತು ಸುನಿಲ್ ಗಾವಸ್ಕರ್ ಬಿಡುಗಡೆ ಮಾಡಿದರು. ತಮ್ಮ ಮಣಿಕಟ್ಟಿನ ಮೋಡಿಯ ಬ್ಯಾಟಿಂಗ್‌ನಿಂದಾಗಿ ದಂತಕಥೆಯೇ ಆಗಿರುವ ಗುಂಡಪ್ಪ ವಿಶ್ವನಾಥ್ ಮತ್ತು ಸಹಲೇಖಕ, ಕ್ರೀಡಾ ಪತ್ರಕರ್ತ ಆರ್. ಕೌಶಿಕ್ ಈ ಕೃತಿ ರಚಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಕಪಿಲ್ ದೇವ್, 'ನಾನು ಶಾಲೆಯಲ್ಲಿದ್ದಾಗ ವಿಶಿ (ವಿಶ್ವನಾಥ್) ಹಸ್ತಾಕ್ಷರ ಪಡೆದಿದ್ದೆ. ಅವರೊಂದಿಗೆ ಆಡುವ ಅವಕಾಶ ಸಿಕ್ಕಿದ್ದು ಸಾರ್ಥಕತೆ ತಂದಿತು. ಅವರು ಕ್ರಿಕೆಟ್ ಕ್ಷೇತ್ರದ ನಿಜವಾದ ರಾಯಭಾರಿ.ಈ ಕೃತಿಯನ್ನು ಅವರು 20 ವರ್ಷಗಳ ಹಿಂದೆಯೇ ಬರೆಯಬೇಕಿತ್ತು. ವಿಶಿ ನನ್ನ ಸಾರ್ವಕಾಲಿಕ ಹೀರೊ' ಎಂದರು.

ಪುಸ್ತಕದ ಕುರಿತು ಮಾತನಾಡಿದ ವಿಶ್ವನಾಥ್, 'ನನ್ನ ಜೀವನದಲ್ಲಿ ಈ ದಿನ ಬಹಳ ಅವಿಸ್ಮರಣೀಯವಾಗಿದೆ. ನನ್ನ ಬಲಕ್ಕೆ ಕಪಿಲ್ ಮತ್ತು ಎಡಕ್ಕೆ ಗಾವಸ್ಕರ್ ಇದ್ದಾರೆ. ಇಬ್ಬರು ಮಹಾನ್ ಕ್ರಿಕೆಟಿಗರನ್ನು ನಾನು ಸದಾ ಗೌರವಿಸುತ್ತೇನೆ. ನನ್ನ ಕುಟುಂಬ, ಗೆಳೆಯರು ಮತ್ತು ಕಾರ್ಯನಿರ್ವಹಿಸಿದ ಭಾರತೀಯ ಸ್ಟೇಟ್ ಬ್ಯಾಂಕ್ ಸಹೋದ್ಯೋಗಿಗಳಿಗೆ ಆಭಾರಿಯಾಗಿದ್ದೇನೆ' ಎಂದರು.

ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ, ಖಜಾಚಿ ಅರುಣ ಧುಮಾಲ್, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ರೋಜರ್ ಬಿನ್ನಿ ಹಾಜರಿದ್ದರು.

ಕ್ರೀಡಾಂಗಣದಲ್ಲಿ ಸಂಗೀತ, ಕ್ರಿಕೆಟ್‌ಪ್ರೇಮಿಗಳ ಕಲರವ

ಕೊರೊನಾ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ ಎರಡೂವರೆ ವರ್ಷ ಬಿಕೋ ಎನ್ನುತ್ತಿದ್ದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ಕ್ರಿಕೆಟ್ ಕಲರವ.

ಬೆಂಗಳೂರಿನ ಎಲ್ಲ ದಾರಿಗಳು ಕ್ರೀಡಾಂಗಣದತ್ತಲೇ ಹೊರಳಿದ್ದವು. 21 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಮೊದಲ ದಿನದಾಟವನ್ನು ಕಣ್ತುಂಬಿಕೊಂಡರು. ವಾರಾಂತ್ಯದ ದಿನವಾದ್ದರಿಂದ ನಗರದ ಎಲ್ಲ ಭಾಗಗಳಿಂದಲೂ ಕ್ರಿಕೆಟ್ ಪ್ರೇಮಿಗಳು ಕ್ರೀಡಾಂಗಣದತ್ತ ಮೆಟ್ರೊ, ಬಸ್, ಕ್ಯಾಬ್ ಮತ್ತು ತಮ್ಮ ವಾಹನಗಳಲ್ಲಿ ಧಾವಿಸಿದರು. ಒಂದೆಡೆ ಯುವಕ–ಯುವತಿಯರ ದಂಡು, ಇನ್ನೊಂದೆಡೆ ಮಕ್ಕಳನ್ನು ಕರೆದುಕೊಂಡು ಬರುತ್ತಿದ್ದ ಪಾಲಕರ ಸಡಗರ.

ಸಂಗೀತ ಸಡಗರ: ಇಲ್ಲಿ ಪ್ರತಿಬಾರಿ ಟೆಸ್ಟ್ ಪಂದ್ಯ ನಡೆದಾಗಲೂ ಪ್ರೇಕ್ಷಕರ ಗ್ಯಾಲರಿಯು ಅರ್ಧದಷ್ಟು ತುಂಬಿದರೆ ಹೆಚ್ಚಾಗಿತ್ತು. ಆದರೆ, ಈ ಟೆಸ್ಟ್ ಪಂದ್ಯಕ್ಕೆ ಶೇ 70ರಷ್ಟು ಆಸನಗಳು ಭರ್ತಿಯಾಗಿದ್ದವು.

ಅಲ್ಲದೇ ಟೆಸ್ಟ್ ಕ್ರಿಕೆಟ್‌ನಲ್ಲಿ ಇದೇ ಮೊದಲ ಸಲ ಡಿಜೆ ಸಂಗೀತದ ಸಡಗರವೂ ಇತ್ತು. ಅದರಲ್ಲೂ 'ಪುಷ್ಪ' ಸಿನಿಮಾದ ಹಾಡಿನ ಗಮ್ಮತ್ತು ಜೋರಾಗಿತ್ತು. ಈ ಚಿತ್ರದ ಪ್ರತಿ ಹಾಡಿಗೂ ಪ್ರೇಕ್ಷಕರ ಸಂಭ್ರಮದ ಕೂಗು ಅಲೆ ಅಲೆಯಾಗಿ ಹೊರಹೊಮ್ಮುತ್ತಿತ್ತು. ರಾತ್ರಿ 7 ಗಂಟೆ ದಾಟುತ್ತಿದ್ದಂತೆಯೇ ಪ್ರೇಕ್ಷಕರ ಮೊಬೈಲ್ ಫೋನ್‌ಗಳ ಟಾರ್ಚ್‌ಲೈಟ್‌ಗಳು ಮಿನುಗಿದವು. ಜನರು ಕೊರೊನಾ ಕಾಲದ ತುಮುಲಗಳನ್ನೆಲ್ಲ ಮರೆತು ಕ್ರಿಕೆಟ್ ಆಸ್ವಾದಿಸಿದರು.



ಕ್ರಿಕೆಟ್ ಅಭಿಮಾನಿ

ಉತ್ತರ ಪ್ರದೇಶ ವಿಧಾನಸಭಾ ಚುನಾವಣಾ ಫಲಿತಾಂಶ: ಕನಿಷ್ಠ ಅಂತರ 203 ಮತ

49 ಮಂದಿಗೆ ಅಲ್ಪ ಅಂತರದ ಗೆಲುವು

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದ 49 ಅಭ್ಯರ್ಥಿಗಳ ಗೆಲುವಿನ ಅಂತರ 5,000 ಮತಗಳಿಗಿಂತ ಕಡಿಮೆಯಿದೆ. ಸಮಾಜವಾದಿ ಪಕ್ಷದ 25 ಅಭ್ಯರ್ಥಿಗಳು, ಬಿಜೆಪಿಯ 18 ಅಭ್ಯರ್ಥಿಗಳು, ಆರ್‌ಎಲ್‌ಡಿ ಪಕ್ಷದ ಮೂರು ಅಭ್ಯರ್ಥಿಗಳು ಐದು ಸಾವಿರ ಮತಗಳಿಗಿಂತ ಕಡಿಮೆ ಅಂತರದಲ್ಲಿ ಸೋಲುಂಡಿದ್ದಾರೆ. ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡು ಕಣಕ್ಕಿಳಿದಿದ್ದ ನಿಷಾದ್ ಪಕ್ಷದ ಇಬ್ಬರು ಹಾಗೂ ಅಪ್ನಾದಳದ (ಸೋನೆಲಾಲ್) ಒಬ್ಬ ಅಭ್ಯರ್ಥಿ ಅಲ್ಪ ಮತಗಳ ಅಂತರದಿಂದ ಸೋಲೊಪ್ಪಿಕೊಂಡಿದ್ದಾರೆ.

ಚುನಾವಣೆಯಲ್ಲಿ ಅತ್ಯಲ್ಪ ಮತಗಳ ಅಂತರದಿಂದ ಗೆದ್ದವರೂ ಇದ್ದಾರೆ. ಧಾಮ್‌ಪುರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಅಶೋಕ್ ಕುಮಾರ್ ರಾಣಾ ಅವರು ಎಸ್‌ಪಿಯ ನಯೀಮ್–ಉಲ್–ಹಸನ್ ಅವರನ್ನು ಕೇವಲ 203 ಮತಗಳಿಂದ ಸೋಲಿಸಿದ್ದಾರೆ. ಹಾಗೆಯೇ ಕುರ್ಸಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಕೇಂದ್ರ ವರ್ಮಾ ಅವರು ಎಸ್‌ಪಿಯ ರಾಕೇಶ್ ವರ್ಮಾ ಅವರನ್ನು 217 ಮತಗಳಿಂದ ಸೋಲಿಸಿದ್ದಾರೆ.

ಅಲಿಗಂಜ್, ಔರಾಯಿ, ಬಹರಾಯಿಚ್, ಛಿಬರಮವೂ, ಫರೀದ್‌ಪುರ, ಜಲಾಲಾಬಾದ್, ಬಿಂದಕಿ, ಜಲೇಸರ್, ಕಟರಾ, ಮಧುಬನ್, ಮಾಣಿಕ್‌ಪುರ, ಮಡಿಯಾಹೂ, ಮೊಹಮ್ಮದಿ, ಮೊರಾದಾಬಾದ್ ನಗರ, ನಕುಡ್, ಫೂಲ್‌ಪುರ, ಸಲೋನ್, ಶಾಹ್‌ಗಂಜ್, ಶ್ರಾವಸ್ತಿ, ಸೀತಾಪುರ, ಸುಲ್ತಾನ್‌ಪುರ ಮತ್ತು ತಿರ್ವಾ ಕ್ಷೇತ್ರದ ಎಸ್‌ಪಿ ಅಭ್ಯರ್ಥಿಗಳು ಐದು ಸಾವಿರಕ್ಕಿಂತ ಕಡಿಮೆ ಮತಗಳಿಂದ ಪರಾಭವಗೊಂಡಿದ್ದಾರೆ. ಈ ಪೈಕಿ ಆರು ಕ್ಷೇತ್ರಗಳ ಅಭ್ಯರ್ಥಿಗಳ ಗೆಲುವಿನ ಅಂತರ 1,000 ಮತಗಳಿಂಗಿಂತ ಕಡಿಮೆಯಿದೆ.

ಬಡೌತ್, ನಹತೂರ್ ಹಾಗೂ ಬಿಜ್ನೂರ್‌ನಲ್ಲಿ ಆರ್‌ಎಲ್‌ಡಿ ಅಭ್ಯರ್ಥಿಗಳು ಕ್ರಮವಾಗಿ 315, 258 ಹಾಗೂ 1,445 ಮತಗಳಿಂದ ಸೋತಿದ್ದಾರೆ.

ಚಾಂದ್‌ಪುರದಲ್ಲಿ ಬಿಜೆಪಿಯ ಕಮಲೇಶ್ ವಿರುದ್ಧ ಎಸ್‌ಪಿಯ ಸ್ವಾಮಿ ಓಂವೇಶ್ ಅವರು 234 ಮತಗಳ ಅಲ್ಪ ಅಂತರದಿಂದ ಗೆದ್ದಿದ್ದಾರೆ. ಬಿಜೆಪಿಯು ರಾಮ್‌ನಗರ ಕ್ಷೇತ್ರವನ್ನು 261 ಮತಗಳಿಂದ ಹಾಗೂ ಇಸೌಲಿ ಕ್ಷೇತ್ರವನ್ನು 269 ಮತಗಳಿಂದ ಕಳೆದುಕೊಂಡಿದೆ.

ಬಸ್ತಿ, ಸಾದರ್, ಭದೊಹಿ, ಬಿಸೌಲಿ, ದಿಬಿಯಾಪುರ, ದುಮರಿಯಾಗಂಜ್, ಗಾಜಿಪುರ, ಇಟಾವಾ, ಜಸ್ರಾನಾ, ಕಿಠೋರ್, ಮೆಜಾ, ಪಟಿಯಾಲಿ, ಫರೆಂದ, ರಾಣಿಗಂಜ್, ಸರೇನಿ ಹಾಗೂ ಝ್ಯುದಾಪುರದಲ್ಲಿ ಬಿಜೆಪಿ ಅಭ್ಯರ್ಥಿಗಳು ಐದು ಸಾವಿರಕ್ಕಿಂತ ಕಡಿಮೆ ಮತಗಳಿಂದ ಸೋತಿದ್ದಾರೆ. ಈ ಪೈಕಿ ಆರು ಕ್ಷೇತ್ರಗಳಲ್ಲಿ ಸೋಲಿನ ಅಂತರ 1,000ಕ್ಕಿಂತ ಕಡಿಮೆಯಿದೆ.

ಹಾಡಿಯಾ ಹಾಗೂ ಕಲ್ಪಿ ಕ್ಷೇತ್ರಗಳನ್ನು ನಿಷಾದ್ ಪಕ್ಷವು ಕ್ರಮವಾಗಿ 3,543 ಮತ್ತು 2,816 ಮತಗಳಿಂದ ಕಳೆದುಕೊಂಡಿದೆ. ಬಛರಾಂವ್‌ನಲ್ಲಿ ಅಪ್ನಾದಳದ (ಎಸ್) ಅಭ್ಯರ್ಥಿಯನ್ನು 2,812 ಮತಗಳಿಂದ ಎಸ್‌ಪಿ ಅಭ್ಯರ್ಥಿ ಸೋಲಿಸಿದ್ದಾರೆ.

403 ಸದಸ್ಯಬಲದ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 255, ಮಿತ್ರಪಕ್ಷಗಳಾದ ಅಪ್ನಾದಳ (ಎಸ್) 12, ನಿಷಾದ್ ಪಕ್ಷ 6 ಕ್ಷೇತ್ರಗಳಲ್ಲಿ ಗೆದ್ದಿವೆ. ಸಮಾಜವಾದಿ ಪಕ್ಷವು 111, ಮಿತ್ರಪಕ್ಷ ಆರ್‌ಎಲ್‌ಡಿ 8 ಕ್ಷೇತ್ರಗಳಲ್ಲಿ ಗೆದ್ದಿವೆ. ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷವು ಆರು ಕಡೆ ಗೆಲುವು ದಾಖಲಿಸಿದೆ. ಕಾಂಗ್ರೆಸ್ ಹಾಗೂ ಜನಸತ್ತಾ ದಳ ಲೋಕತಾಂತ್ರಿಕ ಪಕ್ಷಗಳು ತಲಾ ಎರಡು, ಮಾಯಾವತಿ ಅವರ ಬಿಎಸ್‌ಪಿ ಒಂದು ಕ್ಷೇತ್ರಗಳಲ್ಲಿ ಗೆದ್ದಿವೆ.



ಉತ್ತರ ಪ್ರದೇಶದ ಮಥುರಾ ಕ್ಷೇತ್ರದಲ್ಲಿ ಭಾರಿ ಅಂತರದಿಂದ ಗೆದ್ದ ಬಿಜೆಪಿ ಅಭ್ಯರ್ಥಿ ಶ್ರೀಕಾಂತ್ ಶರ್ಮಾ ಅವರು ಬೆಂಬಲಿಗರ ಜೊತೆ ಸಂಭ್ರಮಿಸಿದ ಕ್ಷಣ–ಪಿಟಿಐ ಚಿತ್ರ

ಅತಿಹೆಚ್ಚು ಅಂತರದ ದಾಖಲೆ

ಬಿಜೆಪಿಯ ಐವರು ಅಭ್ಯರ್ಥಿಗಳು ಅತಿಹೆಚ್ಚು ಮತಗಳಿಂದ ಗೆದ್ದು ದಾಖಲೆ ಬರೆದಿದ್ದಾರೆ. ಸಾಹಿಬಾಬಾದ್‌ನಲ್ಲಿ ಸುನಿಲ್ ಶರ್ಮಾ ಅವರು 2.14 ಲಕ್ಷ ಮತಗಳ ಅಂತರದಿಂದ ಗೆದ್ದಿದ್ದಾರೆ. ನೊಯ್ಡಾದಲ್ಲಿ ಪಂಕಜ್ ಸಿಂಗ್ ಅವರು 1.81 ಲಕ್ಷ ಮತಗಳ ಅಂತರದಿಂದ ಜಯಿಸಿದ್ದಾರೆ. ಮೀರತ್ ಕಂಟೋನ್ಮೆಂಟ್ ಕ್ಷೇತ್ರದಲ್ಲಿ ಅಮಿತ್ ಅಗರ್‌ವಾಲ್ ಅವರು 1.18 ಲಕ್ಷ ಮತಗಳ ಅಂತರದಿಂದ ಸಮೀಪದ ಪ್ರತಿಸ್ಪರ್ಧಿಯನ್ನು ಸೋಲಿಸಿದ್ದಾರೆ.
ಪುರುಷೋತ್ತಮ ಖಂಡೇಲ್‌ವಾಲಾ ಅವರು ಆಗ್ರಾ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ 1.12 ಲಕ್ಷ ಮತಗಳ ಅಂತರದಿಂದ ಹಾಗೂ ಶ್ರೀಕಾಂತ್ ಶರ್ಮಾ ಅವರು ಮಥುರಾ ಕ್ಷೇತ್ರದಲ್ಲಿ 1.09 ಲಕ್ಷ ಮತಗಳ ಅಂತರದಿಂದ ಗೆದ್ದಿದ್ದಾರೆ.

ಸುದ್ದಿವಾಹಿನಿ ಬಹಿಷ್ಕಾರಕ್ಕೆ ಸೂಚನೆ

ಲಖನೌ (ಪಿಟಿಐ): ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ವಿರುದ್ಧ ಮಾಧ್ಯಮಗಳು ಜಾತೀಯತೆ ಮತ್ತು ದ್ವೇಷದ ಧೋರಣೆ ಅನುಸರಿಸಿವೆ ಎಂದು ಪಕ್ಷದ ಮುಖ್ಯಸ್ಥೆ ಮಾಯಾವತಿ ಅವರು ಶನಿವಾರ ಆರೋಪಿಸಿದ್ದಾರೆ. ಜೊತೆಗೆ, ಸುದ್ದಿ ವಾಹಿನಿಗಳ ಚರ್ಚೆಗಳಲ್ಲಿ ಭಾಗವಹಿಸುವುದು ಬೇಡ ಎಂದು ತಮ್ಮ ಪಕ್ಷದ ವಕ್ತಾರರಿಗೆ ಸೂಚಿಸಿದ್ದಾರೆ.

'ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಅಂಬೇಡ್ಕರ್‌ವಾದಿ ಬಿಎಸ್‌ಪಿ ಚಳವಳಿಯನ್ನು ಹತ್ತಿಕ್ಕುವಂತೆ ತಮ್ಮ ಧಣಿಗಳು ನೀಡಿದ್ದ ಆದೇಶದ ಮೇರೆಗೆ ಮಾಧ್ಯಮಗಳು ಬಿಎಸ್‌ಪಿ ವಿರುದ್ಧ ಜಾತೀಯತೆ, ದ್ವೇಷಪೂರಿತ ಮತ್ತು ನಿಂದನಾತ್ಮಕ ಧೋರಣೆಯನ್ನು ಅನುಸರಿಸಿದವು' ಎಂದು ಟ್ವೀಟ್ ಮಾಡಿದ್ದಾರೆ.



ಭಗವಂತ ಮಾನ್ ಅವರು ಬೆಂಬಲ ಪತ್ರವನ್ನು ರಾಜ್ಯಪಾಲರಿಗೆ ಸಲ್ಲಿಸಿದರು –ಪಿಟಿಐ ಚಿತ್ರ

ಪಂಜಾಬ್: ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ಮಾನ್

ಚಂಡಿಗಡ (ಪಿಟಿಐ): ಪಂಜಾಬ್ ನಿಯೋಜಿತ ಮುಖ್ಯಮಂತ್ರಿ ಭಗವಂತ ಮಾನ್ ಅವರು ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಅವರನ್ನು ಶನಿವಾರ ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು.

ಪಕ್ಷದ ಶಾಸಕರು ಬೆಂಬಲ ವ್ಯಕ್ತಪಡಿಸಿರುವ ಪತ್ರವನ್ನು ರಾಜ್ಯಪಾಲರಿಗೆ ನೀಡಲಾಯಿತು ಎಂದು ಮಾನ್ ಅವರು ರಾಜಭವನದ ಹೊರಗಡೆ ಸುದ್ದಿಗಾರರಿಗೆ ತಿಳಿಸಿದರು. 'ಸರ್ಕಾರ ರಚನೆಗೆ ಹಕ್ಕು ಮಂಡಿಸಲಾಯಿತು. ರಾಜ್ಯಪಾಲರು ಒಪ್ಪಿಗೆ ನೀಡಿದರು' ಎಂದು ಅವರು ತಿಳಿಸಿದರು.

ಮೊಹಾಲಿಯಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಮಾನ್ ಅವರನ್ನು ಆಮ್ ಆದ್ಮಿ ಪಕ್ಷದ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲಾಗಿತ್ತು. ಮಾರ್ಚ್ 16ರಂದು ಮುಖ್ಯಮಂತ್ರಿಯಾಗಿ ಭಗವಂತ ಮಾನ್ ಅವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಗೋವಾ: ಸಾವಂತ್ ರಾಜೀನಾಮೆ

ಪಣಜಿ: ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಶನಿವಾರ ರಾಜೀನಾಮೆ ನೀಡಿದ್ದಾರೆ. ರಾಜ್ಯಪಾಲ ಶ್ರೀಧರನ್ ಪಿಳ್ಳೈ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿರುವ ಅವರು, ರಾಜ್ಯದಲ್ಲಿ ಹೊಸ ಸರ್ಕಾರ ರಚನೆಯಾಗುವ ವರೆಗೆ ಉಸ್ತುವಾರಿ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ.

ರಾಜೀನಾಮೆ ಸಲ್ಲಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಹೊಸ ಮುಖ್ಯಮಂತ್ರಿಯ ಆಯ್ಕೆ ಹಾಗೂ ಹೊಸ ಸಚಿವ ಸಂಪುಟ ಯಾವಾಗ ಅಸ್ತಿತ್ವಕ್ಕೆ ಬರಲಿದೆ ಎಂದು ತಿಳಿಸಲಿಲ್ಲ. ಕೇಂದ್ರ ಸಂಸದೀಯ ಮಂಡಳಿಯ ವೀಕ್ಷಕರು ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ಅವರು ತಿಳಿಸಿದರು.

ಬಿಜೆಪಿ ಗೆದ್ದಿರುವ ನಾಲ್ಕು ರಾಜ್ಯಗಳಲ್ಲಿ ಮುಖ್ಯಮಂತ್ರಿ ಹಾಗೂ ಹೊಸ ಸಚಿವರ ಪ್ರಮಾಣವಚನ ದಿನಾಂಕ ಸದ್ಯದಲ್ಲೇ ಪ್ರಕಟವಾಗಲಿದೆ ಎಂದಿದ್ದಾರೆ.

ಸಂಸದೀಯ ಮಂಡಳಿಯ ವೀಕ್ಷಕರು ಯಾವಾಗ ಗೋವಾಗೆ ಬರಲಿದ್ದಾರೆ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಯಾರು ಯಾವಾಗ ಬರಲಿದ್ದಾರೆ ಎಂದು ಗೊತ್ತಿಲ್ಲ. ಪಕ್ಷದ ನಾಯಕತ್ವವು ಈ ಬಗ್ಗೆ ಮಾಹಿತಿ ನೀಡಿದಾಗ ನಿಮಗೆ ತಿಳಿಸುತ್ತೇವೆ' ಎಂದಿದ್ದಾರೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

ಅಧಿಕಾರಿಗೆ ರಕ್ಷಣೆ ಒದಗಿಸುವಂತೆ ಸುಪ್ರೀಂ ಕೋರ್ಟ್‌ಗೆ ಮೊರೆ

ಮತಯಂತ್ರ ಬದಲು: ಅಧಿಕಾರಿಯ ಮಾತಿನ ಆಡಿಯೊ ಬಯಲು

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಗಾಜಿಪುರ ಜಿಲ್ಲೆಯ ಮತಗಟ್ಟೆಯೊಂದರ ಅಧಿಕಾರಿ ಮತ್ತು ಇನ್ನೊಬ್ಬರ ನಡುವೆ ಮತಯಂತ್ರ ಬದಲಾವಣೆ ಸಂಬಂಧ ನಡೆದಿದೆ ಎನ್ನಲಾದ ಮಾತುಕತೆಯ ಆಡಿಯೊ ತುಣುಕು ಬಯಲಾಗಿದೆ. ಈ ವಿಷಯದಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಮತ್ತು ರಾಷ್ಟ್ರಪತಿಯವರನ್ನು ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಕೋರಿದ್ದಾರೆ.

ತಮ್ಮನ್ನು ನಿಯೋಜಿಸಲಾಗಿದ್ದ ಮತಗಟ್ಟೆಯ ಮತಯಂತ್ರ ಬದಲಾಯಿಸುವುದಕ್ಕೆ ಆಕ್ಷೇಪಿಸಿದ ಕಾರಣ ಪೊಲೀಸ್ ಅಧಿಕಾರಿಯೊಬ್ಬರು ಬೆದರಿಕೆ ಒಡ್ಡಿದ್ದಾರೆ ಎಂದೂ ಚುನಾವಣಾಧಿಕಾರಿಯು ಹೇಳಿದ್ದಾರೆ. ಹೀಗಾಗಿ, ಆ ಅಧಿಕಾರಿಗೆ ಯಾವುದೇ ಅಪಾಯ ಆಗದಂತೆ ನೋಡಿಕೊಳ್ಳಬೇಕು ಎಂದು ಅಖಿಲೇಶ್ ವಿನಂತಿ ಮಾಡಿಕೊಂಡಿದ್ದಾರೆ.

ಗಾಜಿಪುರ ಜಿಲ್ಲೆಯ ಕಾಸಿಮಾಬಾದ್ ಮತಗಟ್ಟೆಗೆ ಈ ಅಧಿಕಾರಿಯನ್ನು ನಿಯೋಜಿಸಲಾಗಿತ್ತು. ಅಲ್ಲಿ ಮಾರ್ಚ್ 7ರಂದು ಮತದಾನ ನಡೆದಿತ್ತು. ತಾವು ಇದ್ದ ಮತಗಟ್ಟೆಯ ಎರಡು ಮತಯಂತ್ರಗಳನ್ನು ಬದಲಾಯಿಸಲಾಗಿದೆ. ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದಾಗ ಸ್ಥಳೀಯ ಪೊಲೀಸ್ ಠಾಣಾಧಿಕಾರಿಯು ಬೆದರಿಕೆ ಒಡ್ಡಿದರು. ಆಕ್ಷೇಪ ಮುಂದುವರಿಸಿದರೆ ಕೆಲಸ ಹೋಗುವುದಷ್ಟೇ ಅಲ್ಲ ಜೈಲಿಗೆ ಕಳುಹಿಸಲಾಗುವುದು ಎಂದು ಠಾಣಾಧಿಕಾರಿ ಬೆದರಿಕೆ ಒಡ್ಡಿದರು ಎಂದು ಮತಗಟ್ಟೆ ಅಧಿಕಾರಿಯು ಇನ್ನೊಬ್ಬರಿಗೆ ಹೇಳಿರುವುದರ ಆಡಿಯೊ ತುಣುಕು ಈಗ ಸೋರಿಕೆ ಆಗಿದೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಪ್ರಧಾನ ಕಾರ್ಯದರ್ಶಿಯಾಗಿದ್ದ ಹಿರಿಯ ಅಧಿಕಾರಿಯ ನಿರ್ದೇಶನದಂತೆ ಕೆಲವು ಜಿಲ್ಲೆಗಳಲ್ಲಿ ಮತಯಂತ್ರಗಳನ್ನು ತಿರುಚಲಾಗುತ್ತಿದೆ ಎಂದು ಅಖಿಲೇಶ್ ಅವರು ಕೊನೆಯ ಹಂತದ ಮತದಾನ ಮುಗಿದ ಬಳಿಕ ಆರೋಪಿಸಿದ್ದರು.

ಮತಯಂತ್ರಗಳು ತುಂಬಿದ್ದ ಎರಡು ಲಾರಿಗಳನ್ನು ವಾರಾಣಸಿಯ ಪಹಾಡಿಯಾ ಮಂಡಿ ಎಂಬಲ್ಲಿ ಎಸ್‌ಪಿಯ ಕಾರ್ಯಕರ್ತರು ತಡೆದು ನಿಲ್ಲಿಸಿದ್ದಾರೆ ಎಂದು ಅಖಿಲೇಶ್ ಹೇಳಿದ್ದರು. ಮತ ಎಣಿಕೆಯ ದಿನವೇ ಇದು ನಡೆದಿದೆ ಎಂದು ಅವರು ಹೇಳಿದ್ದರು. ಎಣಿಕೆ ಪ್ರಕ್ರಿಯೆಯಲ್ಲಿ ಭಾಗಿಯಾಗುವ ಅಧಿಕಾರಿಗಳಿಗೆ ತರಬೇತಿ ನೀಡುವುದಕ್ಕಾಗಿ ಈ ಮತಯಂತ್ರಗಳನ್ನು ಸಮೀಪದ ಕಾಲೇಜು ಒಂದಕ್ಕೆ ಒಯ್ಯಲಾಗುತ್ತಿತ್ತು ಎಂದು ವಾರಾಣಸಿ ಜಿಲ್ಲಾಧಿಕಾರಿ ಸಮಜಾಯಿಷಿ ನೀಡಿದ್ದರು.

ಸಂಸತ್ ಸದಸ್ಯತ್ವ ಉಳಿಸಿಕೊಳ್ಳಲು ಅಖಿಲೇಶ್ ಒಲವು?

ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಆಜಂಗಡ ಲೋಕಸಭಾ ಕ್ಷೇತ್ರದ ಸದಸ್ಯತ್ವವನ್ನು ಉಳಿಸಿಕೊಳ್ಳಬಹುದು ಎಂದು ಪಕ್ಷದ ಮುಖಂಡರೊಬ್ಬರು ಹೇಳಿದ್ದಾರೆ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅವರು ಕರ್ಹಾಲ್ ವಿಧಾನಸಭಾ ಕ್ಷೇತ್ರದಿಂದ ಗೆದ್ದಿದ್ದಾರೆ. ಆದರೆ, ಶಾಸಕ ಸ್ಥಾನಕ್ಕೆ ಅವರು ರಾಜೀನಾಮೆ ಕೊಡುವ ಸಾಧ್ಯತೆ ಹೆಚ್ಚು ಎಂದು ಹೇಳಲಾಗಿದೆ.

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಭಾರಿ ಗೆಲುವು ಸಿಕ್ಕಿದ್ದರೂ ಆಜಂಗಡ ಜಿಲ್ಲೆಯ ಎಲ್ಲ 10 ಕ್ಷೇತ್ರಗಳಲ್ಲಿ ಎಸ್‌ಪಿ ಗೆದ್ದಿದೆ. ಲೋಕಸಭೆಗೆ 2024ರಲ್ಲಿ ಚುನಾವಣೆ ನಡೆಯಲಿದೆ. ಹೀಗಾಗಿ, ಆಜಂಗಡ ಲೋಕಸಭಾ ಕ್ಷೇತ್ರದ ಸದಸ್ಯತ್ವವನ್ನು ಉಳಿಸಿಕೊಳ್ಳುವ ನಿರ್ಧಾರವು ಸಕಾರಾತ್ಮಕ ಸಂದೇಶ ರವಾನಿಸಲಿದೆ ಎಂದು ಮೂಲಗಳು ಹೇಳಿವೆ.

ಸೋನಿಯಾ ರಾಜೀನಾಮೆ ಸಾಧ್ಯತೆ ತಳ್ಳಿ ಹಾಕಿದ ಪಕ್ಷ

ಕಾಂಗ್ರೆಸ್ ಕಾರ್ಯಕಾರಿಣಿ ಇಂದು

ನವದೆಹಲಿ (ಪಿಟಿಐ): ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ (ಸಿಡಬ್ಲ್ಯುಸಿ) ಭಾನುವಾರ ಸಂಜೆ ನಾಲ್ಕು ಗಂಟೆಗೆ ನಡೆಯಲಿದೆ. ಐದು ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅತ್ಯಂತ ಕಳಪೆ ಪ್ರದರ್ಶನ ನೀಡಿರುವ ಬಗ್ಗೆ ಚರ್ಚಿಸಲು ಈ ಸಭೆ ಕರೆಯಲಾಗಿದೆ.

ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಉತ್ತರ ಪ್ರದೇಶ ಉಸ್ತುವಾರಿ ಹೊಂದಿರುವ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡುವುದಾಗಿ ಸಭೆಯಲ್ಲಿ ಘೋಷಿಸುವ ಸಾಧ್ಯತೆ ಇದೆ ಎಂದು ವರದಿಯಾಗಿದೆ. ಆದರೆ, ಇದು ವದಂತಿ ಮಾತ್ರ ಎಂದು ಪಕ್ಷವು ಹೇಳಿದೆ. ಬಿಜೆಪಿಯ ಕುಮ್ಮಕ್ಕಿನಿಂದ ಇಂತಹ ವದಂತಿ ಹರಡಲಾಗುತ್ತಿದೆ ಎಂದು ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ ಹೇಳಿದ್ದಾರೆ.

> **ಸೋಲನ್ನು ಎದುರಿಸಲು ಕಾಂಗ್ರೆಸ್ ನಾಯಕತ್ವ ಹಿಂಜರಿದಿಲ್ಲ, ತಪ್ಪಿಸಿಕೊಳ್ಳುವ ಯತ್ನವನ್ನೂ ಮಾಡಿಲ್ಲ. ತಳಮಟ್ಟದಿಂದ ಪಕ್ಷದ ಪುನರ್‌ರಚನೆ ಅಗತ್ಯವಿದೆ**
> **ಅಭಿಷೇಕ್ ಸಿಂಘ್ವಿ**
> ಕಾಂಗ್ರೆಸ್ ಮುಖಂಡ

ಕಾಂಗ್ರೆಸ್ ಮುಖ್ಯ ಕಚೇರಿಯಲ್ಲಿ ಈ ಸಭೆ ನಡೆಯಲಿದೆ. ಸೋನಿಯಾ ಗಾಂಧಿ ಅವರು ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಕ್ಷದ ಇಬ್ಬರು ಮುಖ್ಯಮಂತ್ರಿಗಳಾದ ಅಶೋಕ್ ಗೆಹಲೋತ್ (ರಾಜಸ್ಥಾನ) ಮತ್ತು ಭೂಪೇಶ್ ಬಘೆಲ್ (ಛತ್ತೀಸಗಡ) ಅವರನ್ನು ಸಭೆಗೆ ಆಮಂತ್ರಿಸಲಾಗಿದೆ. ಸಿಡಬ್ಲ್ಯುಸಿಯ 20 ಸದಸ್ಯರು, 24 ಕಾಯಂ ಆಹ್ವಾನಿತರು ಮತ್ತು ಒಂಬತ್ತು ವಿಶೇಷ ಆಹ್ವಾನಿತರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಪಕ್ಷದಲ್ಲಿ ಮೂಲಭೂತ ಬದಲಾವಣೆ ತರಬೇಕು ಎಂದು ಈ ಹಿಂದೆಯೇ ಆಗ್ರಹಿಸಿದ್ದ ಜಿ–23 ಮುಖಂಡರಲ್ಲಿ ಕೆಲವರು ಪಕ್ಷದ ಮುಖಂಡ ಗುಲಾಂ ನಬಿ ಆಜಾದ್ ಅವರನ್ನು ಶುಕ್ರವಾರ ಸಂಜೆ ಭೇಟಿ ಮಾಡಿದ್ದರು. ಪಕ್ಷದಲ್ಲಿ ಸುಧಾರಣೆ ತರಬೇಕಾಗಿರುವ ಅಂಶಗಳ ಕುರಿತು ಸಭೆಯಲ್ಲಿ ಚರ್ಚಿಸಲು ಅವರು ನಿರ್ಧರಿಸಿದ್ದಾರೆ ಎನ್ನಲಾಗಿದೆ.



ರಂಗಮಂಚ ಏರಿ ಬಂದ ಸಂವಿಧಾನ 'ಜ್ಯೋತಿ' 11



ಒಂದು ಜೀವ ಹಲವು ರೂಪ

ಫುಟ್‌ಬಾಲ್ ಕ್ಷೇತ್ರದಲ್ಲಿ ಡಿಯಾಗೊ ಮರಡೋನಾ ಅವರಿಗಿದ್ದ ರಂಗುರಂಗಿನ ವರ್ಚಸ್ಸು ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾದ ಶೇನ್ ವಾರ್ನ್ ಅವರಿಗೆ ಇತ್ತು. ಕ್ರಿಕೆಟ್ ಅಂಗಳದಲ್ಲಿ ಅವರು ಎಷ್ಟು ಹೆಸರು ಮಾಡಿದ್ದರೋ ಹೊರಗೂ ಅವರ ಜೀವನಶೈಲಿ ಅಷ್ಟೇ ಸುದ್ದಿ ಮಾಡಿತ್ತು. ಮದಿರೆ, ಮಾನಿನಿಯರ ಸಂಗದ ಅವರ ಜೀವನ ವರ್ಣರಂಜಿತವಾಗಿತ್ತು. ತಮ್ಮ ಎಲ್ಲ ಗುಣಗಳು, ಹವ್ಯಾಸಗಳನ್ನು ಅವರು ಎಂದೂ ಮುಚ್ಚಿಟ್ಟಿರಲಿಲ್ಲ. ಅವರ ವ್ಯಕ್ತಿತ್ವದ ಒಂದು ಝಲಕ್ ಇಲ್ಲಿದೆ...

ಗಿರೀಶ ದೊಡ್ಡಮನಿ

ಶೇನ್ ವಾರ್ನ್ ಕಿಂಡರ್‌ಗಾರ್ಡನ್ ಶಾಲೆಗೆ ಹೋಗುತ್ತಿದ್ದರು. ಕಾಂಕ್ರಿಟ್ ಸಿಲಿಂಡರ್ ತಯಾರು ಮಾಡುವ ಕಾರ್ಖಾನೆ ಪಕ್ಕದಿಂದ ನಡೆದುಕೊಂಡು ಹೋಗುತ್ತಿದ್ದರು. ಅದೇ ಸಂದರ್ಭದಲ್ಲಿ ಕಾಂಪೌಂಡ್ ಮೇಲಿಂದ ಹಾರಿದ್ದ ವ್ಯಕ್ತಿಯೊಬ್ಬ ಶೇನ್ ಮೇಲೆ ಬಿದ್ದ. ಈ ಅವಘಡದಲ್ಲಿ ಪುಟ್ಟ ಬಾಲಕನ ಎರಡೂ ಕಾಲುಗಳ ಮೂಳೆ ಮುರಿದವು. ವೈದ್ಯರು ದಪ್ಪ ಬ್ಯಾಂಡೇಜ್ ಹಾಕಿದರು. ನಡೆದಾಡಲು ಕಷ್ಟಪಡುತ್ತಿದ್ದ ಹುಡುಗ ಶೇನ್‌ಗೆ ತಂದೆ ಕೀತ್ ಒಂದು ಟ್ರಾಲಿ ಸಿದ್ಧಪಡಿಸಿಕೊಟ್ಟರು.

ಟ್ರಾಲಿಯ ಆಸರೆಯಲ್ಲಿ ಓಡಾಡುವಾಗ ಮಣಿಕಟ್ಟಿನ ಮೇಲೆ ಹೆಚ್ಚು ಭಾರ ಬೀಳುತ್ತಿತ್ತು. ಅದರಿಂದಾಗಿ ಮಣಿಕಟ್ಟು ಬಲಿಷ್ಠವಾದವು. ಕ್ರಿಕೆಟ್ ಆಡಲಾರಂಭಿಸಿದಾಗ ಮಣಿಕಟ್ಟಿನ ಬಲದಿಂದ ಮಾಡುತ್ತಿದ್ದ ಸ್ಪಿನ್ ಬ್ಯಾಟರ್‌ಗಳಿಗೆ ಸಿಂಹಸ್ವಪ್ನವಾದವು.

'ಬಹುಶಃ ಅವತ್ತು ನನ್ನ ಕಾಲು ಮುರಿಯದೇ ಹೋಗಿದ್ದರೆ, ಇಷ್ಟು ದೊಡ್ಡ ಕ್ರಿಕೆಟಿಗನಾಗಲು ಸಾಧ್ಯವೇ ಆಗುತ್ತಿರಲಿಲ್ಲ' ಎಂದು ಶೇನ್ ಹೇಳಿಕೊಂಡಿದ್ದರು.

ಟೆನಿಸ್ ಕೋರ್ಟ್‌ನಲ್ಲಿ ಸ್ಪಿನ್ ಪಾಠ

ಶೇನ್ ವಾರ್ನ್ ತಮ್ಮ ಲೆಗ್ ಸ್ಪಿನ್ ಬೌಲಿಂಗ್ ಕಲೆಯ ಮೂಲಪಾಠಗಳನ್ನು ಕಲಿತಿದ್ದು ಟೆನಿಸ್ ಕೋರ್ಟ್‌ನಲ್ಲಂತೆ. ಶೇನ್ ತಾಯಿ ಬ್ರಿಗೆಟ್ ಅವರು 1970ರಲ್ಲಿ ರಾಜಕೀಯ ಧುರೀಣ ಬಾಬ್ ಹಾಕ್ ಮತ್ತು ಹೇಜಲ್ ದಂಪತಿಯ ಮನೆಯನ್ನು ಸ್ವಚ್ಛಗೊಳಿಸಲು ಹೋಗುತ್ತಿದ್ದರು. ಆಗ ಶೇನ್ ಮತ್ತು ಸಹೋದರ ಜೇಸನ್ ಕೂಡ ತಾಯಿಯೊಂದಿಗೆ ಅಲ್ಲಿಗೆ ಹೋಗುತ್ತಿದ್ದರು. ಶೇನ್ ಕ್ರಿಕೆಟ್ ಪ್ರೀತಿ ಮತ್ತು ಮಣಿಕಟ್ಟಿನ ಶಕ್ತಿಯನ್ನು ಹಾಕ್ ಗಮನಿಸಿದ್ದರು. ಮುಂದೆ ಅವರು ಪ್ರಧಾನಿಯಾದರು. ಆ ಸಂದರ್ಭದಲ್ಲಿ ಸರ್ಕಾರದಿಂದ ಅವರ ಮನೆಯ ಆವರಣದಲ್ಲಿ ಟೆನಿಸ್ ಕೋರ್ಟ್ ನಿರ್ಮಿಸಲು ಅನುದಾನ ಲಭಿಸಿತು. ಆಗ ತಯಾರಾದ ಟೆನಿಸ್ ಕೋರ್ಟ್‌ನಲ್ಲಿ ಶೇನ್‌ಗೆ ಸ್ವತಃ ಬಾಬ್ ಹಾಕ್ ಅವರೇ ಸ್ಪಿನ್ ಬೌಲಿಂಗ್ ಮೂಲಪಾಠಗಳನ್ನು ಹೇಳಿಕೊಟ್ಟಿದ್ದರಂತೆ. ಅದರಿಂದಾಗಿಯೇ ಶೇನ್ ಅವರಿಗೆ ಹಾಕ್ ದಂಪತಿಯ ಬಗ್ಗೆ ಅಪಾರ ಗೌರವ ಇತ್ತು.

ವಿಲಾಸಿ ಜೀವನಪ್ರೇಮಿ

ಮಧ್ಯಮವರ್ಗದ ಆರ್ಥಿಕ ಸಂಕಷ್ಟಗಳನ್ನು ಅನುಭವಿಸಿದ್ದ ಶೇನ್‌ಗೆ ಮೊದಲಿನಿಂದಲೂ ದೊಡ್ಡ ಶ್ರೀಮಂತನಾಗುವ ಮತ್ತು ವಿಲಾಸಿ ಜೀವನ ನಡೆಸುವ ಖಯಾಲಿ ಬೆಳೆದಿತ್ತು. ತಮ್ಮ ಖರ್ಚಿಗಾಗಿ ಪಿಜಾ, ಬರ್ಗರ್ ಡೆಲಿವರಿಬಾಯ್ ಆಗಿಯೂ ಅಲ್ಪಾವಧಿ ಕೆಲಸ ಮಾಡಿದ್ದ ಶೇನ್‌ಗೆ ವ್ಯಾವಹಾರಿಕ ಜ್ಞಾನ ಚೆನ್ನಾಗಿ ಇತ್ತು. ಪಂದ್ಯಗಳನ್ನು ಗೆಲ್ಲಿಸುವ ಆಟಗಾರನಾಗಿ ಬೆಳೆದಂತೆಲ್ಲ ಕ್ರಿಕೆಟ್ ಆಸ್ಟ್ರೇಲಿಯಾದಿಂದ ಉಳಿದವರಿಗಿಂತ ಹೆಚ್ಚು ಸಂಭಾವನೆಗೆ ಬೇಡಿಕೆ ಇಟ್ಟಿದ್ದರು. ಒಂದಷ್ಟನ್ನು ಪಡೆಯುವಲ್ಲಿಯೂ ಯಶಸ್ವಿಯಾಗಿದ್ದರು. ಜೊತೆಗೆ ಜಾಹೀರಾತು ಮತ್ತು ವಾಣಿಜ್ಯ ಒಪ್ಪಂದಗಳಿಗೂ ಕೈಹಾಕಿದ್ದರು. ಕಾಮೆಂಟ್ರಿ ಒಪ್ಪಂದದಲ್ಲಿಯೇ ಮೂರು ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಹಣ ಪಡೆದಿದ್ದರು. ಅವರ ಒಟ್ಟು ಆಸ್ತಿಯ ಮೌಲ್ಯ ₹ 35 ಸಾವಿರ ಕೋಟಿ!

ಕಾರುಗಳ ಖಯಾಲಿ

ಶೇನ್ ವಾರ್ನ್ ಅವರಿಗೆ ಐಷಾರಾಮಿ ಕಾರುಗಳ ಖಯಾಲಿ ಇತ್ತು. ಅವರ ವೈಭವೋಪೇತ ಮನೆಯ ಕೆಳ ಅಂತಸ್ತಿನ ಗ್ಯಾರೇಜ್‌ನಲ್ಲಿ ಫೆರಾರಿ, ಬೆಂಟ್ಲಿ, ಮರ್ಸಿಡಿಸ್, ಬಿಎಂಡಬ್ಲ್ಯು, ಬುಗಾಟಿ ವೆರಾನ್, ಹೋಲ್ಡನ್ ವಿಕೆ ಕಮಾಂಡರ್, ಲ್ಯಾಂಬೊರ್ಗಿನಿ ಸೇರಿದಂತೆ 20 ಕಾರುಗಳಿದ್ದವು. ತಮ್ಮ ಮನೆಯಲ್ಲಿ ಹದಿಮೂರು ವೈಭವೋಪೇತ ಬೆಡ್‌ರೂಮ್‌ಗಳು, ವಿಶಾಲವಾದ ಹಾಲ್, ಮದಿರಾ ಭವನ ಮತ್ತು ಕೆಳಅಂತಸ್ತಿನಲ್ಲಿ ದೊಡ್ಡದಾದ ಸುಸಜ್ಜಿತ ಗ್ಯಾರೇಜಿನಲ್ಲಿ ಕಾರುಗಳ ಸಂತೆಯೇ ಇದೆ ಎಂದು ಯಾವಾಗಲೂ ಹೇಳಿಕೊಳ್ಳುತ್ತಿದ್ದರು.

ಪತ್ನಿ, ಮೂವರು ಮಕ್ಕಳು ಮತ್ತು ಗೆಳತಿಯರು

ಶೇನ್ ವಾರ್ನ್ ರಾಷ್ಟ್ರೀಯ ತಂಡದಲ್ಲಿ ಪದಾರ್ಪಣೆ ಮಾಡುವ ಮುನ್ನವೇ ಪರಿಚಯವಾಗಿದ್ದವರು ಸಿಮೊನ್ ಕ್ಯಾಲ್ಹಾನ್. ಸೆಲೆಬ್ರಿಟಿ ಕಾರ್ಯಕ್ರಮದಲ್ಲಿ ಭೇಟಿಯಾಗಿದ್ದರು. ಪರಿಚಯ ಪ್ರೇಮವಾಗಿ ಬೆಳೆದು, 1995ರಲ್ಲಿ ಮದುವೆಯೂ ಆಯಿತು. ಮೂವರು ಮುದ್ದಾದ ಮಕ್ಕಳೂ ಅವರ ಬಾಳಿನಲ್ಲಿ ಖುಷಿ ತುಂಬಿದರು. ಆದರೆ, 'ಪ್ಲೇ ಬಾಯ್' ಆಗಿಯೇ ಉಳಿದಿದ್ದ ಶೇನ್ ವಾರ್ನ್ ದಾಂಪತ್ಯ ಜೀವನಕ್ಕೆ ಪರಸ್ತ್ರೀ ಸಂಗವು ಮುಳುವಾಯಿತು. 2005ರಲ್ಲಿ ಸಿಮೊನ್ ವಿಚ್ಛೇದನ ಪಡೆದರು.

ರೂಪದರ್ಶಿ ಎಮಿಲಿ ಸ್ಕಾಟ್ ಮತ್ತು ವಿವಾಹ ವಿಚ್ಛೇದನದ ನಂತರ ನಟಿ ಲೀಜ್ ಹರ್ಲಿಯೊಂದಿಗೆ ಒಂದಷ್ಟು ಕಾಲ ಸಹಜೀವನ ನಡೆಸಿದ್ದು ಆಸ್ಟ್ರೇಲಿಯಾ ನಿಯತಕಾಲಿಕೆಗಳಿಗೆ ರಸವತ್ತಾದ ಕಥೆಗಳನ್ನು ಕಟ್ಟಿಕೊಟ್ಟಿದ್ದವು. ಶೇನ್ ವಾರ್ನ್ ಭಾಗಿಯಾಗಿದ್ದ 'ತ್ರೀಸಮ್' ಪ್ರಕರಣವೂ ಬಾರಿ ಸುದ್ದಿಯಾಗಿತ್ತು.

9ನೇ ಪುಟಕ್ಕೆ...



ಮಡಕೆ ತಣಿಸೀತೆ ನೀರಡಿಕೆ...
–ಪ್ರಜಾವಾಣಿ ಚಿತ್ರ: ಕೃಷ್ಣಕುಮಾರ್ ಪಿ.ಎಸ್.

ಬೇಸಿಗೆಯ ಸುಖ

ನೆನೆನೆನೆದು ತಂಪಾಗೋಣ ಬನ್ನಿ!

ಶುಭಶ್ರೀ ಪ್ರಸಾದ್

ಬೇಸಿಗೆಯ ಸುಡುಸುಡು ಬಿಸಿಲೆಂದರೆ ಎಲ್ಲರೂ ಉಸ್ಸಪ್ಪ ಎನ್ನುವವರೇ. ಈ ಬೇಸಿಗೆಯೆಂಬ ಮಾಯಾವಿಗೆ ಚಳಿಗಾಲದ ನಂಟಸ್ತಿಕೆಯೂ ಮಳೆಗಾಲದ ಬಾಂಧವ್ಯವೂ ಚೆನ್ನಾಗಿಯೇ ಇದೆ. ಪ್ರತಿವರ್ಷವೂ ಚಳಿಗಾಲದ ಕೈ ಹಿಡಿದೇ ಬೇಸಿಗೆರಾಯ ನಡಿಗೆ ಕಲಿತು ಓಡುವುದು; ಹಾಗೆಯೇ ಮಳೆಗಾಲದ ಕೈಹಿಡಿದು ನಡಿಗೆ ಕಲಿಸಿ, ತಾ ಹಿಂದುಳಿಯುವುದು.

ಸೂರ್ಯನ ಗತಿಗೆ ಅನುಗುಣವಾಗಿಯೇ ದಕ್ಷಿಣಾಯಣ, ಉತ್ತರಾಯಣ ಎಂದು ವಿಭಾಗ ಮಾಡಿರುವುದು. ಸೂರ್ಯನ ಪ್ರಭಾವ ಮತ್ತು ಶಕ್ತಿಯೇ ಅಂಥದ್ದು. ಸೂರ್ಯ ತೀವ್ರವಾಗಿ ಆರ್ಭಟಿಸುವುದು ಬೇಸಿಗೆಕಾಲದಲ್ಲಿಯೇ. ನಮ್ಮ ಮೈಸೂರು ಭಾಗದ ಬೇಸಿಗೆಯ ಬೇಗೆ ಉತ್ತರ ಕರ್ನಾಟಕದಷ್ಟೋ ಕಲ್ಯಾಣ ಕರ್ನಾಟಕದಷ್ಟೋ ತೀವ್ರವೇನಲ್ಲ. ದೆಹಲಿಯನ್ನು ನೆನೆದರಂತೂ 'ಓಹ್ ದೇವರೇ ನೀ ಅಲ್ಲಿ ಹೇಗಿದ್ದೀ' ಎಂದು ಕೇಳುವಂತಾಗುತ್ತದೆ. ಆದರೂ ನಮ್ಮ ಬೇಸಿಗೆಯೇನೂ ತಂಪಲ್ಲ. ಸೂರ್ಯ ಮೈಕೊಡವಿ ನಿಲ್ಲುವಷ್ಟರಲ್ಲಿ ಮೈನೀರು ಇಂಗಿಯೇ ತೀರುತ್ತದೆ.

> ಬೇಸಿಗೆ ಎಂದರೆ ಹಣ್ಣುಗಳ ರಾಜನ ದರ್ಶನ, ಬೇಸಿಗೆ ಎಂದರೆ ಹಪ್ಪಳ–ಸಂಡಿಗೆಯಂತಹ ಕುರುಕಲು ತಿಂಡಿಗಳ ಸಮಾರಾಧನೆ, ಬೇಸಿಗೆ ಎಂದರೆ ತಂಪಿನ ಬೆಲೆಯನ್ನು ನೆನಪಿಸುವ ಸಮಯ, ಬೇಸಿಗೆ ಎಂದರೆ ಮಳೆಗೆ ಭೂಮಿಯನ್ನು ಹದಮಾಡುವ ಸಾಧನ. ಒಂದು ಮಧ್ಯಾಹ್ನದ ಉರಿಬಿಸಿಲಿನಲಿ ಕುಳಿತು ಬಿಸಿಲಿನ ಕುರಿತು ಧೇನಿಸಿದಾಗ...

ತಲೆಗೆ ಟೊಪ್ಪಿ, ಛತ್ರಿ, ಕಣ್ಣಿಗೆ ತಂಪು ಕನ್ನಡಕ ಹಾಕಿಕೊಂಡು, ಸಾಲದಾತ ಎಲ್ಲಿ ತನ್ನನ್ನು ಕಂಡು ಸಾಲ ಕೇಳುವನೋ ಎಂದು ಹೆದರಿ ಹೆದರಿ ಮನೆಯಿಂದ ಹೊರಬರುವ ಸಾಲಗಾರರಂತೆ ಬಿಸಿಲ ಝಳಕ್ಕೆ ಬೆದರಿ ಯೋಚಿಸಿ ಯೋಚಿಸಿ ಮನೆಯಿಂದ ಹೊರಗೆ ಕಾಲಿಡುತ್ತೇವೆ. ಎಷ್ಟೋ ಬಾರಿ 'ಧೈರ್ಯಂ ಸರ್ವತ್ರ ಸಾಧನಂ' ಎಂದು ಹೊರಗೆ ಅಡಿಯಿಟ್ಟೂ ರಣರಂಗದಲ್ಲಿ ಉತ್ತರಕುಮಾರನ ಪೌರುಷ ಅಡಗುವಂತೆ ಸೂರ್ಯನ ತಾಪಕ್ಕೆ ಬಳಲಿ ಬಿರುನಡೆಯಿಂ ಮತ್ತೆ ಮನೆಗೆ ಮರಳುವುದುಂಟು. ಬೇಗೆಯಿಂದಾಗಿಯೇ ಇದಕ್ಕೆ ಬೇಸಿಗೆ ಎಂದು ಹೆಸರಾಯ್ತೇನೋ ಎಂದು ನನಗೆ ಅನುಮಾನ.

ಇನ್ನು ಎಷ್ಟು ನೀರು ಕುಡಿದರೂ ಇಂಗದ ದಾಹಕ್ಕೆ ಮಜ್ಜಿಗೆ, ಎಳನೀರು, ಪಾನಕ, ಜ್ಯೂಸು, ಕಲ್ಲಂಗಡಿ ಹಣ್ಣು, ಐಸ್ ಕ್ರೀಮುಗಳು ವಿರಹಕ್ಕೆ ಸಿಲುಕಿದ ಪ್ರಿಯಕರನಿಗೆ ಪ್ರಿಯತಮೆ ಸಿಕ್ಕಂತೆ ಅವುಗಳ ಸಖ್ಯ ಹಿತವಾಗಿರುತ್ತೆ. ಇನ್ನು ಬಟ್ಟೆಗಳ ವಿಷಯದಲ್ಲೂ ಬೇಸಿಗೆ ಬಂತೆಂದರೆ ಪ್ರಕೃತಿಗೆ ಹತ್ತಿರವಾದ ಹತ್ತಿಯುಡುಗೆಯೇ ಹಿತ. ಉಳಿದ ಕಾಲದಲ್ಲಿ ಹೇಗೆ ಬೇಕಾದರೂ ಫ್ಯಾಷನ್ ಮಾಡುವ ಹೆಂಗಳೆಯರು ಬೇಸಿಗೆಯಲ್ಲಿ ಹಳೆಯ ಕಾಲದವರಂತೆ ಹತ್ತಿಯ ಬಟ್ಟೆಯ ಮೊರೆ ಹೋಗಲೇಬೇಕು. ಕಾಲಾಯ ತಸ್ಮೈ ನಮಃ.

ಭಾಳ ಸಿಟ್ಟು ಬಂದವರನ್ನು 'ಸೂರ್ಯನ ಥರ ಉರೀಬ್ಯಾಡಪ್ಪ' ಎನ್ನುವ ಮಾತು ಜನಜನಿತ. ಎಂದರೆ ಸೂರ್ಯನಿಗೆ ಸಿಟ್ಟುಬರುವ ಕಾಲ ಬೇಸಿಗೆ. ಅದಕ್ಕೇ ಯಾರಾದ್ರೂ ಸೂರ್ಯನನ್ನು ಬೈದರೆ ಬಿ.ಆರ್.ಲಕ್ಷ್ಮಣರಾವ್ ಅವರ 'ಏಕೆ ರವಿಗಿಂತ ತಾಪ? ಯಾರ ಮೇಲವನ ಕೋಪ? ಎಂದು ಹಳಿಯಬೇಡಿ, ಸೂರ್ಯನ ತಪ್ಪು ತಿಳಿಯಬೇಡಿ, ಮೋಡ ಕೂಡಿಸಲು, ಇಳೆಗೆ ಮಳೆ ತರಲು ದುಡಿಯುತಿಹನು, ಪಾಪ!' ಎಂಬ ಕವನವನ್ನು ಹೇಳಿ ಕೋಪಗೊಂಡವರನ್ನು ತುಸು ತಣ್ಣಗಾಗಿಸೋದು.

ಜಾಗತಿಕ ತಾಪಮಾನದ ಏರಿಕೆಯ ಪ್ರಭಾವದಿಂದಾಗಿ ಬೇಸಿಗೆ ಸಹ್ಯವಾಗುತ್ತಿಲ್ಲ. ಸೂರ್ಯ ನಿಗಿನಿಗಿ ಕೆಂಡವಾಗಿರುವಾಗ ತುಸುವಾದರೂ ತಣ್ಣಗಾಗಲಿ ಎಂದರೆ ತಿರುಗುವ ಫ್ಯಾನುಗಳೂ ಸೂರ್ಯನ ಪ್ರತಿನಿಧಿಗಳೇನೋ ಎಂಬಂತೆ ಬಿಸಿಗಾಳಿ ಬೀಸಿ ಮತ್ತೂ ಧಗೆಯನ್ನು ಹೆಚ್ಚಿಸುತ್ತವೆ. ಚಳಿಗಾಲದಲ್ಲಿ ಮುಚ್ಚಿಮುದುರಿ ಕುಳಿತ ಕಿಟಕಿಗಳು ಜೀವಬಂದವರಂತೆ ಬಾಯ್ತೆರೆದುಕೊಂಡು ಕುಳಿತುಕೊಳ್ಳುತ್ತವೆ. ಏರ್ ಕೂಲರ್‌ಗಳೋ, ಎ.ಸಿ.ಗಳೋ ಕರೆಂಟು ಇದ್ದರೆ ತಾನೇ ಕೆಲಸ ಮಾಡುವುದು? ಆದ್ರೆ ಈ ಕಾಲಕ್ಕೆ ಫ್ರಿಡ್ಜ್ ಮತ್ತು ಕೂಲರ್‌ಗಳಂಥ ಗೆಳೆಯರು ಬೇರಾರೂ ಇಲ್ಲವೇನೋ. ಇದೇ ಗೆಳೆಯರು ಚಳಿಗಾಲದಲ್ಲಿ ಶತ್ರುಗಳಂತೆ ಕಾಣುತ್ತಾರೆ. ಹಾಗೆ ಅನ್ನುವವರನ್ನು ಕಂಡು 'ಹೇ ಮನುಷ್ಯನೇ ನಿನ್ನ ಅನುಕೂಲಕ್ಕೆ ತಕ್ಕಂತೆ ಸಂಬಂಧಗಳನ್ನು ಬದಲಾಯಿಸುವೆಯಲ್ಲಾ' ಎಂದುಕೊಳ್ಳುತ್ತೇನೆ.



ಥೂ ಏನು ಮಳೇನಪ್ಪಾ ಬಿಡೋದೇ ಇಲ್ಲ, ಒಂದು ಬಟ್ಟೆನೂ ಒಣಗೋಹಾಗಿಲ್ಲ, ಎಲ್ಲ ಚುಂಗು ವಾಸನೆಗಿಟ್ಟುಕೊಳ್ಳುತ್ತೆ. ಮನೆಯಿಂದ ಹೊರಗೆ ಹೋಗೋ ಹಾಗಿಲ್ಲ, ಕಾಲೆಲ್ಲ ಕೆಸರಾಗುತ್ತೆ ಅಂತ ಗೊಣಗಾಡುವ ನಮ್ಮನ್ನು ಚಳಿಗಾಲದಲ್ಲಿ ಯಪ್ಪಾ ಮೈ ಥರಗುಟ್ಟಿಸುವ ಕುಳಿಕುಳಿ ಗಾಳಿ, ಬಿಸಿ ಬಿಸಿ ಕಾಫಿ ಕುಡಿಯುತ್ತ ಬಜ್ಜಿ ಬೋಂಡಗಳನ್ನು ಇಳಿಸುತ್ತಾ ಬೆಚ್ಚಗೆ ಹೊದ್ದು ಮಲಗುವಾ ಎನಿಸಿ ಆಲಸಿಗಳನ್ನಾಗಿಸುವ ಕಾಲ. ಅವನ್ನೆಲ್ಲ ಮರೆಸುವ ಬೇಸಿಗೆಯ ಬಿಸಿಯನ್ನು ರವಿಯಂತೆಯೇ ಮುಖ ಮಾಡಿ ಸಿಣಿಗುಟ್ಟುವವರಿಗೇನೂ ಕಮ್ಮಿಯಿಲ್ಲ. ಅದಕ್ಕೇ ನಮ್ಮ ಮೈಸೂರು ಮಲ್ಲಿಗೆಯ ಕವಿ, 'ಚಳಿಗಾಲ ಬಂದಾಗ ಎಷ್ಟು ಚಳಿ ಎಂಬರು, ಬಂತಲ್ಲಾ ಬೇಸಿಗೆ ಕೆಟ್ಟ ಬಿಸಿಲೆಂಬರು, ಮಳೆ ಬಿತ್ತೋ ಬಿಡದಲ್ಲ ಶನಿ ಎಂಬ ಚಿಂತೆ, ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ' ಎಂದದ್ದು.

ನಿತ್ಯಕ್ಕೊಮ್ಮೆ ಸ್ನಾನ ಮಾಡುವ ನಾವು ಬೇಸಿಗೆ ಬಂತೆಂದರೆ ಕೆಸರಿನಲ್ಲಿ ಎಮ್ಮೆ ಹೊರಳಿ ಸುಖಿಸುವ ಹಾಗೆ ಮತ್ತೆ ಮತ್ತೆ ಸ್ನಾನದ ಮೊರೆಹೋಗುತ್ತೇವೆ. ನನ್ನಂಥ ಕೆಲವರು ರಾತ್ರಿ ಮಲಗುವಾಗ ಒಂದು ತಂಬಿಗೆ ನೀರನ್ನು ಸೋರುವಂತೆ ಮೈಮೇಲೆ ಚಿಮುಕಿಸಿಕೊಂಡು ಸಣ್ಣಗೆ ಫ್ಯಾನ್ ಹಾಕಿದರೂ ಶಿಮ್ಲಾದಲ್ಲಿರುವಂತೆ ಸುಖಿಸುತ್ತೇವೆ. ಬೇಸಿಗೆಯಲ್ಲಿ ನನ್ನ ಮತ್ತೊಂದು ಸರ್ಕಸ್ ಎಂದರೆ ಕೆಲಸದಿಂದ ಬಂದ ಕೂಡಲೇ ನಾನು ಮಲಗುವ ಕೋಣೆಯ ಹೊರಗೋಡೆಗೆ ಬಕೆಟುಗಟ್ಟಲೇ ನೀರು ಸುರಿಯುವುದು. ಅದರಲ್ಲೂ ಪಶ್ಚಿಮದಿಕ್ಕಿನ ಗೋಡೆಗಂತೂ ಮೂರು ನಾಲ್ಕು ಬಾರಿ ಸ್ನಾನ. ಹಾಗೆ ಕಾದ ಗೋಡೆಗೆ ನೀರು ಹಾಕುವಾಗ ಅದು ಸಣ್ಣಗೆ ಕಿರ್ ಎಂದು ಕಿರಲುತ್ತದೆ. ಜೊತೆಗೊಂದು ಪರಿಮಳವೂ ಇರುತ್ತದೆ. ಅಂತೆಯೇ ಈ ಬೇಸಿಗೆಯಲ್ಲಿ ನಾವೂ ನೀರು ಕುಡಿಯಲೆಂದು ಬಾಟಲಿಗೆ ಬಾಯಿ ಹಾಕಿದರೆ ಅದೂ ಬುಸುಗುಡುವ ಹೆಂಡತಿಯಂತೆಯೇ ಬಿಸಿಯಾಗಿ ಕುಳಿತಿರುತ್ತದೆ. ಆಗೆಲ್ಲ ಮಣ್ಣಿನಮಡಕೆಯ ನೀರಿನ ರುಚಿಯೇ ರುಚಿ, ಅಜ್ಜಿಯ ಕೈಯಡುಗೆಯಂತೆ.

ಬೇಸಿಗೆಯ ಆರಂಭಕ್ಕೆಲ್ಲ ಬರುವ ಹುಣಸೆಕಾಯಿ, ಮಾವಿನಕಾಯಿಯ ಕೆಲಸಕ್ಕೆ ಹೆಣ್ಣುಮಕ್ಕಳಿಗೆ ಎರಡು ಕೈ ಸಾಲದು. ಇಂದಿಗೂ ಅಂಥ ಸಂಪ್ರದಾಯ ಉಳಿಸಿಕೊಂಡ ಹೆಣ್ಣುಮಕ್ಕಳಿಗೆ ಈ ಮಾತಂದೆ ಬಿಡಿ. ಬಲಿಯದ ಹುಣಸೆಕಾಯನ್ನು ತೊಳೆದು ನೀರಾರಿಸಿ ಒಂದೆಳೆ ಬಿಸಿಲಿಗೆ ಹಾಕಿ ನಾರು ತೆಗೆದು ಚೂರುಮಾಡಿ ಹಸಿರುಮೆಣಸಿನಕಾಯಿ, ಉಪ್ಪು ಹಾಕಿ ಕಳಿತ ನಂತರ ಒರಳಿನಲ್ಲಿ ರುಬ್ಬಿ, ಸಾಸಿವೆ ಇಂಗಿನ ಪರಿಮಳದ ಒಗ್ಗರಣೆ ಕೊಟ್ಟ ಹುಣಸೆತೊಕ್ಕಿನ ರುಚಿಗೆ ಸೋಲದವರಿದ್ದಾರೆಂದರೆ ನನ್ನಾಣೆ ನಾ ನಂಬೆ. ಹಾಗೆಯೇ ಅದೇ ಹುಣಸೇಕಾಯಿಯನ್ನು, ಕಾದಾರಿದ ಉಪ್ಪುನೀರಿನೊಂದಿಗೆ ಒರಳಿನಲ್ಲಿ ತುಸು ತುಸುವೇ ಹಾರೆಯಿಂದ ಕುಟ್ಟಿ ಹಿಂಡಿ ರಸತೆಗೆದು ಅದಕ್ಕೆ ಒಣ ಬ್ಯಾಡಗಿ ಮೆಣಸಿನಕಾಯಿ ಹಸಿಸಾಸಿವೆ ರುಬ್ಬಿ ಹಾಕಿ ಕಲೆಸಿ ಇಂಗಿನೊಗ್ಗರಣೆ ಕೊಟ್ಟರೆ ಕೆಂಪನೆಯ ಹುಣಸೆ ರಸ ಸಿದ್ಧ. ಅಕ್ಕಿರೊಟ್ಟಿಗೂ ಸೈ, ದೋಸೆಗೂ ಸೈ, ಬಿಸಿಯನ್ನಕ್ಕೆ ಕಡಲೇಕಾಯಿಯೆಣ್ಣೆಯೊಂದಿಗೆ ಕಲೆಸಿ ಬಾರಿಸಲಿಕ್ಕೂ ಸೈ.

ಊರೆಲ್ಲ ಬಿಸಿ ಬಿಸಿಲು ಎಂದು ಗೊಣಗಿದರೂ, ಬೇಸಿಗೆಯ ಬಿಸಿಲಿಗೆ ಕಾಯುವ ತಂಡವೊಂದಿರುತ್ತದೆ. ಇಡಿಯ ಮಾಡೆಲ್ಲ ಕಾದು ರೊಟ್ಟಿಯ ಹೆಂಚಾಗುವ ಕಾಲದಲ್ಲಿ ಹೆಣ್ಣುಮಕ್ಕಳ ಸಡಗರ ಗರಿಗೆದರುತ್ತದೆ. ವರ್ಷಕ್ಕೆಲ್ಲ ಸಾಕಾಗುವಷ್ಟು ಹಪ್ಪಳ, ಸಂಡಿಗೆ, ಬಾಳಕ, ಪೇಣಿಗಳ ತಯಾರಿ. ರಾತ್ರಿಯೆಲ್ಲ ಅಳೆದಿಟ್ಟು ಬೆಳಿಗ್ಗೆ ಗಂಡ ಮಕ್ಕಳು ಏಳುವ ಹೊತ್ತಿಗೆ ಅಕ್ಕಿಯ ಅಥವಾ ಸಬ್ಬಕ್ಕಿಯ ಗಂಜಿ ಹಪ್ಪಳಕ್ಕೆ ಗಂಜಿ ಕಾಯಿಸಿ ಹಳೆಯ ಹತ್ತಿ ಸೀರೆಯ ಮೇಲೆ ಸೌಟಿನಿಂದ ಸವರಿ, ಮಧ್ಯೆ ಮಧ್ಯೆ ಬೆವರು ಒರೆಸಿಕೊಳ್ಳುತ್ತ ಎಲ್ಲ ಗಂಜಿ ಬಿಡುವುದು ಒಂದು ಬಗೆ. ಅಕ್ಕಿ ಹಿಟ್ಟನ್ನು ಬಿಸಿನೀರಲ್ಲಿ ಉಕ್ಕರಿಸಿ ಉಂಡೆಮಾಡಿ ಒತ್ತಿ ಬಟ್ಟೆಯ ಮೇಲೋ ಪ್ಲಾಸ್ಟಿಕ್ ಹಾಳೆಯ ಮೇಲೋ ಇಟ್ಟು, ಇಟ್ಟಾದ ಮೇಲೆ ತಾ ಹೆತ್ತ ಮಕ್ಕಳನ್ನು ಹೆಮ್ಮೆಯಿಂದ ನೋಡುವ ತಾಯಿಯಂತೆ ಮತ್ತೊಮ್ಮೆ ನೋಡಿ ಮನೆಯ ಮೇಲಿನಿಂದ ಇಳಿದು ಬಂದು ಉಸ್ಸೆಂದು ಕೂರುವ ಹೆಣ್ಣುಮಕ್ಕಳು ಈಗ ಬೆರಳೆಣಿಕೆಯಷ್ಟೆ. 'ಅಷ್ಟ್ಯಾಕೆ ಕಷ್ಟ ಪಡಬೇಕು, ದುಡ್ಡು ಕೊಟ್ಟರೆ ಅಂಗಡೀಲಿ ಸಿಗೋದಿಲ್ವೇ' ಎನ್ನುವವರೇ ಹೆಚ್ಚು. ಆದರೂ ಬೇಸಿಗೆಯಲ್ಲಿ ಅವುಗಳನ್ನೆಲ್ಲ ಮಾಡುವ ಸಂಭ್ರಮ, ಸಡಗರ, ಅದನ್ನು ತಿಂದು ಮನೆಯವರು ಮೆಚ್ಚಿದಾಗ ಸಿಗುವ ಆನಂದ ಕೊಳ್ಳುವುದರಲ್ಲಿ ಸಿಕ್ಕೀತೇ?

10ನೇ ಪುಟಕ್ಕೆ...

ಊರ್ಗುಬ್ಬಿ ಎಲ್ಲಿಗ್ಹೋದಿ?



ಸೋಮಲಿಂಗ ಬೇಡರ

ಮಾರ್ಚ್ 20 ವಿಶ್ವ ಗುಬ್ಬಿ ದಿನ

ಗ್ವಾಡಿಯೊಳಗ ಸಂದಿ ಕೊರದು
ಗೂಡ ಮಾಡ್ಕೊಂಡ ಬದಕ್ತಿದ್ದಿ
ಮನಿಯೊಳಗ ಹಾರಿ ಬಂದು
ಕನ್ನಡಿ ನೋಡಿ ಕುಣಿದಾಡ್ತಿದ್ದಿ
ಈಗ ಮಾತ್ರ ಕಾಣವಲ್ಲಿ
ಊರ್ಗುಬ್ಬಿ ಎಲ್ಲಿಗ್ಹೋದಿ!

ಪುಟ್ಟ ಪುಟ್ಟ ದೇಹ, ಟುಣು ಟುಣು ಜಿಗಿತ, ಅತ್ತಿತ್ತ ಹೊರಳಾಡಿಸುವ ಕತ್ತು, ಮಿಂಚುಗಣ್ಣು, ಚಿಕ್ಕ ಚುಂಚು, ಚಿಂವ್ ಚಿಂವ್ ಉಚ್ಚಾರ, ಪುರ್ರನೆ ಹಾರುವ ಸದ್ದು, ಇಂಥ ಗುಣ ವಿಶೇಷಣದ ಗುಬ್ಬಚ್ಚಿಗಳು ಎಂಥವರನ್ನೂ ಮಂತ್ರಮುಗ್ಧಗೊಳಿಸುತ್ತವೆ. ಅವುಗಳ ಸರಸ-ವಿರಸ, ಆಟ-ಚೆಲ್ಲಾಟ, ಲಾಲನೆ-ಪಾಲನೆ, ಗೂಡ ಕಟ್ಟುವ ಅಂದ-ಚಂದ, ಚಿಲಿಪಿಲಿಗುಟ್ಟುವ ನಾದಸ್ವರ, ಕೆಲಹೊತ್ತು ನಿಂತು ಗಮನಿಸಿದರೆ ಸಾಕು ಮೈಮರೆಯುವಂತಾಗುತ್ತದೆ. ಇಂಥ ಗುಬ್ಬಚ್ಚಿಗಳು ಇಂದು ಕಾಣಸಿಗುವುದು ಅಪರೂಪ!

ನಮ್ಮ ಮನೆಯ ಸದಸ್ಯರ ಹಾಗೆ ಅಂಗಳದಲ್ಲಿ, ಪಡಸಾಲೆಯಲ್ಲಿ, ಫೋಟೊಗಳ ಹಿಂದೆ, ಜಂತಿ, ಮಾಳಗಿ, ಗೋಡೆಯ ಸಂದಿಯಲ್ಲಿ ಗೂಡು ಕಟ್ಟಿಕೊಂಡು ಇರುತ್ತಿದ್ದವು. ಹಿಡಿಯಷ್ಟು ಆಕಾರದ ಗುಬ್ಬಿಗಳ ಸಂಸಾರ ಅದೆಷ್ಟು ಚಂದ! ಗಂಡು ಹೆಣ್ಣು ಜತೆ ಜತೆಯಾಗಿ ಹಾರಾಡುತ್ತ ಇರುವುದನ್ನು ನೋಡಿದರೆ ಎರಡು ಕಣ್ಣು ಸಾಲುತ್ತಿರಲಿಲ್ಲ. ಗುಬ್ಬಿಗಳು ಇಲ್ಲದ ಮನೆಗಳೇ ಇಲ್ಲ ಅನ್ನುವಂಥ ಸನ್ನಿವೇಶ ಆಗಿನ ಕಾಲದ್ದು. ಕುಟುಂಬ ಜೀವನ ಹೇಗೆ ನಡೆಸಬೇಕೆಂಬುದನ್ನು ಅವುಗಳು ಕಲಿಸಿಕೊಡುತ್ತಿದ್ದವು.

ಪ್ರತಿಯೊಂದು ಹಳ್ಳಿಯಲ್ಲಿ ಕುರಿ, ಕೋಳಿ, ದನಕರುಗಳನ್ನು ಸಾಕುವುದು ಸರ್ವೇಸಾಮಾನ್ಯ. ಅವುಗಳಿಗೆ ಮೇವು, ನೀರು, ಕಾಳು ಕಡಿ ಇಡುವುದೊಂದೇ ತಡ ಗುಬ್ಬಿಗಳು ಹಿಂಡಗೂಡಿ ಬಂದು ಹೊಟ್ಟೆ ತುಂಬ ತಮಗೆ ಬೇಕಾದುದನ್ನು ತಿಂದು, ನೀರು ಕುಡಿದು ಹಾಯಾಗಿರುತ್ತಿದ್ದವು. ಮಧ್ಯಾಹ್ನದ ಸುಡುವ ಬಿಸಿಲಿನಲ್ಲಿ ಗಿಡದ ಕೆಳಗೆ ಒಡೆದ ಮಣ್ಣಿನ ಗಡಿಗೆ ನೆಲದೊಳಗೆ ಅರ್ಧ ಹುದುಗಿಸಿ, ಕೋಳಿ ನಾಯಿ ಬೆಕ್ಕುಗಳು ಕುಡಿಯಲೆಂದು ನೀರು ತುಂಬಿಸಿ ಇಡುತ್ತಿದ್ದರು. ಅಲ್ಲಿಗೆ ಖುಷಿ ಖುಷಿಯಾಗಿ ಹಾರಿ ಬಂದು ಅವುಗಳ ಜತೆಗೆ ತಾವೂ ಬೆರೆತು ನೀರು ಕುಡಿಯುತ್ತಿದ್ದವು. ಸ್ವಲ್ಪ ಹೊತ್ತು ಅದೇ ನೀರಿನಲ್ಲಿ ಪುರ್ರ್ ಪುರ್ರ್ ಅಂತ ಈಜಾಡಿ ಮೈ ತಂಪು ಮಾಡಿಕೊಳ್ಳುವುದನ್ನು ನೋಡಿದರೆ ನಮಗೂ ಬಾವಿಗೆ ಹೋಗಿ ಗುಬ್ಬಚ್ಚಿಗಳಂತೆ ನೀರಿನಲ್ಲಿ ಈಜಾಡಬೇಕು ಅನಿಸುತ್ತಿತ್ತು. ಎಷ್ಟೋ ಬಾರಿ ಹಾಗೆ ಮಾಡಿ ನಮ್ಮಾಸೆ ಈಡೇರಿಸಿಕೊಂಡಿದ್ದೇವೆ.



ಗುಬ್ಬಿ ಗುಬ್ಬಿ
ಚಿಂವ್ ಚಿಂವ್ ಎಂದು
ಕರೆಯುವೆ ಯಾರನ್ನು?
ಆಚೆ ಈಚೆ
ಹೊರಳಿಸಿ ಕಣ್ಣು
ನೋಡುವೆ ಏನನ್ನು?

ಎನ್ನುವ, ಗುಬ್ಬಿ ಕುರಿತು ಎ.ಕೆ. ರಾಮೇಶ್ವರ ಅವರು ಬರೆದ ಹಾಡು ನಮಗೆ ಪ್ರಾಥಮಿಕ ಶಾಲೆಯಲ್ಲಿ ಕಲಿಯುವಾಗ ಕನ್ನಡ ಪುಸ್ತಕದಲ್ಲಿ ಇತ್ತು. ಗುರುಗಳಿಂದ ಈ ಪದ್ಯ ಕೇಳಿದ ಮೇಲಂತೂ ಗುಬ್ಬಿ ಕಂಡರೆ ಹೆಚ್ಚೆಚ್ಚು ಪ್ರೀತಿ ಉಕ್ಕಲು ಶುರುವಾಯಿತು.

10ನೇ ಪುಟಕ್ಕೆ...

ಮುನ್ನೋಟ 13-03-2022 ರಿಂದ 19-03-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಕೌಟುಂಬಿಕ ಸಮಸ್ಯೆಗಳಿಂದ ಸ್ವಲ್ಪಮಟ್ಟಿಗೆ ಮುಕ್ತಿ ಪಡೆಯಬಹುದು. ದೀರ್ಘಕಾಲದ ಆರೋಗ್ಯ ಸಮಸ್ಯೆಯಿಂದ ಸುಧಾರಣೆ ಕಂಡುಕೊಳ್ಳುವಿರಿ. ಬಟ್ಟೆ ವ್ಯಾಪಾರಿಗಳಿಗೆ ಆದಾಯ ಹೆಚ್ಚುತ್ತದೆ. ಹಣಕಾಸು ಸಂಸ್ಥೆಗಳಿಗೆ ಅಧಿಕಾರಿಗಳ ವ್ಯತಿರಿಕ್ತ ಸಲಹೆಗಳಿಂದ ನಷ್ಟ ಸಂಭವಿಸಬಹುದು. ಲೇವಾದೇವಿಗಾರರು ಸ್ವಲ್ಪ ಎಚ್ಚರದಿಂದ ಇರುವುದು ಒಳ್ಳೆಯದು. ಇಲ್ಲವಾದಲ್ಲಿ ಕಾನೂನಿನ ಹಿಡಿತಕ್ಕೆ ಸಿಲುಕಿಕೊಳ್ಳುವ ಸಾಧ್ಯತೆ ಇದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಹೊಸ ವ್ಯಕ್ತಿಗಳ ಪರಿಚಯವಾಗಿ ಮತ್ತು ಅವರ ಸಹಕಾರದಿಂದ ಕಲಾವಿದರುಗಳಿಗೆ ಗೌರವ ಪ್ರಾಪ್ತಿಯಾಗುತ್ತದೆ. ಅನಿರೀಕ್ಷಿತ ಮೂಲದಿಂದ ಧನಾಗಮನವಾಗಿ ಆರ್ಥಿಕ ಸ್ಥಿತಿ ಸದೃಢವಾಗುತ್ತದೆ. ಕಣ್ಣಿನ ಸಮಸ್ಯೆಗಳ ಪರಿಹಾರಕ್ಕೆ ವೃದ್ಧರಿಗೆ ಸಾಮಾಜಿಕ ಕಾರ್ಯಕರ್ತರುಗಳಿಂದ ಸಹಾಯ ದೊರೆಯುತ್ತದೆ. ತರಕಾರಿ, ಹಣ್ಣುಗಳಿಗೆ ಬೇಡಿಕೆ ಹೆಚ್ಚಾಗಿ ಅದರ ವ್ಯಾಪಾರಸ್ಥರಿಗೆ ಲಾಭ ದೊರೆಯುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸಾಮಾಜಿಕ ಸೇವೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿರಿ. ಕುಟುಂಬ ಜೀವನದಲ್ಲಿ ಸಂತೋಷವನ್ನು ಕಾಣುವಿರಿ. ಆಸ್ತಿ ವಿವಾದಗಳಲ್ಲಿ ನಿಮಗೆ ಹೆಚ್ಚು ಅನುಕೂಲ ಆಗುತ್ತದೆ. ನೆರೆಹೊರೆಯವರೊಂದಿಗೆ ವಿರಸ ಖಂಡಿತ ಬೇಡ. ಜಲ ಸಂಬಂಧಿ ಕೆಲಸಗಳನ್ನು ಮಾಡುವವರಿಗೆ ಉತ್ತಮ ಕೆಲಸ ದೊರೆತು ಆದಾಯ ಹೆಚ್ಚುತ್ತದೆ. ಸಂಗಾತಿಯ ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಗೃಹ ನಿರ್ಮಾಣ ಕಾರ್ಯಗಳಲ್ಲಿ ಯಶಸ್ಸು ದೊರೆತು ಇದಕ್ಕೆ ಬೇಕಾದ ಸಹಕಾರ ಮಿತ್ರರಿಂದ ದೊರೆಯುತ್ತವೆ. ಕೆಲವೊಂದು ತುರ್ತು ವಿಷಯಗಳ ಪರಿಹಾರಕ್ಕಾಗಿ ನಿಮ್ಮ ಸಂಬಂಧಿಗಳ ಸಹಾಯವನ್ನು ಪಡೆಯುವಿರಿ. ದೈನಂದಿನ ವ್ಯವಹಾರಗಳಲ್ಲಿ ಆಸಕ್ತಿ ಹೆಚ್ಚಾಗುತ್ತದೆ. ಮಕ್ಕಳ ಓದಿನ ವಿಷಯದಲ್ಲಿ ಉತ್ತಮ ವಾರ್ತೆಗಳು ಕೇಳಿಬರುತ್ತವೆ. ಉದ್ದಿಮೆ ನಡೆಸುವವರಿಗೆ ಯಂತ್ರೋಪಕರಣಗಳ ತೊಂದರೆ ಆಗಲಿದೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಬಂಧುಗಳಲ್ಲಿನ ಭಿನ್ನಾಭಿಪ್ರಾಯವನ್ನು ದೂರ ಮಾಡುವಲ್ಲಿ ಸಾಕಷ್ಟು ಸಫಲತೆ ಕಾಣುವಿರಿ. ಭೂ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ತೈಲ ವ್ಯಾಪಾರಿಗಳಿಗೆ ವ್ಯಾಪಾರ ವೃದ್ಧಿಸಿ ಆದಾಯ ಹೆಚ್ಚುತ್ತದೆ. ನಿಮ್ಮ ಲೆಕ್ಕಪತ್ರಗಳನ್ನು ಮರುಪರಿಶೀಲನೆಗೆ ಒಳಪಡಿಸಬೇಕಾದ ಸಂದರ್ಭ ಬರಬಹುದು. ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುವವರ ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ವಿದ್ಯಾರ್ಥಿಗಳಿಗೆ ಅವರ ಸಮಸ್ಯೆಗಳಿಂದ ಮುಕ್ತಿ ಹೊಂದುವ ಅವಕಾಶವಿದೆ. ಮಹಿಳಾ ಪ್ರತಿಭೆಗಳಿಗೆ ಹೆಚ್ಚಿನ ಅವಕಾಶ ದೊರೆತು ಯಶಸ್ಸು ಸಿಗುತ್ತದೆ. ಸರ್ಕಾರಿ ಹುದ್ದೆಯಲ್ಲಿರುವವರಿಗೆ ಭ್ರಷ್ಟಾಚಾರದ ಆರೋಪ ಬರುವ ಸಾಧ್ಯತೆಗಳಿವೆ. ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಬರಬೇಕಾಗಿದ್ದ ಎಲ್ಲ ರೀತಿಯ ಸಹಾಯಧನಗಳು ಈಗ ಬರುತ್ತವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ನಿರುದ್ಯೋಗಿಗಳಿಗೆ ಉದ್ಯೋಗದ ಬಾಗಿಲು ತೆರೆಯುತ್ತದೆ. ಆತುರದ ನಿರ್ಧಾರಗಳಿಂದ ಕೆಲಸ ಕಾರ್ಯಗಳಲ್ಲಿ ವಿಘ್ನವಾಗಬಹುದು. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಆಮದು ಮತ್ತು ರಫ್ತು ವ್ಯವಹಾರ ಮಾಡುತ್ತಿರುವವರಿಗೆ ಕಾನೂನಿನ ಸಮಸ್ಯೆಗಳು ಬರಬಹುದು. ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ಮಾರಾಟ ಮಾಡುವವರ ವ್ಯವಹಾರದಲ್ಲಿ ಚೇತರಿಕೆಯನ್ನು ಕಾಣಬಹುದು.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ

ಕೃಷಿಕರಿಗೆ ಸರ್ಕಾರದಿಂದ ಸಹಾಯಧನದ ರೂಪದಲ್ಲಿ ಕೃಷಿ ಉಪಕರಣಗಳು ದೊರೆಯಬಹುದು. ಉದ್ಯೋಗ ಕ್ಷೇತ್ರದಲ್ಲಿರುವವರಿಗೆ ಒಂದು ಒಳ್ಳೆಯ ಸುದ್ದಿ ಕೇಳಿ ಬರುತ್ತದೆ. ಹಣಕಾಸಿನ ವ್ಯವಹಾರ ನಡೆಸುವವರಿಗೆ ಸ್ವಲ್ಪಮಟ್ಟಿನ ಹಿನ್ನಡೆ ಇರುತ್ತದೆ. ಸಾಂಪ್ರದಾಯಿಕ ಕೃಷಿಯನ್ನು ಮಾಡುವವರಿಗೆ ಹೆಚ್ಚಿನ ಬೇಡಿಕೆ ಬರುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಇಚ್ಛೆ ಇದ್ದರೂ ಅವಕಾಶ ದೊರೆಯುವುದು ಕಡಿಮೆ. ಮಹಿಳೆಯರಿಗೆ ಅವರ ವೃತ್ತಿ ಕ್ಷೇತ್ರದಲ್ಲಿ ಸಾಕಷ್ಟು ಸಹಕಾರ ದೊರೆಯುತ್ತದೆ. ಸಾಮಾಜಿಕ ಕ್ಷೇತ್ರದಲ್ಲಿ ಗೌರವಾದರಗಳು ದೊರೆಯುವ ಸಾಧ್ಯತೆ ಇದೆ. ಪ್ರಗತಿಯಲ್ಲಿರುವ ಮನೆ ಕೆಲಸಗಳಿಗೆ ಬೇಕಾದ ಹಣದ ಸಹಾಯ ದೊರೆಯುತ್ತದೆ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಸಾಕಷ್ಟು ಅಡೆತಡೆಗಳ ನಡುವೆಯೂ ಶುಭ ಕಾರ್ಯವೊಂದನ್ನು ಮಾಡಿ ಮುಗಿಸುವಿರಿ. ಔಷಧಿ ತಯಾರಕರಿಗೆ ಹೆಚ್ಚಿನ ತಯಾರಿಕಾ ಆದೇಶಗಳು ದೊರೆತು ಮುಂಗಡ ಹಣ ದೊರೆಯುತ್ತದೆ. ನ್ಯಾಯವಾದಿಗಳು ತಮ್ಮ ಕೋರ್ಟ್ ಕೇಸುಗಳಲ್ಲಿ ಯಶಸ್ಸನ್ನೂ ಕಾಣುವರು. ಉದ್ಯೋಗಿಗಳಿಗೆ ಅವರ ಉದ್ಯೋಗದಲ್ಲಿ ಅಭಿವೃದ್ಧಿಯಾಗಿ ಹೆಚ್ಚಿನ ಹಣ ದೊರೆಯುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹಿರಿಯರು ಬಂಧುಗಳ ಗೌರವಕ್ಕೆ ಪಾತ್ರರಾಗುವರು. ಮನರಂಜನಾ ಕಲೆಯನ್ನು ಪ್ರದರ್ಶಿಸುವವರಿಗೆ ಹೆಚ್ಚಿನ ಬೇಡಿಕೆ ಬರುತ್ತದೆ. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವವರ ಆದಾಯದಲ್ಲಿ ಏರಿಕೆ ಕಾಣಬಹುದು. ಒಂದು ನೂತನ ವ್ಯವಹಾರದಲ್ಲಿ ಹಣ ತೊಡಗಿಸುವ ಸಾಧ್ಯತೆಯಿದೆ. ಎಚ್ಚರದಿಂದ ಪರಿಶೀಲಿಸಿ ಹಣ ತೊಡಗಿಸಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಉದ್ಯೋಗದಲ್ಲಿರುವ ಮಹಿಳೆಯರು ಅವರ ನಡವಳಿಕೆಯಿಂದ ಟೀಕೆಗೊಳಗಾಗುವರು. ಅಧಿಕಾರಿಗಳ ಅಸಹಕಾರದಿಂದ ಕೆಲವು ಕೆಲಸಗಳಲ್ಲಿ ಹಿನ್ನಡೆಯನ್ನು ಕಾಣಬಹುದು. ಸರ್ಕಾರಿ ಉದ್ಯೋಗದಲ್ಲಿರುವವರು ವರ್ಗಾವಣೆಯನ್ನು ನಿರೀಕ್ಷಿಸಬಹುದು. ನಿಮ್ಮ ಕೆಲವು ಕೆಲಸಗಳಿಂದ ನೆರೆಹೊರೆಯವರ ವಿರೋಧ ಕಟ್ಟಿಕೊಳ್ಳುವಿರಿ. ಧನ ಆದಾಯವು ಉತ್ತಮವಾಗಿರುತ್ತದೆ.

ಪದಬಂಧ 2730



ಮೇಲಿನಿಂದ ಕೆಳಕ್ಕೆ

1. ಆಕಾರವಿಲ್ಲದ ಕೆಟ್ಟ ಆಕೃತಿ, ಪ್ರವೃತ್ತಿ 3
2. ಮುರಳಿಯ ಮಧುರ ನಾದ 3
3. ಉತ್ತಮ ಮಧ್ಯಮಗರಿಗಿಂತ ಕೆಳಗಿಳಿದವ 3
4. ಹೀಯಾಳಿಸು 3
7. ಕರಿ ಹಲಗೆಯ ಮೇಲೆ ಬರೆಯುವ ಸಾಧನ 3
9. ಬೆಳಕಿನಾಟದಲ್ಲಿ ಜೊತೆಯಲ್ಲೇ ಬರುವ ಛಾಯೆ 3
10. ಒಬ್ಬರಾದ ಮೇಲೆ ಇನ್ನೊಬ್ಬರಿಗೆ ಸಿಗುವ ಪಾಳಿಗೆ ಕಾಯಬೇಕು 3
11. ಸಿರಿಧಾನ್ಯಗಳಲ್ಲಿ ನವೀನವಾದದ್ದು 3
12. ಶಾಶ್ವತವಾಗಿ ಉಳಿಯುವ ಮರ 3
13. ಕಾನೂನಿನ ಜೊತೆಯಲ್ಲೇ ಬರುವ ನಿಯಮ 3
16. ರಸದೊಳಗಿರುವ ದಾನವ 3
18. ಹಾಡಿನಲ್ಲಿ ಪಲ್ಲವಿಯನಂತರದ ಪಾದ ತಲೆಕೆಳಗು 3
19. ಕಟ್ಟಡಕ್ಕೆ ಆಧಾರವಾಗಿರುವ ಅಡಿಪಾಯ 3
20. ಸೂರ್ಯ ತೊಟ್ಟಿರುವ ಕುಪ್ಪಸ 3
21. ಹೆಣ್ಣಿನ ಹಣೆಯಲ್ಲಿ ಶೋಭಿಸುವ ರಕ್ತವರ್ಣದ ಚೂರ್ಣ 3
22. ನಾಲ್ಕು ಪಟ್ಟು ಜಾಣ್ಮೆಯುಳ್ಳ ಕುಶಲಿ 3

ಎಡದಿಂದ ಬಲಕ್ಕೆ

1. ಇಡೀ ಪ್ರಪಂಚವನ್ನೆ ಬೆಚ್ಚಿಬೀಳಿಸುವ ಮಹಾ ಯುದ್ಧ 5
3. ಸಮಾಜದಲ್ಲಿ ಮೇಲು ಕೀಳೆಂಬ ಭಾವ 5
5. ಅಮೃತದಿಂದ ಕೂಡಿದ ಭೂಮಿ 3
6. ಅಮೂಲ್ಯ ಹರಳಿನಿಂದ ಕಂಗೊಳಿಸುವ ಹೊದಿಕೆ 5
8. ನಮ್ಮ ಗೃಹದ ಹೆಮ್ಮೆಯ ಪುತ್ರಿ 5
10. ಸಭಾಮಂದಿಯನ್ನು ನೋಡಿದಾಗ ಉಂಟಾಗುವ ನಡುಕ 5
12. ಮುಸುಕು ಹಾಕಿಕೊಂಡು ಕಣ್ಣೀರು ಸುರಿಸುವವ 5
14. ನವಸೀಮೆಯಲ್ಲಿ ಸಿಗುವ ಕ್ರಿಕೆಟ್ ಆಟಗಾರ ರಾಜನಾಗಿ ಸಿಗುತ್ತಾನೆ 3
15. ಪ್ರತಿನಿತ್ಯ ವಿಶೇಷವಾದ ಸಂಭ್ರಮ 5
17. ಈ ವಾದ್ಯ ಮೊಳಗಿದರೆ ಯುದ್ಧ ಸನ್ನದ್ಧ 5
19. ಸಂಸ್ಕೃತದಲ್ಲಿ ಮಂಗಳ ಗುರುವಾರಗಳ ನಡುವೆ ಬರುವ ದಿನ 5
21. ಬಣ್ಣಗಳಲ್ಲಿ ರಚಿತವಾಗುವ ಚಿತ್ರಕಾರರ ವಿಶ್ವ 5
23. ಮಕರ ಸಂಕ್ರಮಣದಂದು ದ್ರಾವಿಡರಿಗೆ ಕಾಣುವ ಮಹಾ ಬೆಳಕು 3
24. ಕಾಫಿಯ ಜೊತೆ ಬಿಸಿ ವಾರ್ತೆ ತರುವ ನಿತ್ಯ ಸುದ್ದಿವಾಹಿನಿ 5
25. ಅಂತರಾತ್ಮವೆಂಬ ದೇಗುಲ 5

ಪದಬಂಧ ಉತ್ತರ -2729

ಮೇಲಿಂದ ಕೆಳಕ್ಕೆ

1. ನಾನಾವಿಧ 2.ಭೂಮಂಡಲ 3.ಜಯವಿಹಾರ 4.ನಡೆಗೋಲು 5.ಸರಿತಾ 7.ವಡೆಸಾಂಬಾರು 9.ಗಡಿಕಲಹ 11.ಮನಸು 14.ಕಟ್ಟೆಹರಟೆ 15.ರುಪಾಯಿ 16.ಹಾಲುಸುಂಕ 18.ಗ್ರಹಮೈತ್ರಿ 19.ಣಗುಜ್ಹಾಲ

ಎಡದಿಂದ ಬಲಕ್ಕೆ

1. ನಾಗಭೂಷಣ 3.ಜನುಮದಿನ 5.ಸರವಿ 6.ಧವಲಗಿರಿ 8.ಹಾಡುಹಗಲು 10.ತಾಮರ 12.ಸಾಂಬ್ರಾಣಿ 13.ಭಿಕ್ಷುಕ 14.ಕಸುರು 16.ಹಾರುವತಟ್ಟೆ 17.ಪಾಣಿಗ್ರಹಣ 20.ಹವಾಯಿ 21.ಕಲ್ಲಿನಕೋಟೆ 22.ಧರಿತ್ರಿಪಾಲ



ಕಾಲುವೆಗಳಲ್ಲಿ ಗೊಂಡೋಲಾದಲ್ಲಿ ಕುಳಿತು ಸುತ್ತು ಹೊಡೆದರೆ ನಗರವೇ ತೇಲುತ್ತಾ ಜೊತೆಗೆ ಬಂದಂಥ ಅನುಭವ...

ನೀರದಾರಿಯಲ್ಲಿ ಗೊಂಡೋಲಾ ವಿಹಾರ



ನಿಟ್ಟುಸಿರ ಸೇತುವೆಯಡಿ ಗೊಂಡೋಲಾದಲ್ಲಿ ಪ್ರವಾಸಿಗರ ವಿಹಾರ

ಪ್ರವಾಸ

ಚಿತ್ರ ಲೇಖನ: ಕೆ.ಪಿ.ಸತ್ಯನಾರಾಯಣ

'ತೇಲುವ ನಗರ' ಎಂದೇ ಖ್ಯಾತವಾಗಿರುವ ವೆನಿಸ್‌ನ ನೀರಹೆದ್ದಾರಿಯಲ್ಲಿ ಗೊಂಡೋಲದಲ್ಲಿ ಕುಳಿತು ಅತ್ತಿತ್ತ ನೋಡಿದರೆ ಹೊಸ ಲೋಕವೊಂದು ಪ್ರತಿ ಕಣ್ಣೋಟದಲ್ಲೂ ಧರೆಗಿಳಿದಂತೆ ತೋಚುತ್ತದೆ...

ದ್ವೀಪ ನಗರ, ಕಾಲುವೆಗಳ ನಗರ, ತೇಲುವ ನಗರ ಎಂದೆಲ್ಲಾ ಕರೆಸಿಕೊಳ್ಳುವ, ಇಟಲಿ ದೇಶದ ವೆನಿಸ್ ನಗರ ಪ್ರವಾಸಿಗರ ನೆಚ್ಚಿನ, ಬಹು ರಮಣೀಯ ಸ್ಥಳಗಳಲ್ಲೊಂದು.

ಪೂರ್ವೋತ್ತರ ಇಟಲಿಯಲ್ಲಿರುವ ವೆನೆಝಿಯಾ ಮತ್ತು ವೆನೆಟೋ ಪ್ರಾಂತ್ಯಗಳ ರಾಜಧಾನಿಯಾದ ವೆನಿಸ್ ಒಂದು ಮುಖ್ಯ ಬಂದರು ನಗರಿ. ಇದು, ಒಂದು ಕಾಲದಲ್ಲಿ ಯೂರೋಪಿನ ಬಹು ಮುಖ್ಯ ಬಂದರು ಮತ್ತು ಏಷ್ಯಾ ಖಂಡದ ವಾಣಿಜ್ಯ ಮತ್ತು ಸಾಂಸ್ಕೃತಿಕ ಕೊಂಡಿಯಾಗಿತ್ತು. ಪ್ರಾಕೃತಿಕವಾಗಿ, ಚಾರಿತ್ರಿಕವಾಗಿ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದಲೂ ಅನನ್ಯವಾದ ದ್ವೀಪ ನಗರವಾದ ವೆನಿಸ್, ಉತ್ತರ ಅಡ್ರಿಯಾಟಿಕ್ ಸಮುದ್ರದ ದಂಡೆಯಲ್ಲಿರುವ ಪ್ರಾಚೀನ ಪ್ರವಾಸಿ ತಾಣ. ವಿಶ್ವದ ಪಾರಂಪರಿಕ ತಾಣವಾಗಿಯೂ ವೆನಿಸ್ ಗುರುತಿಸಲ್ಪಟ್ಟಿದೆ.

ಈ ನಗರದ ವಿಶೇಷವೆಂದರೆ ಇಲ್ಲಿ ಎಲ್ಲಾ ಸಾರಿಗೆಯೂ ನೀರ ಮೇಲೆಯೇ. ರಸ್ತೆ, ಇಲ್ಲವೇ ಇಲ್ಲ ಎನ್ನುವಷ್ಟು ವಿರಳ. ವೆನಿಸ್‌ನಲ್ಲಿರುವ ರೋಮ್ ಚೌಕದ ಪಾರ್ಕಿಂಗ್ ಸ್ಥಳವನ್ನು ಬಿಟ್ಟರೆ ನಗರದ ಉಳಿದ ಪ್ರದೇಶಗಳಲ್ಲಿ ವಾಹನಗಳಿಗೆ ಪ್ರವೇಶ ನಿಷಿದ್ಧ. ಇಡೀ ವೆನಿಸ್ ನಗರವನ್ನು ಪಾದಚಾರಿ ಮಾರ್ಗದ ಮೂಲಕ ನಡೆಯುತ್ತಾ ಸುತ್ತಿ ಬರಬಹುದು. ಅಲ್ಲಲ್ಲಿ ಸಿಗುವ ಕಿರು ಸೇತುವೆಗಳ ಮೂಲಕ 200ಕ್ಕೂ ಹೆಚ್ಚು ಕಾಲುವೆಗಳ ಒಂದು ಬದಿಯಿಂದ ಮತ್ತೊಂದು ಬದಿಗೆ ದಾಟಬಹುದು. ಈ ಎಲ್ಲಾ ನೀರಗಾಲುವೆಗಳನ್ನು ಇಂಗ್ಲಿಷಿನ ಎಸ್ ಅಕ್ಷರದ ಆಕಾರದಲ್ಲಿರುವ, 100-200 ಅಡಿ ಅಗಲವಿರುವ ಗ್ರ್ಯಾಂಡ್ ಕಾಲುವೆಯೊಡನೆ ಜೋಡಿಸಿ ನಗರದ ನಡುವೆ ಸಂಪರ್ಕ ಕಲ್ಪಿಸಲಾಗಿದೆ. ಈ ಗ್ರ್ಯಾಂಡ್ ಕಾಲುವೆ ಸುಮಾರು 3 ಕಿಲೋ ಮೀಟರ್ ಉದ್ದವಿದ್ದು ರೈಲು ನಿಲ್ದಾಣದಿಂದ ಡೋಗ್ಸ್ ಅರಮನೆಯವರೆಗೆ ಸಾಗುತ್ತದೆ.

ಹಳೆಯ ಕಾಲದ ಅಮೃತಶಿಲೆಯ ಕೆಲವು ಸೇತುವೆಗಳನ್ನು ಮಾತ್ರ ಉಳಿಸಿಕೊಂಡು ಹೆಚ್ಚಿನ ಸೇತುವೆಗಳನ್ನು 19ನೇ ಶತಮಾನದಲ್ಲಿ ಮರು ನಿರ್ಮಿಸಲಾಗಿದೆ. ಮುಖ್ಯವಾದ ಸೇತುವೆಗಳಲ್ಲಿ ಅತಿ ಪುರಾತನವಾದದ್ದು ಆಂಟೋನಿಯೊ ಡ ಪಾಂಟ್ ಎಂಬಾತ 1590ರಲ್ಲಿ ವಿನ್ಯಾಸಗೊಳಿಸಿದ ರಿಯಾಲ್ಟೊ ಸೇತುವೆ. ಇದರ ನಂತರದ ಆಕರ್ಷಣೆ 1930ರ ಸುಮಾರಿಗೆ ನಿರ್ಮಿತವಾದ ಅಕಾಡೆಮಿಯಾ ಸೇತುವೆ ಮತ್ತು ರೈಲು ನಿಲ್ದಾಣದ ಬಳಿಯಿರುವ ಸ್ಕಾಲ್ಜಿ ಸೇತುವೆ. 2008ರಲ್ಲಿ ನಿರ್ಮಾಣವಾದ ಕಾನ್ಸ್ಟಿಟ್ಯೂಷನ್ ಸೇತುವೆ ಇತ್ತೀಚಿನದು.

ನಿಟ್ಟುಸಿರ ಸೇತುವೆ ಎಂಬ ವಿಶೇಷ ಸೇತುವೆಯೊಂದು ಕೂಡಾ ಇಲ್ಲಿದೆ. 1600ರಲ್ಲಿ ಸುಣ್ಣದ ಕಲ್ಲಿನಲ್ಲಿ ನಿರ್ಮಿಸಲಾದ ಈ ಸೇತುವೆ ಡೊಗ್ಸ್ ಅರಮನೆಯ ವಿಚಾರಣಾ ಕೊಠಡಿಯನ್ನು ಸೆರೆಮನೆಗೆ ಸಂಪರ್ಕಿಸುತ್ತದೆ. ಕೈದಿಗಳು ಈ ಸೇತುವೆಯ ಕಿಂಡಿಗಳ ಮೂಲಕ ಕೊನೆಯದಾಗಿ ವೆನಿಸ್ ನಗರದ ನೋಟವನ್ನು ಕಣ್ತುಂಬಿಕೊಳ್ಳುತ್ತಾ ನಿಟ್ಟುಸಿರು ಬಿಡುತ್ತಿದ್ದರೆಂಬ ಕಾರಣಕ್ಕೆ ಈ ಸೇತುವೆಗೆ 'ದಿ ಬ್ರಿಡ್ಜ್ ಆಫ್ ಸೈಸ್' ಎಂಬ ಹೆಸರು ಬಂದಿದೆ.

ಊರ ತುಂಬಾ ಹರಡಿರುವ ಕಾಲುವೆಗಳಲ್ಲಿ ಬಗೆ ಬಗೆಯ ಮೋಟಾರ್ ಚಾಲಿತ ದೋಣಿಗಳನ್ನು ಕಾಣಬಹುದು. ಮುನಿಸಿಪಾಲಿಟಿ ನಿರ್ವಹಿಸುವ ಸಾರ್ವಜನಿಕ ಸಾರಿಗೆ, ಆಂಬುಲೆನ್ಸ್, ಪೊಲೀಸ್, ಕಸ ವಿಲೇವಾರಿ ಮುಂತಾದ ವಿಶೇಷ ರೀತಿಯ ಸೇವೆಗಳಿಗಾಗಿ ಇರುವ ದೋಣಿಗಳಲ್ಲದೆ, ಪ್ರವಾಸಿಗರ ನಗರ ದರ್ಶನಕ್ಕಾಗಿ ಇರುವ ಖಾಸಗಿ ಬೋಟ್ ಟ್ಯಾಕ್ಸಿಗಳು, ಹಣ್ಣು, ತರಕಾರಿ ಮತ್ತಿತರೆ ಸರಕುಗಳ ಸಾಗಾಣಿಕೆಯ ದೋಣಿಗಳೂ ಈ ನೀರ ಕಾಲುವೆಗಳಲ್ಲಿಯೇ ಸಾಗಬೇಕು.

ವೆನಿಸ್ ನಗರದಲ್ಲಿ ಪ್ರವಾಸಿಗರಿಗಾಗಿ ಇರುವ ಜನಪ್ರಿಯ ಜಲ ಸಾರಿಗೆ ಎಂದರೆ ಅದು 'ಗೊಂಡೋಲಾ'. ಮೋಟಾರ್ ಬೋಟ್‌ಗಳ ಕಾಲದಲ್ಲೂ ಗೊಂಡೋಲಾಗಳ ಜನಪ್ರಿಯತೆ ಕುಗ್ಗಿಲ್ಲ. ಇಂದಿಗೂ ಸುಮಾರು 350 ಗೊಂಡೋಲಾಗಳು ವೆನಿಸ್‌ನ ಜಲಮಾರ್ಗಗಳಲ್ಲಿ ಪ್ರವಾಸಿಗರ ವಿಹಾರಕ್ಕಾಗಿ ಸಂಚರಿಸುತ್ತಿವೆ. 600 ಕಿಲೊ ತೂಗುವ ಇವುಗಳ 11ಮೀಟರಿನಷ್ಟು ಉದ್ದದ ನೀಳ ಆಕಾರ, ಕಪ್ಪು ಬಣ್ಣ ಬಳಿದ ಹೊರಮೈ, ಮುಂಬದಿ ಮತ್ತು ಹಿಂಬದಿಯ ವಿಶಿಷ್ಟ ಅಲಂಕಾರಿಕ ರಚನೆ, ಆ ದೋಣಿಗಳನ್ನು ನಡೆಸುವವರ ಹಾವಭಾವ ಇವೆಲ್ಲಾ ಪ್ರವಾಸಿಗರನ್ನು ಸೆಳೆಯುವಲ್ಲಿ ಸಫಲವಾಗಿವೆ. ಒಂದೇ ಹುಟ್ಟು, ಅಂದರೆ ಉದ್ದನೆಯ ಗಳುವಿನ ಸಹಾಯದಿಂದ ಗೊಂಡೋಲಾ ನಡೆಸುವುದನ್ನು ನೋಡುವುದೇ ಒಂದು ಸೊಗಸು. ಗೊಂಡೋಲಾ ನಡೆಸುವ 400ಕ್ಕೂ ಹೆಚ್ಚು ಮಂದಿ ಜನರು ಜೀವನೋಪಾಯಕ್ಕಾಗಿ ಇದನ್ನೇ ಅವಲಂಬಿಸಿದ್ದಾರೆ. ಗೊಂಡೋಲಾ ನಡೆಸುವ ತರಬೇತಿ ನೀಡುವುದಕ್ಕಾಗಿಯೇ ಸಂಸ್ಥೆಯೊಂದಿದೆ. ಇಲ್ಲಿ ವರ್ಷಕ್ಕೆ ನಲವತ್ತು ಜನರಿಗೆ ಮಾತ್ರ ಗೊಂಡೋಲಾ ನಡೆಸುವ ತರಬೇತಿ ನೀಡಲಾಗುತ್ತದೆ. ಪುರುಷರ ಪ್ರಾಬಲ್ಯವಿರುವ ಈ ಕ್ಷೇತ್ರದಲ್ಲಿ ಗೊಂಡೋಲಾ ನಡೆಸುವ ಏಕೈಕ ಹೆಣ್ಣುಮಗಳೆಂದರೆ 'ಬೋಸ್ಕೋಲೊ' ಎಂಬಾಕೆ ಮಾತ್ರ.

ವೆನಿಸ್ ನಗರದ ಒಂದು ದಿನದ ಪ್ರವಾಸದಲ್ಲಿ ಸೇಂಟ್ ಮಾರ್ಕ್ಸ್ ಚರ್ಚ್, ಡೊಗ್ಸ್ ಅರಮನೆ ಮತ್ತು ಕಿರುದೋಣಿಯ ಸವಾರಿ ಇವೆಲ್ಲವನ್ನೂ ಆನಂದಿಸಬಹುದಾಗಿದೆ. ಅಮೃತಶಿಲೆಯಿಂದ ನಿರ್ಮಿಸಲಾದ ಗೋಥಿಕ್ ಶೈಲಿಯ ಪುರಾತನ ಅರಮನೆ ಮತ್ತು ಚರ್ಚುಗಳ ಗೋಡೆಗಳನ್ನು ಬೃಹತ್ ವರ್ಣಚಿತ್ರಗಳಿಂದ ವಿಶೇಷವಾಗಿ ಅಲಂಕರಿಸಲಾಗಿದೆ.


ಪಾರ್ಕಿಂಗ್ ಪ್ರದೇಶದಲ್ಲಿ ನಮ್ಮ ವಾಹನವನ್ನು ನಿಲ್ಲಿಸಿ ಬಂದರಿನ ಸಮುದ್ರ ದಂಡೆಗೆ ಬಂದರೆ ಅಲ್ಲಿ ನಾನಾ ರೀತಿಯ ದೋಣಿಗಳು, ಹಡಗುಗಳು, ಐಷಾರಾಮಿ ಕ್ರೂಸ್‌ಗಳು ನಿಂತಿರುವುದನ್ನು ಕಾಣಬಹುದು. ಇಲ್ಲಿಂದ ಮೋಟಾರ್ ಬೋಟಿನಲ್ಲಿ ಕುಳಿತು ಗೊಂಡೋಲಾ ವಿಹಾರದ ಕಟ್ಟೆಯ ಬಳಿಗೆ ಸಾಗಬೇಕು. ಗೊಂಡೋಲಾದ ಅರ್ಧ/ ಮುಕ್ಕಾಲು ಘಂಟೆಗಳ ಸವಾರಿಯಲ್ಲಿ ಗ್ರ್ಯಾಂಡ್ ಕಾಲುವೆ ಮತ್ತು ಕಿರಿದಾದ ಕೆಲವು ಕಾಲುವೆಗಳ ಮೂಲಕ ಸಾಗುತ್ತಾ ಅಕ್ಕಪಕ್ಕದ ನೋಟವನ್ನು ಸವಿಯಬಹುದಾಗಿದೆ.

ಗೊಂಡೋಲಾ ಸವಾರಿಯ ನಂತರ ಕಾಲುವೆಯ ಬದಿಯಲ್ಲಿ ಸಾಗುವ ಓಣಿಗಳಲ್ಲಿ ನಡೆಯುತ್ತಾ ಶಾಪಿಂಗ್ ಮಾಡಲೂ ಅವಕಾಶವಿದೆ. ವೆನಿಸ್ಸಿನ ಪಾರಂಪರಿಕ ಕೈಗಾರಿಕೆ- ಗಾಜಿನ ಕಲಾಕೃತಿಗಳ ತಯಾರಿಕೆ. ಆದರೆ ಇತ್ತೀಚೆಗೆ ಪ್ರವಾಸಿಗರು ಸ್ಮರಣಿಕೆಯಾಗಿ ಕೊಂಡೊಯ್ಯಬಲ್ಲ ಸಣ್ಣ ಸಣ್ಣ ವಸ್ತುಗಳಿಗಷ್ಟೇ ಸೀಮಿತವಾಗಿದೆಯೆಂದು ಹೇಳಲಾಗುತ್ತದೆ. ವಾಯು ಮಾಲಿನ್ಯದ ದೆಸೆಯಿಂದಾಗಿ ಅಮೂಲ್ಯ ವಾಸ್ತುವುಳ್ಳ ಕಟ್ಟಡಗಳು ಹಾಳಾಗುವುದನ್ನು ಗಮನಿಸಿ ಗಾಜಿನ ಕೈಗಾರಿಕೆಗಳನ್ನು ಸನಿಹದ ಮುರಾನೋ ದ್ವೀಪಕ್ಕೆ ಸ್ಥಳಾಂತರಿಸಲಾಯಿತು. ಇದಲ್ಲದೆ ಲೇಸುಗಳ ತಯಾರಿಕೆ, ಬಟ್ಟೆಗಳು ಮತ್ತು ಪೀಠೋಪಕರಣಗಳ ತಯಾರಿಕೆಯ ಕಾರ್ಖಾನೆಗಳು ವೆನಿಸ್‌ನಲ್ಲಿವೆ. ಮೂರು ಶತಮಾನಗಳಿಂದೀಚೆಗೆ ಪ್ರವಾಸೋದ್ಯಮವೇ ವೆನಿಸ್‌ನ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಇಲ್ಲಿನ ಹೆಚ್ಚಿನ ಜನರು ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟ ಉದ್ಯೋಗಗಳಲ್ಲಿಯೇ ತೊಡಗಿಸಿಕೊಳ್ಳುವುದು ಸಾಮಾನ್ಯ. 1980ರಿಂದೀಚೆಗೆ ನಾಡಹಬ್ಬದ ರೀತಿಯಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಕಲೆ, ಸಿನಿಮಾ, ನೃತ್ಯ ಮತ್ತು ರಂಗ ಚಟುವಟಿಕೆಗಳು ಪ್ರಪಂಚದಾದ್ಯಂತ ಇರುವ ಕಲಾರಸಿಕರನ್ನು ವೆನಿಸ್‌ಗೆ ಸೆಳೆದು ತರುತ್ತವೆ. ಪ್ರತಿವರ್ಷ ಇಲ್ಲಿ ನಡೆಯುವ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ವಿಶೇಷವಾಗಿ ಉಲ್ಲೇಖನೀಯ.

ಕಾಲುವೆ ನೀರಿನಲ್ಲಿ ಪ್ರತಿಬಿಂಬಿತವಾಗಿರುವ ಅರಮನೆಗಳು, ಗಂಟೆಗೋಪುರಗಳು, ಬೃಹತ್ ಗೋಳಾಕಾರದ ಚಾವಣಿಗಳು ಇವೆಲ್ಲವನ್ನು ನೋಡುತ್ತಿದ್ದರೆ ಹೊಸ ಲೋಕವೊಂದಕ್ಕೆ ಹೋದ ಅನುಭವವಾಗುತ್ತದೆ. ❖



ಕಾಲುವೆಗಳಲ್ಲಿ ಗೊಂಡೋಲಾ ಟ್ರಾಫಿಕ್ ಜಾಮ್!



ಗ್ರ್ಯಾಂಡ್ ಕಾಲುವೆಯಲ್ಲಿ ಸಾಗುವಾಗ ಕಂಡ ಸಂತ ಮಾರಿಯಾ ಚರ್ಚ್

ಒಂದು ಜೀವ, ಹಲವು ರೂಪ

8ನೇ ಪುಟದಿಂದ...

ಅನಕೊಂಡ ಕಚ್ಚಿದ ಪ್ರಸಂಗ

ಸದಾ ಸುದ್ದಿಯಲ್ಲಿರಲು ವಾರ್ನ್ ಏನು ಬೇಕಾದರೂ ಮಾಡಲು ಸಿದ್ಧರಾಗಿರುತ್ತಿದ್ದರು. ಜನಪ್ರಿಯ ರಿಯಾಲಿಟಿ ಶೋ 'ದ ಸೆಲಿಬ್ರಿಟಿ'ಯಲ್ಲಿಯೂ ಅವರು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅತ್ಯಂತ ಕಠಿಣ ಟಾಸ್ಕ್ ಆಗಿದ್ದ ದಕ್ಷಿಣ ಆಫ್ರಿಕಾದ ದಟ್ಟಾರಣ್ಯದಲ್ಲಿ ಬಿಡಾರ ಹೂಡಬೇಕಾದ ಎಪಿಸೋಡ್‌ನಲ್ಲಿ ಅವರಿದ್ದರು. ಅಲ್ಲಿ ಹಾವುಗಳು ತುಂಬಿದ್ದ ಕೊಳದಲ್ಲಿ ಅವರು ನಿಂತಾಗ ಅನಕೊಂಡ ಹಾವೊಂದು ಅವರ ತಲೆಗೆ ಕಚ್ಚಿತ್ತು. ಆದರೆ, ವಿಷಕಾರಿಯಲ್ಲದ ಕಾರಣ ಅವರಿಗೆ ಯಾವುದೇ ಅಪಾಯವಾಗಿರಲಿಲ್ಲ.

ಡಿಸ್ಟಿಲರಿ ಮತ್ತು ಸ್ಯಾನಿಟೈಸರ್

ಶೇನ್ ಕ್ರಿಕೆಟ್‌ನಷ್ಟೇ ವ್ಯಾಪಾರ ವಹಿವಾಟಿನಲ್ಲಿಯೂ ಚಾಣಾಕ್ಷರಾಗಿದ್ದರು. ಅವರು ತಮ್ಮದೇ ಸ್ವಂತ ಡಿಸ್ಟಿಲರಿ ಹೊಂದಿದ್ದರು. ಅದರಲ್ಲಿ ತಯಾರಾಗುತ್ತಿದ್ದ ಜಿನ್‌ಗೆ ಉತ್ತಮ ಬೇಡಿಕೆ ಇತ್ತು. 2020ರಲ್ಲಿ ಕೊರೊನಾ ಹಾವಳಿ ಆರಂಭವಾದಾಗ, ಆ ಡಿಸ್ಟಿಲೆರಿಯಲ್ಲಿ ಜಿನ್ ತಯಾರಿಕೆ ನಿಲ್ಲಿಸಿದರು. ಬದಲಿಗೆ ಸ್ಯಾನಿಟೈಸರ್ ಉತ್ಪಾದಿಸಲು ಆರಂಭಿಸಿದರು.

ದೇಹತೂಕ ಮತ್ತು ಉದ್ದೀಪನ ಮದ್ದು

ಕ್ರಿಕೆಟ್ ಆಟಗಾರನಾಗಿದ್ದರೂ ಕಠಿಣ ಫಿಟ್‌ನೆಸ್ ಕ್ರಮಗಳನ್ನು ಅವರು ಪಾಲಿಸುತ್ತಿರಲಿಲ್ಲ. ಕಠಿಣ ವ್ಯಾಯಾಮಗಳು, ಐಸ್ ಬಾತ್ ಮತ್ತು ಕ್ರೀಡಾವಿಜ್ಞಾನದ ಬಗ್ಗೆ ಅವರಿಗೆ ರೇಜಿಗೆ ಇತ್ತು. ತಿಂಡಿಪೋತರಾಗಿದ್ದ ವಾರ್ನ್‌ಗೆ ಸಿಗರೇಟ್ ಮತ್ತು ಬಿಯರ್ ಎಂದರೆ ಅಚ್ಚುಮೆಚ್ಚು. ದಿನವೊಂದಕ್ಕೆ 40 ಸಿಗರೇಟ್ ಸೇದುತ್ತಿದ್ದರಂತೆ. ಪಿಂಟ್ ಬಿಯರ್ ಕುಡಿಯುತ್ತಿದ್ದರು. ಇದರಿಂದಾಗಿ ಅವರ ದೇಹತೂಕ ಹೆಚ್ಚಿತ್ತು. ಅದನ್ನು ಇಳಿಸಲು ಉದ್ದೀಪನ ಮದ್ದುಗಳ ಮೊರೆ ಕೂಡ ಹೋಗಿದ್ದರು.

2003ರ ವಿಶ್ವಕಪ್ ಟೂರ್ನಿ ಸಂದರ್ಭದಲ್ಲಿ ಅವರು ಡುರೆಟಿಕ್ಸ್ ಮದ್ದು ಸೇವನೆ ಮಾಡಿ ಸಿಕ್ಕಿಬಿದ್ದಿದ್ದರು. ಇದರಿಂದಾಗಿ ವಿಶ್ವಕಪ್ ಆಡುವ ಅವಕಾಶವನ್ನು ಕಳೆದುಕೊಂಡಿದ್ದರು. ದೇಹ ತೂಕ ಇಳಿಸಲು ಇದನ್ನು ತೆಗೆದುಕೊಂಡಿದ್ದಾಗಿ ಒಪ್ಪಿಕೊಂಡಿದ್ದರು. ಕೆಲ ತಿಂಗಳುಗಳ ಹಿಂದೆ ಬೇರಿಯಾಟ್ರಿಕ್ಸ್ ಚಿಕಿತ್ಸೆ ಕೂಡ ಪಡೆದಿದ್ದರಂತೆ. ಅವರು ನಿಧನರಾಗುವ ಮುನ್ನ 14 ದಿನಗಳ ಜಲಾಹಾರ ಚಿಕಿತ್ಸೆ ಪಡೆದಿದ್ದರು. ಆಹಾರ ಸೇವನೆ ಮಾಡದೆ ಬರೀ ದ್ರವಾಹಾರ ಸೇವಿಸುತ್ತಿದ್ದರು ಎಂದೂ ವರದಿಯಾಗಿತ್ತು. ಏನೇ ಇರಲಿ, ಅವರ ನಿರ್ಗಮನದಿಂದ ಕ್ರೀಡೆಯ ವರ್ಣರಂಜಿತ ಅಧ್ಯಾಯವೊಂದಕ್ಕೆ ತೆರೆ ಬಿದ್ದಂತಾಗಿದೆ. ❖

ವಿಷಾದದ ನಿಟ್ಟುಸಿರು ಹೊರಡಿಸುವ ಜೋಗಪ್ಪ

ಎಚ್.ದಂಡಪ್ಪ

ಕುಂ.ವೀ. ಅವರ 'ಎಲ್ಲೋ ಜೋಗಪ್ಪ ನಿನ್ನರಮನೆ', ಅವರ ಹಿಂದಿನ ಕಾದಂಬರಿ 'ಅರಮನೆ'ಯ ಮುಂದುವರಿದ ಭಾಗವಾಗಿ ಓದಿಕೊಳ್ಳಬಹುದು. ಅದು ವಸಾಹತುಪೂರ್ವದ ಕಥನವಾಗಿದ್ದರೆ, ಇದು ವಸಾಹತ್ತೋತ್ತರ ಕಾಲಘಟ್ಟದ ಸ್ಥಿತ್ಯಂತರಗಳನ್ನು ಹಿಡಿದಿಟ್ಟಿದೆ.

'ಅರಮನೆ' ಕಾದಂಬರಿಯು ವಸಾಹತುಶಾಹಿಯ ಕಾಲಘಟ್ಟದ ಚರಿತ್ರೆಯೊಂದಿಗೆ ಸಾಂಸ್ಕೃತಿಕ ಪರಿಸರವನ್ನು ಚಿತ್ರಿಸುತ್ತಾ, ಗ್ರಾಮೀಣ ಸಮಾಜದ ಊಳಿಗಮಾನ್ಯ ವ್ಯವಸ್ಥೆಯ ಕ್ರೌರ್ಯದ ವಿವಿಧ ಮುಖಗಳನ್ನ ಅನಾವರಣಗೊಳಿಸುತ್ತಾ ಮಾನವೀಯ ಸಂಬಂಧಗಳ ಸ್ವರೂಪವನ್ನು ಹಿಡಿದಿಟ್ಟಿದೆ. ಪ್ರಸ್ತುತ 'ಎಲ್ಲೋ ಜೋಗಪ್ಪ ನಿನ್ನರಮನೆ' ಕಾದಂಬರಿಯಲ್ಲಿ ವಸಾಹತೋತ್ತರ ಕಾಲಘಟ್ಟದ ಗ್ರಾಮೀಣ ಮತ್ತು ನಗರಜೀವನ, ಪ್ರಜಾಪ್ರಭುತ್ವದ ವ್ಯವಸ್ಥೆ, ಅಧಿಕಾರಶಾಹಿ, ರಾಜಕೀಯ ನಾಯಕರ ಮನಃಸ್ಥಿತಿ, ಸ್ವಾರ್ಥಲಾಲಸೆ, ಹಣ ಮತ್ತು ಅಧಿಕಾರ ವ್ಯಾಮೋಹ, ಅದಕ್ಕೆ ಜನತೆಯ ಪ್ರತಿಕ್ರಿಯೆ, ಸಾಮಾನ್ಯ ಜನರ ತವಕ-ತಲ್ಲಣ ಇತ್ಯಾದಿ ಸ್ವರೂಪವನ್ನು ಶೋಧಿಸಲಾಗಿದೆ.

ಈ ಕಾದಂಬರಿಯಲ್ಲಿ ಬರುವ 'ಬಡೇಲಡುಕು' ಮತ್ತು 'ಜರುಮಲೆ' ಭಾರತದ ಗ್ರಾಮಗಳು ಮತ್ತು ಅಧಿಕಾರ ಕೇಂದ್ರಗಳು ನಗರಗಳನ್ನು ಸಂಕೇತಿಸುತ್ತವೆ. ಹಳ್ಳಿಗಳ ಜನರ ಜೀವನಕ್ಕೂ ನಗರಗಳ ಜನಜೀವನಕ್ಕೂ ವ್ಯತ್ಯಾಸಗಳಿವೆ. ನಗರದಲ್ಲಿರುವ ಸೌಕರ್ಯಗಳು ಹಳ್ಳಿಯಲ್ಲಿಲ್ಲ. ಹಳ್ಳಿಗಳಲ್ಲೂ ಸೌಕರ್ಯಗಳು ಸಿಗಬೇಕು. ಹಾಗಾದಾಗ ಸಮಾನತೆಯ ಅವಕಾಶಗಳನ್ನು ಒದಗಿಸಿಕೊಟ್ಟಂತಾಗುತ್ತದೆ. ಆದರೆ, ಅದು ಈ ವ್ಯವಸ್ಥೆಯಲ್ಲಿ ಸಾಧ್ಯವಾಗುತ್ತಿಲ್ಲ. ಈಗಿನ ರಾಜಕೀಯ ನಾಯಕರು ಯಥಾಸ್ಥಿತಿಯನ್ನು ಬಯಸುವ ಮನಃಸ್ಥಿತಿಯವರು.

ಪೊಳ್ಳು ಆಶ್ವಾಸನೆಗಳನ್ನು ನೀಡುತ್ತಾ ಅಧಿಕಾರದ ಗದ್ದುಗೆಗಳನ್ನು ಏರುತ್ತಾ ಅವರು ತಮ್ಮ ಸುಖ, ಸಂತೋಷ, ಐಷಾರಾಮಿ ಬದುಕನ್ನು ಸಾಗಿಸಬೇಕು.



ಎಲ್ಲೋ ಜೋಗಪ್ಪ ನಿನ್ನರಮನೆ
ಲೇ: ಕುಂ. ವೀರಭದ್ರಪ್ಪ
ಪ್ರ: ತನುಮನು ಪ್ರಕಾಶನ, ಮೈಸೂರು
ಸಂ: 9448056562
ಪು: 468 ₹500

ಅವರು ಒಂದು ರೀತಿಯಲ್ಲಿ ಹಿಂದಿನ ರಾಜರಿದ್ದಂತೆ. ಊಳಿಗಮಾನ್ಯ ವ್ಯವಸ್ಥೆಯ ಇನ್ನೊಂದು ಪ್ರತಿರೂಪ ಈಗಿನ ರಾಜಕೀಯ ಮತ್ತು ಸರ್ಕಾರದ ಆಡಳಿತ ವ್ಯವಸ್ಥೆ ಎಂಬುದನ್ನು ಕಾದಂಬರಿಯಲ್ಲಿನ ಘಟನೆಗಳು, ಪಾತ್ರಗಳು ಸಾಂಕೇತಿಕವಾಗಿ ಬಯಲು ಮಾಡುತ್ತಾ ಹೋಗುತ್ತವೆ.

ಗ್ರಾಮಗಳ ಸಾಂಸ್ಕೃತಿಕ ಬದುಕಿನ ವಿವರಗಳನ್ನು 'ಬಡೇಲಡುಕು' ಗ್ರಾಮ ಸೂಚಿಸಿದರೆ, 'ಜರುಮಲೆ' ಈಗಿನ ನಗರಗಳ ರಾಜಕೀಯ ನೇತಾರರ ಅಧಿಕಾರ ಚುಕ್ಕಾಣಿ ಹಿಡಿದಿರುವವರ ನೌಕರಶಾಹಿಯ ಅಂದರೆ ಶಾಸಕಾಂಗ ಮತ್ತು ಕಾರ್ಯಾಂಗದ ಸಂಕೇತವಾಗಿದೆ. ದೇಶದ ಅಭಿವೃದ್ಧಿಯನ್ನು ಮರೆತು ಇವರು ಸ್ವಾರ್ಥ ಸಾಧನೆಯಲ್ಲಿ ಸಾಗುತ್ತಿರುವ ವಿವಿಧ ಮುಖಗಳನ್ನು ದಾಖಲಿಸುತ್ತಾ ಸಾಗುವ ಕಾದಂಬರಿಯು ಸಾಗುತ್ತಾ ಈಗಿನ ಕರಾಳ ವ್ಯವಸ್ಥೆಯನ್ನು ಬಯಲು ಮಾಡುತ್ತದೆ.

ಬಡೇಲಡುಕು ಗ್ರಾಮದ ಸಾಂಸ್ಕೃತಿಕ ಪರಿಸರವನ್ನು ಕಟ್ಟಿಕೊಡುತ್ತಾ ಪ್ರಾರಂಭವಾಗುವ ಕಾದಂಬರಿ ಇಲ್ಲಿನ ಪಾತ್ರಗಳ ಜೊತೆಗೆ ಜರುಮಲೆಗೆ ಸ್ಥಳಾಂತರವಾಗುತ್ತದೆ. ಇಲ್ಲಿ ನಡೆಯುವ ಘಟನೆಗಳು ಸಮಕಾಲೀನ ಪರಿಸ್ಥಿತಿಯನ್ನು ಅನಾವರಣಗೊಳಿಸುತ್ತವೆ. ಪುರಾತನಲು, ನರಸನಾಯಕ, ಮುಕುಡೆಪ್ಪನಾಯಕ ಅರಮನೆ ನೋಡಲೆಂದು ಬಂದರೆ ಅವರಿಗೆ ನಗರ ಜಗತ್ತು ವಿಚಿತ್ರವಾಗಿ ಕಾಣುವುದರ ಜೊತೆಗೆ ಭಯಾನಕವಾಗಿಯೂ ತೋರುತ್ತದೆ. ಅಲ್ಲಿ ನಡೆಯುವ ಕೋಮು ಗಲಭೆಗಳ ಹಿಂದಿರುವ ಹುನ್ನಾರಗಳು, ಅದು ಬೆಳೆಯುತ್ತಾ ಹೋಗುವ ಬಗೆ, ಅದರಿಂದುಂಟಾಗುವ ಸಮಸ್ಯೆ, ಮಾನವೀಯತೆಯ ನಾಶ, ನಿರಪರಾಧಿಗಳನ್ನು ಅಪರಾಧಿಗಳನ್ನಾಗಿ ಕಾಣುವ ಬಗೆ, ಗಲಭೆಗಳಿಂದ ಬೇಳೆ ಬೇಯಿಸಿಕೊಳ್ಳುವವರ ಮುಖವಾಡ ಬಯಲಾಗುವ ಪರಿ, ಇತ್ಯಾದಿಗಳನ್ನು ಒಳಗೊಂಡಂತೆ ಕೋಮು ಸಾಮರಸ್ಯದ ಆಶಯಗಳನ್ನು ತನ್ನ ಒಡಲಲ್ಲಿ ಧ್ವನಿಪೂರ್ಣವಾಗಿ ಹುದುಗಿರಿಸಿಕೊಂಡಿದೆ. ಮಾಬು, ಸುಲೇಮಾನ್ ಈ ಸಾಮರಸ್ಯದ ಕೊಂಡಿಗಳಾಗಿದ್ದಾರೆ.

'ಅರಮನೆ, ಕೇವಲ ಮಣ್ಣು, ಗಾರೆ, ಕಲ್ಲುಗಳ ಕಟ್ಟಡವಲ್ಲ. ಅದೊಂದು ಮಾಂತ್ರಿಕ ಸದೃಶ ರೂಪಕ' ಎಂದು ಕಾದಂಬರಿಯಲ್ಲಿ ಬರುವ ಮಾತೇ ಇದು ಅಧಿಕಾರದ ಕೇಂದ್ರಸ್ಥಾನವಾಗಿದ್ದು ಪ್ರಜೆಗಳ, ಬಡವರ, ಜನಸಾಮಾನ್ಯರ, ಎಲ್ಲಾ ವರ್ಗದವರ ಸ್ಥಿತಿಗತಿಗಳನ್ನು ನಿರ್ಧರಿಸುವ ಕೇಂದ್ರ ಎಂಬುದು ಸ್ಪಷ್ಟವಾಗುತ್ತದೆ. ಆರ್ಥಿಕ ಸ್ಥಿತಿಗತಿಗಳಂತೂ ನಿರ್ಧಾರವಾಗುವುದು ಇಲ್ಲಿಯೇ. ಆದ್ದರಿಂದ ರಾಜಕೀಯ ವ್ಯಕ್ತಿಗಳು ಅಸಾಮಾನ್ಯರಾಗಿ ಕಾಣುತ್ತಾರೆ. ಪ್ರಧಾನಿ, ಮುಖ್ಯಮಂತ್ರಿಗಳು, ಮಂತ್ರಿಗಳು, ಶಾಸಕರು, ಗ್ರಾಮ ಪಂಚಾಯತಿ ಸದಸ್ಯ, ಅಧ್ಯಕ್ಷರವರೆಗೆ ದೇಶದ ಪ್ರಗತಿಗೆ ಬೇಕಾದ ನೀತಿ ನಿಯಮಗಳನ್ನು ರೂಪಿಸುವ ಜವಾಬ್ದಾರಿಯನ್ನು ಸ್ವಾರ್ಥಸಾಧನೆ ಮಾಡಿಕೊಳ್ಳುವ ಬಗೆಗಿನ ಚಿತ್ರಣ ಇಲ್ಲಿದೆ. ಇವರ ವಿರುದ್ಧ ಪ್ರತಿಭಟನೆ ಮಾಡಿದವರನ್ನು ನಕ್ಸಲರೆಂದೋ, ಕೋಮು ಗಲಭೆ ಸೃಷ್ಟಿಸುವವರೆಂದೋ ರಾಷ್ಟ್ರವಿರೋಧಿ ಚಟುವಟಿಕೆ ನಡೆಸುವವರೆಂದೋ ಪಟ್ಟಕಟ್ಟಿ ಅವರನ್ನು ಮುಗಿಸಿಬಿಡುತ್ತಾರೆ.

ಪ್ರಧಾನಿ, ಮುಖ್ಯಮಂತ್ರಿ ಆದಿಯಾಗಿ ಇಲ್ಲಿ ಬರುವ ಪಚಾರಿ, ಸಾವಜಿ, ಖತ್ರಿ, ಹನೀಫ್‌ರಂತಹ ಪಾತ್ರಗಳು ಅವ್ಯವಸ್ಥೆಯನ್ನು ಸಂಕೇತಿಸುತ್ತವೆ. ಈ ಕಾದಂಬರಿಯಲ್ಲಿ ಚರಿತ್ರೆಯ ಜೊತೆ, ಪ್ರಾಣಿ, ಪಕ್ಷಿ, ಮನುಷ್ಯರನ್ನೊಳಗೊಂಡಂತೆ ಜೈವಿಕಲೋಕವನ್ನೆಲ್ಲಾ ಬೆಸೆಯುವುದರಿಂದ ವರ್ತಮಾನವು ಸುಪುಷ್ಟವಾಗುತ್ತದೆ ಎಂಬ ಆಶಯವೂ ಇದೆ. ನಾಯಿ (ಅರ್ಜುನ), ಚಿರತೆ (ಸೋಫಿಯಾ) ಲೈಂಗಿಕತೆ, ಇವುಗಳ ಜೊತೆ ಪುರಾತನಲು, ಅರಮನೆ ಇವುಗಳನ್ನು ಸಮೀಕರಿಸುವುದು, ಜಾತ್ರೆ, ಕ್ರೀಡಾ ಚಟುವಟಿಕೆಗಳು, ಮೆರವಣಿಗೆ ಇತ್ಯಾದಿಗಳನ್ನು ಒಳಗೊಂಡಂತೆ ಅಧ್ಯಯನ ಮಾಡುವ ಅನಘಾ ಪಾತ್ರವು ವಸಾಹತೋತ್ತರ ಪರಿಸ್ಥಿತಿಯನ್ನು ಹಿಡಿದಿಡಲು ನೆರವಾಗಿದೆ. ಜೊತೆಗೆ ದೇಶಕಾಲಗಳನ್ನು ಆವರಿಸಿಕೊಳ್ಳಲು ಈ ಕಾದಂಬರಿಗೆ ಸಾಧ್ಯವಾಗಿದೆ.

ವಿಮರ್ಶೆ

ರೈತರ, ಮಹಿಳೆಯರ, ಬಡವರ, ಗ್ರಾಮೀಣ ಸಮಸ್ಯೆಗಳನ್ನು ಅನಾವರಣಗೊಳಿಸುವ ಈ ಕಾದಂಬರಿಯನ್ನು ಓದಿ ಮುಗಿಸಿದಾಗ ಜೋಗಪ್ಪನಿಗೆ ಅರಮನೆ ಸಿಗಲಿಲ್ಲ ಎಂಬ ವಿಷಾದ ನಮ್ಮನ್ನು ಕಾಡುತ್ತದೆ. ಮುಕ್ತವಾದ, ಅಸಂಪ್ರದಾಯಿಕವಾದ ಭಾಷೆಯನ್ನು ಬಳಸಿ ಕಾದಂಬರಿಯನ್ನು ಕಲ್ಪನೆ, ಪುರಾಣ, ಸಾಂಕೇತಿಕತೆ, ವ್ಯಂಗ್ಯ ಇವೆಲ್ಲವನ್ನೂ ಬೆರೆಸಿ ಬರೆಯಲಾಗಿದೆ. ಸಾಂಪ್ರದಾಯಿಕ ನಿರೂಪಣೆ, ಭಾಷೆ ಕಥಾಸಂವಿಧಾನ, ಕಾಲ, ಪ್ರದೇಶ, ವೈಜ್ಞಾನಿಕ ಕಾರಣ ಇವುಗಳನ್ನು ಪರಿಗಣಿಸದೆ, ಬದುಕು-ಸಮಾಜ-ಮನುಷ್ಯ-ಜೈವಿಕ ಜಾಲ-ಪರಿಸರ ಇವುಗಳ ಸಂಬಂಧಗಳಲ್ಲಿ, ಇಲ್ಲಿನ ಸಾಂಕೇತಿಕ ಭಾಷೆಯ ಮೂಲಕ ಈ ಬಗೆಯ ಕೃತಿಗಳನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ. ಪುನರುಕ್ತಿ ಇಂತಹ ಕಾದಂಬರಿಯಲ್ಲಿ ಸಹಜವೇ. ತಾಳ್ಮೆಯ ಓದನ್ನು ಈ ಕೃತಿ ಬಯಸುತ್ತದೆ.



ಕಥೆ
ಸೋಮು ರೆಡ್ಡಿ ಅವರ
ಬದುಕು ಮಾಯೆಯ ಆಟ
ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಶಶಿ ತರೀಕೆರೆ ಅವರ
ಎದೆ ಸೆಟೆದು ನಿಂತ ಹುಡುಗ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಬೇಸಿಗೆಯ ಸುಖ...

8ನೇ ಪುಟದಿಂದ...

ಚಳಿಗಾಲದಲ್ಲಿ ಬೆಚ್ಚಗೆ ಹೊದ್ದು ಮಲಗುವ ಸೊಳ್ಳೆಗಳೂ, ಸಾಂಕ್ರಾಮಿಕ ರೋಗಗಳೂ ನೆಲದ ಕಾವಿಗೆ ಧಿಗ್ಗನೆದ್ದು ಹೊರಬಂದು ತಮ್ಮ ಅಟಾಟೋಪವನ್ನು ತೋರುತ್ತವೆ. 'ನಾವೇನು ಕಮ್ಮಿ' ಎಂದು ಔಷಧಗಳೂ, ವೈದ್ಯರೂ, ವೈದ್ಯರ 'ನರಸಿಂಗ್' ಹೋಮುಗಳೂ ಮೈಕೊಡವಿ ಎದ್ದು ಸಿದ್ಧವಾಗುತ್ತವೆ. ಇಂದಿನ ಕಾಯಿಲೆಗಳು ಹಿಂದಿನಂತಿಲ್ಲ. ಆಗೆಲ್ಲ ಇಂಥ ರೋಗದ ಲಕ್ಷಣ ಹೀಗೆಯೇ ಎಂದು ಹೇಳಬಹುದಾಗಿತ್ತು. ಈಗ ಮನುಷ್ಯರಂತೆಯೇ ರೋಗಗಳೂ ಬಣ್ಣ, ಗುಣ, ಲಕ್ಷಣ ಬದಲಾಯಿಸಿಕೊಂಡು ಆಟವಾಡಿಸುತ್ತವೆ.

ನಾವೆಲ್ಲ ಚಿಕ್ಕವರಿದ್ದಾಗ ಬಿಸಿಲಿಗೆ ಹೋಗಿ ಆಡುತ್ತಿದ್ದರೆ 'ಬಿಸಿಲು ಬಾಳೆಹಣ್ಣು ತಿಂದ್ಯಾ' ಎಂದು ರೇಗಿಸುತ್ತಿದ್ದರು. ವಿಟಮಿನ್ 'ಡಿ'ಯಿಂದಾಗಿ ಸೂರ್ಯನ ಬಿಸಿಲು ಮೂಳೆಯನ್ನು ಗಟ್ಟಿಮಾಡುತ್ತಿದ್ದವು. ಸ್ಕಿನ್ ಟ್ಯಾನ್ ಆಗಿಬಿಡುತ್ತೆ, ಕಪ್ಪಗೆ ಕಾಣುತ್ತೇವೆ ಎಂದೆಲ್ಲ ಬಣ್ಣದ ಭ್ರಮೆಯಿಂದಾಗಿ ಸೂರ್ಯನ ಭೇಟಿಯನ್ನು ತಳ್ಳುತ್ತಾ ತಳ್ಳುತ್ತಾ, ಮೆಲ್ಲಗೆ ಬಿದ್ದರೂ ಫ್ರ್ಯಾಕ್ಚರ್ ಎಂದು ಮೂಲೆ ಸೇರುತ್ತಿದ್ದೇವೆ. ಬೇಸಿಗೆ ಬಂತೆಂದರೆ ಮಕ್ಕಳಿಗೆ ರಜೆಯ ಮಜಾ. ಹಿಂದೆಲ್ಲ ಅಜ್ಜ ಅಜ್ಜಿಯರ ಮನೆಗೋ ನೆಂಟರಿಷ್ಟರ ಮನೆಗೋ ಹೋಗಿ ರಜೆ ಕಳೆಯುವುದು ಬಾಂಧವ್ಯದ ವೃದ್ಧಿಗೆ ಸಹಾಯಕವಾಗುತ್ತಿತ್ತು. ಈಗೆಲ್ಲ ಕಂಪ್ಯೂಟರಿನದೋ ಮೊಬೈಲಿನದೋ ಸಂಬಂಧ ಬೆಳೆಸಿ ಒಂಟಿಬಾಳು ಬಾಳುವ ಹಾದಿಯಲ್ಲಿದ್ದೇವೆ.

ಬೇಸಿಗೆ ಬಿಸಿಲಲಿ ಹೊಲ ಉಳುವ, ಕಲ್ಲು ಒಡೆವ, ಡಾಂಬರು ಹಾಕುವವರನ್ನು ಕಂಡಾಗ ಅವರೆಲ್ಲ ಯುದ್ಧಭೂಮಿಯ ಕಲಿಗಳೇನೋ ಎಂದು ಭಾಸವಾಗುತ್ತದೆ. ಹೊರಗಿನ ಬಿಸಿಲಿನಿಂದ ಗ್ರಾಹಕರು ಬ್ಯಾಂಕಿನೊಳಗೆ ಬಂದು ಸೂರ್ಯನ ಮೇಲಿನ ಕೋಪವನ್ನು ನಮ್ಮ ಮೇಲೆ ತೀರಿಸುವವರಂತೆ 'ನಿಮಗೇನ್ರೀ ಗೊತ್ತು ಬೇಗೆಯ ಬಗ್ಗೆ. ನೀವು ತಣ್ಣಗೆ ಫ್ಯಾನಿನ ಕೆಳಗೆ ಕೂತಿರ್ತೀರಿ' ಎಂದು ಜೋರಾಗೇ ಗೊಣಗಿ ಕೂತವ್ರು ಅರ್ಧಗಂಟೆ ಕಳೆಯುವಷ್ಟರಲ್ಲಿ ಫ್ಯಾನ್ ಗಾಳಿಯ ಬೇಗೆಗೇ ಕೈಲಿ ಹಿಡಿದ ಪೇಪರ್‌ಅನ್ನು ಪಂಕದಂತೆ ಬೀಸಿಕೊಳ್ಳುವುದ ಕಂಡಾಗ ನಗುವ ತಡೆಯದೇ ವಿಧಿಯಿಲ್ಲ.

ಬೇಸಿಗೆ ಬಂತೆಂದರೆ ಜಾತ್ರೆ, ಉತ್ಸವಗಳ ಸರತಿ ಸಾಲು ಕಂಗೊಳಿಸುತ್ತದೆ. ಅಂಥ ಜಾತ್ರೆಗಳನ್ನು ನೋಡುವುದೇ ಒಂದು ಸೊಗಸು. ಮೂರ್ನಾಲ್ಕು ದಶಕಗಳ ಹಿಂದೆ ಜಾತ್ರೆಯೆಂದರೆ ಹಿಂಡುಹಿಂಡಾಗಿ ಕುಟುಂಬದವರು, ಸ್ನೇಹಿತರು ಹೋಗಿ ಸಂಭ್ರಮಿಸುತ್ತಿದ್ದರು. ದೇವರ ರಥಕ್ಕೆ ಧವನ ಬಾಳೆಹಣ್ಣನ್ನು ಎಸೆದು ಕೃತಾರ್ಥರಾದವರಂತೆ ಅನುಭವಿಸುತ್ತಿದ್ದರು. ಮಕ್ಕಳೋ ಭಾರಿ ಜನಜಾತ್ರೆ ನೋಡಿ ಕಣ್ಕಣ್ಣುಬಿಟ್ಟು, ಬೆಂಡು ಬತ್ತಾಸು ಕಲ್ಯಾಣಸೇವೆಗಳ ಬಣ್ಣಗಳನ್ನು ನೋಡುತ್ತ ಅವುಗಳನ್ನು ಚೀಪುತ್ತ, ಬಲೂನುಗಳನ್ನು ಕೊಂಡು, ಅಲ್ಲಿಯ ತಿರುಗಣಿಯಲ್ಲಿ ಕುಳಿತು ಬೆದರಿ ಸಂತೋಷಿಸುತ್ತಿದ್ದ ಕಾಲ ನೆನಪಿನಂಗಳಕ್ಕಷ್ಟೇ ಮೀಸಲಾಗಿದೆ. ಇಂದಿನ ಮಕ್ಕಳಿಗೆ ಬೇಸಿಗೆಯ ರಜೆಯೂ ಒಂದೇ ಭಾನುವಾರವೂ ಒಂದೇ. ಮೊಬೈಲ್ ಒಂದಿದ್ದರೆ ಸಾಕು.



ಹೆಣೆದ ಬುಟ್ಟಿಯೇ ಹಣೆಗೆ ನೆರಳು...



ಈ ಬೇಸಿಗೆಯ ಹಬ್ಬಗಳ ಊಟ ತಿಂಡಿಗಳಿಗೂ ಪ್ರಕೃತಿಯ ಗುಣಸ್ವಭಾವಕ್ಕೂ ಒಂದು ನಂಟಿದೆ. ಚಳಿಗಾಲದ ದೀಪಾವಳಿ ಸಂಕ್ರಾಂತಿಗಳಲ್ಲಿ ಚರ್ಮ ಒಣಗುವುದರಿಂದ ಎಣ್ಣೆಯಂಶದ ಕಾಯೊಬ್ಬಟ್ಟು, ಎಳ್ಳು ಬೆಲ್ಲ ಕಡಲೆಬೀಜ ಗಳನ್ನು ಒಳಗೊಂಡ ಆಹಾರವಿರುತ್ತದೆ. ಅಂತೆಯೇ ಬೇಸಿಗೆಯ ಉಷ್ಣದಿಂದ ಕಾಪಾಡಿಕೊಳ್ಳಲು ಶ್ರೀರಾಮನವಮಿಯ ದಿನ ಹೆಸರುಬೇಳೆಯ ಕೋಸಂಬರಿ, ನಿಂಬೆಹಣ್ಣಿನ ಪಾನಕ, ನೀರುಮಜ್ಜಿಗೆಯನ್ನು ಸೇವಿಸುತ್ತೇವೆ. ಅಂತೆಯೇ ಯುಗಾದಿಯ ಅಡುಗೆ ಕೂಡ. ನಮ್ಮ ಹಿರಿಯರು ಸೇವಿಸುತ್ತಿದ್ದ ಆಹಾರವೇ ಔಷಧವಾಗಿತ್ತು. ಅಡುಗೆಮನೆಯೇ ಆರೋಗ್ಯಧಾಮವಾಗಿತ್ತು.



ಬೇಸಿಗೆಯ ಮತ್ತೊಂದು ವಿಶೇಷವೆಂದರೆ ಮಾವಿನಕಾಯಿ ಮತ್ತು ಮಾವಿನಹಣ್ಣು. ರಾಜರುಗಳ ರಾಜ ಹಣ್ಣಾಗುವ ಮೊದಲೂ ಅವನ ಖದರೇನು ಕಮ್ಮಿಯಿಲ್ಲ. ಹೆಣ್ಣು ಮಕ್ಕಳಂತೂ ಮಾವಿನಕಾಯಿಯನ್ನು ಸಣ್ಣಹೋಳುಗಳಾಗಿ ಹೆಚ್ಚಿ ಉಪ್ಪಿನಲ್ಲಿ ಕಲಸಿ ಖಾರಸೇರಿಸಿ ಇಂಗಿನೊಗ್ಗರಣೆ ಕೊಟ್ಟು ಮಾಡುವ ಉಪ್ಪಿನಕಾಯಿ ವರ್ಷಕ್ಕೆಲ್ಲ ಊಟದ ನೆಚ್ಚಿನ ಸಂಗಾತಿ. ಮಾವಿನ ತೊಕ್ಕೂ ಹುಣಸೇ ತೊಕ್ಕಿನಷ್ಟೇ ಸೊಗಸು. ಈ ಕಾಲದಲ್ಲಿ ದಕ್ಷಿಣ ಕನ್ನಡ ಮತ್ತು ಉತ್ತರಕನ್ನಡದ ಹೆಣ್ಣುಮಕ್ಕಳ ಕೈಗಳು ಹಲಸಿನಹಪ್ಪಳ ಮಾಡುವುದ ನೋಡಬೇಕು. ಸರಸರ ಆಡುತ್ತ ಹಪ್ಪಳ ಒತ್ತಿ, ಹರವಿದ ಬಟ್ಟೆಯ ಮೇಲೆ ಟಪಟಪ ಎಸೆವುದನ್ನು ಕಂಡಾಗ ಹೈಸ್ಕೂಲಿನಲ್ಲಿ ನಾವಾಡುತ್ತಿದ್ದ ಡಿಸ್ಕ್ ಥ್ರೋ ನೆನಪಿಗೆ ಬಂದರೆ ಬೈಕೋಬೇಡಿ.. ಸಿಹಿಮಿಶ್ರಿತ ಹಪ್ಪಳ ಕೆಂಡದಲ್ಲಿ ಸುಟ್ಟರೂ ಸೈ ಎನ್ನುತ್ತದೆ, ಎಣ್ಣೆಯಲ್ಲಿ ಕರಿದರೂ ಸೈ ಎನ್ನುತ್ತದೆ. ಬೇಸಿಗೆಯ ಬಿಸಿಲಲ್ಲಿ ತನ್ನ ಮೈ ಕುಗ್ಗಿಸಿಕೊಳ್ಳುವ ಹಪ್ಪಳ ಎಣ್ಣೆಯಲ್ಲಿ ಮೈಅರಳಿಸಿ ನಗುತ್ತದೆ, ಮಾನವ ಕಷ್ಟ ಸುಖಗಳಲ್ಲಿ ಒಗ್ಗುವಂತೆ. ಹಲಸಿನಹಪ್ಪಳದೊಟ್ಟಿಗೆ ತೆಂಗಿನತುರಿ ಮಸ್ಟ್.


ಬೇಸಿಗೆಯ ಬಿರುಬಿಸಿಲು ತಾಳದಾದಾಗ ಹಾದಿಯಲ್ಲಿ ಕಾಣುವ ವಿಶಾಲವಾದ ಹೆಸರು ನೇತುಹಾಕಿಕೊಂಡಿರದ ವೃಕ್ಷಗಳೂ ಮೊದಲ್ಗೊಂಡು, ತೆಂಗು, ಅರಳಿ, ಗಸಗಸೆಗಳೇ ಮೊದಲಾದ ಮರಗಳು ನಮಗೆ ನೆರಳಿನ ಆಶ್ರಯವಾಗುತ್ತವೆ. ಇನ್ನು ಹೊಂಗೆಯನ್ನು ಕಂಡಾಗಲೆಲ್ಲ ನಾ ಕಂಗಾಲಾಗುತ್ತೇನೆ. ತಾನು ಬಿಸಿಲಲಿ ನಿಂತು ಬಳಲಿದರೂ ತೋರಿಸಿಕೊಳ್ಳದೆ ಗಾಳಿಗೆ ನಗುನಗುತ್ತ ತಲೆಯಾಡಿಸಿ ತನ್ನ ಆಶ್ರಯಕ್ಕೆ ಬರುವವರಿಗೆ ತಂಪನೀವ ಅದರ ಉದಾರ ಗುಣ ನನ್ನೊಳಗೆ ಪ್ರಶ್ನೆ ಹುಟ್ಟುಹಾಕುತ್ತಲೇ ಇರುತ್ತದೆ. ಬೇಸಿಗೆಯಲ್ಲಿ ಬಿಸಿಲನ್ನು ದೂರುವುದ ಬಿಟ್ಟು ನಾವು ಯಾರಿಗೆ ಏನು ಉಪಯೋಗವಾಗುತ್ತಿದ್ದೇವೆ? ಇವುಗಳಿಂದಲಾದರೂ ನಾವೇನಾದರೂ ಕಲಿಯಬಹುದೇ? ಬೇಸಿಗೆಯ ಕಾಲ ಮುಗಿವ ಹೊತ್ತಿಗೆ ಸಾಕುಸಾಕಾಗಿ ಬಸವಳಿದ ನಮಗೆ ಕಪ್ಪುಕಟ್ಟಿದ ಮೋಡದಿಂದ ಕೆಲ ಹೊತ್ತಾದರೂ ಧೋ ಎಂದು ಮಳೆ ಸುರಿದರೆ ಜೀವ ಹಾಯ್ ಎನಿಸುತ್ತದೆ-ಊರಿಗೆ ಹೋದ ಸತಿ ಮರಳಿ ಮನೆಗೆ ಬಂದಂತೆ. ಬಿರುಬೇಸಿಗೆಯ ಕಾದ ರವರವ ನೆಲದ ಮೇಲೆ ನೀರೋ, ಮಳೆಯ ಹನಿಯೋ ಬಿದ್ದಾಕ್ಷಣ ಮೂಗು ಜೀವ ಹಾಯೆನಿಸುವ ಕಂಪನ್ನು ಸಂಭ್ರಮಿಸದಿರಲು ಸಾಧ್ಯವೇ?

ಮೊದಲ ಓದು

ಅಕ್ಷರ ರೂಪದಲ್ಲಿ ಕೋಗಿಲೆ ಮೌನ

'**ಬಿಳಿಲು ಬಿಟ್ಟ ಬದುಕು**', 'ಒಡಲುರಿ', 'ಮನಸು ಮುಗಿಲು'...ಹೀಗೆ ಹಲವು ಕಥಾಸಂಕಲನಗಳನ್ನುಕೊಟ್ಟಿರುವ ಕಾ.ತ. ಚಿಕ್ಕಣ್ಣ ಅವರ ಹೊಸ ಕಥಾಸಂಕಲನ 'ಮಾಗಿ ಕೋಗಿಲೆ ಮೌನ'. ಕೋವಿಡ್ ಲಾಕ್‌ಡೌನ್ ಅವಧಿಯೂ ಸೇರಿ ಕಳೆದ ಆರೇಳು ವರ್ಷಗಳ ಅವಧಿಯಲ್ಲಿ ಚಿಕ್ಕಣ್ಣ ಅವರು ಬರೆದ ಸಣ್ಣ ಕಥೆಗಳ ಕುಯಿಲು ಇಲ್ಲಿದೆ.

ನಾಡಿನ ಹಲವು ಪತ್ರಿಕೆಗಳಲ್ಲಿ ಈ ಕಥೆಗಳು ಪ್ರಕಟವಾಗಿವೆ. ಈ ಕಥಾಸಂಕಲನದಲ್ಲಿ ಒಟ್ಟು 10 ಕಥೆಗಳಿವೆ. ಆದರೆ, 'ಮಾಗಿ ಕೋಗಿಲೆ ಮೌನ' ಎಂಬ ಶೀರ್ಷಿಕೆಯ ಕಥೆ ಇಲ್ಲಿಲ್ಲ. ಆದರೆ ಇಲ್ಲಿ ಶೀರ್ಷಿಕೆಯನ್ನು ರೂಪಕದಂತೆ ಬಳಸಲಾಗಿದೆ. ಈ ಕಥೆಗಳಲ್ಲಿ ಚಿತ್ರಿತವಾಗಿರುವ ಲೋಕ, ಪಾತ್ರಗಳು ತಮ್ಮ ನಿವೃತ್ತಿ ನಂತರದ ಬದುಕಿನಲ್ಲಿ ಲೇಖಕರು ಅನುಭವಿಸಿರುವ ವಾತಾವರಣದಿಂದ ದಕ್ಕಿದ್ದಾಗಿ ತೋಚುತ್ತದೆ.



ಮಾಗಿ ಕೋಗಿಲೆ ಮೌನ
ಲೇ: ಕಾ ತ ಚಿಕ್ಕಣ್ಣ
ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ
ಸಂ: 8880087235
ಪು: 112 ₹100

ಚೊಕ್ಕ ಬರವಣಿಗೆ, ಬಳಸಿರುವ ರೂಪಕ ಓದಿಗೆ ವೇಗ ವರ್ಧಕವಾಗಿ ದೃಶ್ಯರೂಪದಲ್ಲಿ ರೋಮಾಂಚನ ನೀಡುತ್ತವೆ. 'ನಿವೃತ್ತಿ ಮರುದಿನದ ಮುಂಜಾನೆ' ಕಥೆಯಲ್ಲಿ, ಕಿಟಕಿಯಿಂದ ಹೊರನೋಡಿದ ಸುಬ್ಬರಾಯಪ್ಪನವರಿಗೆ ಕಂಡ ದೃಶ್ಯದ ವಿವರಣೆ- 'ಕಾದ ಹೆಂಚೆನೆಲವು ನೀರ್ಗುಳ್ಳೆಗಳನ್ನು ಹೊರಡಿಸುತ್ತ ಮಳೆನೀರನ್ನು ಗುಳುಗುಳನೆ ಇಂಗಿಸಿಕೊಳ್ಳುವಂತೆ ಹೊರಗಿನ ಮರ, ಗಿಡ, ಹೂವು, ಎಲೆ ತಂಗಾಳಿ ಸೊಬಗೆಲ್ಲವೂ ಬೆಲ್ಲ-ತುಪ್ಪದ ಪಾಯಸವಾಗಿ ಒಳಗಿಳಿಯತೊಡಗಿತು' ಇದಕ್ಕೆ ಸಾಕ್ಷ್ಯ. 'ಭಾನುವಾರದ ಒಂದು ಹಗಲು' ಕಥೆಯಲ್ಲಿ ಕುಪ್ಪುಸ್ವಾಮಿಯ 'ಹಣ-ಹಣ'ದ ತಳಮಳ ಕಟ್ಟಿಕೊಟ್ಟ ಬಗೆಯೂ ಉಲ್ಲೇಖಾರ್ಹ.

ಲಾಡೆನ್ 'ಬೇಟೆ'ಯ ರೋಚಕ ಕಥನ

ವಿಶ್ವ ವ್ಯಾಪಾರ ಕೇಂದ್ರದ ಕಟ್ಟಡವನ್ನು ಅಲ್ ಕೈದಾ ಉಗ್ರರು ಉರುಳಿಸಿ ಅಮೆರಿಕದ ಹೃದಯಕ್ಕೇ ಬಲವಾದ ಏಟು ಕೊಟ್ಟ, ಜಗತ್ತನ್ನೇ ಒಂದು ಕ್ಷಣ ತಲ್ಲಣಗೊಳಿಸಿದ ಘಟನೆಯ ಹಿನ್ನೆಲೆ, ಮುನ್ನೆಲೆಯನ್ನು ಕಥನ ರೂಪದಲ್ಲಿ ವಿವರಿಸಿದೆ ಈ ಕೃತಿ. ಹಾಗೆಂದು ಇದು ಕಥೆಯ ನಿರೂಪಣೆ ಅಲ್ಲ. ಒಂದು ಘೋರ ಘಟನೆಗೂ ಮುನ್ನ ಮತ್ತು ಆ ಬಳಿಕ ನಡೆದ ಘಟನಾವಳಿಗಳನ್ನು ಸಾಮಾನ್ಯ ಕುತೂಹಲಿಗೂ ತಲುಪಿಸುವ ಪ್ರಯತ್ನ ಇಲ್ಲಿನದ್ದು.

ಡಬ್ಲ್ಯುಟಿಒ ಉರುಳುವುದಕ್ಕೂ ಹಿಂದಿನ ಅಮೆರಿಕದ ವ್ಯವಹಾರ, ಯುದ್ಧ ನಡವಳಿಕೆ ಮತ್ತು ದುರಂತ ಘಟಿಸಿದ ನಂತರ ಕೇವಲ ತನ್ನ ಪ್ರತಿಷ್ಠೆ ಸಾಧನೆಗಾಗಿ ಲಾಡೆನ್‌ನನ್ನು ಪತ್ತೆ ಮಾಡಿ ಕೊಂದ ಘಟನೆಯ ವಿವರವನ್ನು ಕೃತಿ ಕಟ್ಟಿಕೊಟ್ಟಿದೆ.




ಆಪರೇಷನ್ ತ್ರಿಶೂಲ
ಲೇ: ಡಾ.ಡಿ.ವಿ.ಗುರುಪ್ರಸಾದ್
ಪ್ರ. ವಿಕ್ರಂ ಪ್ರಕಾಶನ ಬೆಂಗಳೂರು
ಸಂ: 9740994008
ಪು: 219 ₹199

ಒಂದೇ ಘಟನೆಯ ಆಚೆ ಈಚೆಗಿನ ಇತಿಹಾಸದ ಅಧ್ಯಯನ ಆಸಕ್ತರಿಗೆ, ಕುತೂಹಲಿಗಳಿಗೆ ಬೇಕಾದ ಕೃತಿಯಿದು. ಧರ್ಮದ ಹೆಸರಿನಲ್ಲಿ ಹಿಂಸೆ ವಿಜೃಂಭಿಸುವ ಸಂದರ್ಭದಲ್ಲಿ ಸಾಕಷ್ಟು ಆಧಾರ ಗ್ರಂಥಗಳ ಅಧ್ಯಯನದೊಂದಿಗೆ ಮೂಡಿಬಂದಿದೆ. ಕೃತಿಯಲ್ಲಿ ತೆರೆದುಕೊಳ್ಳುತ್ತಾ ಹೋಗುವ ವಿವರಗಳು ಪತ್ತೇದಾರಿ ಕಥೆಯನ್ನು ಓದುತ್ತಿರುವಂತೆ ಭ್ರಮೆ ಮೂಡಿಸುತ್ತವೆ. ಅಮೆರಿಕದ ಪಡೆಗಳು ಲಾಡೆನ್‌ನ ಪತ್ತೆ ಮಾಡುವ, ಆತನನ್ನು ಹತ್ಯೆಗೈಯುವ ಸಾಹಸದ ವಿವರಗಳನ್ನು ಎಳೆ ಎಳೆಯಾಗಿ ಬಿಚ್ಚಿಡಲಾಗಿದೆ. ನಿವೃತ್ತ ಡಿಜಿಪಿಯವರೇ ಬರೆದಿರುವುದರಿಂದ ಈ ಕೃತಿಯಲ್ಲಿನ ಮಾಹಿತಿಯ ವಸ್ತುನಿಷ್ಠತೆ ಹೆಚ್ಚಿದೆ.

ಸಹಜ ನಿರೂಪಣೆಯ ಕೃತಿ

ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ. ರಂಗಸ್ವಾಮಿ ಅವರು ಬರೆದ ಕೃತಿ 'ನಿನ್ನೆ ಮೊನ್ನೆ ನಮ್ಮ ಜನ'. ಕ್ರಾಂತಿ, ಯುವದಿನಗಳ ಹುಮ್ಮಸ್ಸು, ವೃತ್ತಿ ಬದುಕಿನ ಅನುಭವಗಳು ಎಲ್ಲವನ್ನೂ ಒಂದು ಕಡೆ ರಾಶಿ ಹಾಕಿ ಕಟ್ಟಿಕೊಟ್ಟಿದೆ ಈ ಕೃತಿ. ಇಲ್ಲಿ ನಾಡು ನುಡಿಯ ಹೋರಾಟದಲ್ಲಿ ತೊಡಗಿಸಿಕೊಂಡ ನೆನಪುಗಳಿವೆ. ವಿದ್ಯಾರ್ಥಿ ಜೀವನದಲ್ಲಿ ಕುಲಪತಿಯವರಿಗೇ ತಿರುಗಿಬಿದ್ದ ಘಟನೆಗಳ ವಿವರಗಳಿವೆ. ದೇವೇಗೌಡರ ಒಡನಾಟ ಮತ್ತು ಮಹತ್ವದ ಘಟನೆಗಳ ಉಲ್ಲೇಖವಿದೆ. ಕೃತಿಯ ಕೆಲವು ಲೇಖನಗಳು ಒಂದೇ ಗುಕ್ಕಿನಲ್ಲಿ ಓದಿಸಿಕೊಂಡು ಹೋಗುತ್ತವೆ.

ವೃತ್ತಿ ಬದುಕಿನ ಅನುಭವಗಳು, ಘಟನೆಗಳು ಒಂದಿಷ್ಟು ದಾಖಲೆಗಳಾಗಿ ಇಲ್ಲಿವೆ. ಪೈಲ್ವಾನ್ ರುದ್ರ (ಮೂಗ), ಪ್ರಮೋದಾ ದೇವಿ ಅವರ ಬಗೆಗಿನ ಲೇಖನಗಳು, ಇಂದಿರಾಗಾಂಧಿಯವರ ಬಂದೋಬಸ್ತ್‌ನಲ್ಲಿ ತೊಡಗಿದ್ದ ಅನುಭವಗಳು... ಇವೆಲ್ಲಾ ಮೈಸೂರಿನ ಸಾಮಾಜಿಕ, ಸಾಂಸ್ಕೃತಿಕ ನೆನಪುಗಳನ್ನು ತೆರೆದಿಟ್ಟಿವೆ. ವೃತ್ತಿಬದುಕಿನಲ್ಲಿ ಅನುಭವಿಸಿದ ಕಸಿವಿಸಿಗಳನ್ನು ಮುಲಾಜಿಲ್ಲದೇ ಲೇಖಕರು ಹೇಳಿಕೊಂಡಿದ್ದಾರೆ. ಹಾಗಾಗಿ ಇದರಲ್ಲಿ ಸಹಜ ನಿರೂಪಣೆ ಇದೆ.



ನಿನ್ನೆ ಮೊನ್ನೆ ನಮ್ಮ ಜನ
ಲೇ: ಜೆ.ಬಿ.ರಂಗಸ್ವಾಮಿ
ಪ್ರ: ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ ಮೈಸೂರು
ಸಂ: 99005 55255
ಪು: 256 ₹250

ಪ್ರೊ.ಕೃಷ್ಣೇಗೌಡರ ಮುನ್ನುಡಿಯೇ ಓದಿಗೊಂದು ಒಳ್ಳೆಯ ಆರಂಭ ಕೊಟ್ಟಿದೆ. ಸಾಮಾನ್ಯರಲ್ಲಿ ಸಾಮಾನ್ಯರಾಗಿ, ಅಧಿಕಾರಿಯಾಗಿ, ಬರಹಗಾರರಾಗಿ ಲೇಖಕರ ಅರಿವಿನ ವಿಸ್ತಾರ ಮತ್ತು ಜೀವನಾನುಭವವನ್ನು ಕಟ್ಟಿಕೊಟ್ಟಿದೆ.

ಊರ್ಗುಬ್ಬಿ ಎಲ್ಲಿಗ್ಹೋದಿ?



8ನೇ ಪುಟದಿಂದ...

ಗಿಡದ ರೆಂಬೆಗೆ ನೆಲುವು ಕಟ್ಟಿ ಅದರೊಳಗೆ ನೀರು ತುಂಬಿದ ಪಾತ್ರೆ ಇಡುವುದು, ಮನೆ ಮನೆಗಳ ಅಂಗಳದಲ್ಲಿ ಕಾಳ ಕಡಿ ಚೆಲ್ಲುವುದನ್ನು ರೂಢಿ ಮಾಡಿಕೊಂಡೆವು. ಇದರಿಂದ ನಮಗೂ ಮತ್ತು ಗುಬ್ಬಿಗಳಿಗೆ ದೋಸ್ತಿ ಬೆಳೆಯಿತು! ನಮ್ಮನ್ನು ಕಂಡು ಅವುಗಳು ಹಿಂಡು ಹಿಂಡಾಗಿ ಹತ್ತಿರಕ್ಕೆ ಬರುತ್ತಿದ್ದವು.

ಊರ ಅಗಸಿಯ ಬಾಗಿಲು, ಚಾವಡಿಯ ಮೇಲ್ಛಾವಣಿ, ಮಣ್ಣು, ಹುಲ್ಲು, ಹೆಂಚಿನ ಮನೆಗಳ ಗೋಡೆ, ಮಾಡು, ಕಿಟಕಿಗಳಲ್ಲಿ, ಗುಡಿ, ಚರ್ಚು, ಮಸೀದಿ, ಬಸದಿಗಳ ಸಂಧಿ ಗೊಂದಿಗಳಲ್ಲಿ ಗುಬ್ಬಿಗಳು ಗೂಡು ಕಟ್ಟಿ ಬದುಕುತ್ತಿದ್ದವು. ಜಾತಿ ಧರ್ಮಗಳ ಕಿರಿಕಿರಿ ಇಲ್ಲ. ಮೈಕು, ಸೌಂಡು, ಮೊಬೈಲು, ಟವರ್, ಹಾರ್ನು, ಟ್ರ್ಯಾಕ್ಟರು, ಫ್ಯಾಕ್ಟ್ರಿ ಸೈರನ್ನು, ಕೊಳೆ, ಇಂಥವುಗಳ ಹಾವಳಿ ಇಲ್ಲದ ಕಾಲವದು. ಗುಬ್ಬಿಗಳ ನೆಮ್ಮದಿಗೆ ಆಗ ಭಂಗವಿರಲಿಲ್ಲ.

ಅಚ್ಚುಮೆಚ್ಚಿನ ಜೋಡಿ
ಅನುಕೂಲ ದಾಂಪತ್ಯ
ಬೆರಗುಗೊಳಿಸುವ ಪ್ರತಿಭೆ ಗುಬ್ಬಿಗಳಿಗೆ
ಉಭಯ ಪಕ್ಷಿಗಳಲ್ಲಿ
ಮಿಗಿಲು ಯಾವುದು ಎಂದು
ಹೇಳಲಾಗದು ಬುದ್ಧಿಜೀವಿಗಳಿಗೆ!

ಹೀಗೆ ತಮ್ಮ 'ಹೊಸಬಾಳು' ಪದ್ಯದಲ್ಲಿ ಬಿ.ಎಸ್.ಕುರ್ಕಾಲರು ಗಂಡು ಹೆಣ್ಣು ಗುಬ್ಬಿಗಳಲ್ಲಿ ಯಾವುದು ಹೆಚ್ಚು ಎಂದು ಹೇಳಲಾಗದು. ಅವುಗಳ ಪ್ರತಿಭೆ ಸಮಸಮ. ಅಲ್ಲಿ ಅನುಕೂಲ ದಾಂಪತ್ಯವಿದೆ. ಅದು ಮನುಕುಲಕ್ಕೆ ಮಾದರಿ. ಅವುಗಳಿಂದ ತಿಳಿದುಕೊಳ್ಳಬೇಕಿರುವುದು ಬಹಳಷ್ಟಿದೆ ಎನ್ನುವುದು ಅವರ ಧಾಟಿಯಾಗಿದೆ. ಗುಬ್ಬಿಗಳ ಬಣ್ಣ ಕಂದು. ಬೆನ್ನು ಮತ್ತು ರೆಕ್ಕೆಗಳಲ್ಲಿ ಬಿಳಿ ಹಾಗೂ ಕರಿ ಬಣ್ಣಗಳು ಮಿಶ್ರಿತವಾಗಿರತ್ತವೆ. ಗಂಡು ಗುಬ್ಬಿ ನೋಡಲು ಆಕರ್ಷಕವಾಗಿದ್ದು ಅದರ ಗಂಟಲು ಮೇಲೆ ಕಪ್ಪುಕಲೆ ಇದೆ. ಕಪ್ಪು ಕೊಕ್ಕು ಹೊಂದಿದೆ.

ಒಂದನ್ನೊಂದು ಬಿಟ್ಟಿರದ ಇವು ತಮ್ಮ ಸಂತಾನದ ಅಭಿವೃದ್ಧಿಗಾಗಿ ಉತ್ತಮ ನೆಲೆ ಕಂಡುಕೊಂಡು ಅಲ್ಲಿಗೆ ಹುಲ್ಲು, ಕಡ್ಡಿ, ಅರಳೆ ತಂದು ಬೆಚ್ಚನೆಯ ಗೂಡುಕಟ್ಟುತ್ತವೆ. ಹೆಣ್ಣು ಗುಬ್ಬಿ ಮೊಟ್ಟೆಯಿಟ್ಟು ಕಾವುಕೊಟ್ಟು ಮರಿ ಮಾಡಿದರೆ ಗಂಡುಗುಬ್ಬಿ ರಕ್ಷಣೆಯಾಗುತ್ತದೆ. ಮೊಟ್ಟೆಯೊಡೆದು ಹೊರಬಂದ ಮರಿಗಳು ಅಗಲ ಬಾಯಿ ಪಡೆದಿರುತ್ತವೆ. ಅವುಗಳಿಗೆ ತಂದೆ ತಾಯಿ ಗುಬ್ಬಿಗಳು ಹುಳು ಹುಪ್ಪಟೆ, ಚಿಗುರು ಹುಡುಕಿ ತಂದು ತೆರೆದ ಬಾಯೊಳಗೆ ಹಾಕುತ್ತವೆ. ಈ ದೃಶ್ಯ ನೋಡಲು ಹೃದಯ ತುಂಬಿ ಬರುತ್ತದೆ. ಮಕ್ಕಳ ಮೇಲೆ ಹೆತ್ತವರ ಕಾಳಜಿ ಎಷ್ಟಿರುತ್ತದೆ ಎಂಬುದು ಗೋಚರಿಸಿ ಕಣ್ಣುಗಳು ಒದ್ದೆಯಾಗುತ್ತವೆ. ಎಷ್ಟು ಉಣಿಸಿದರೂ ಇನ್ನೂ ಇನ್ನೂ ಬೇಕೆಂದು ಕಿರುಚಿ ಬಾಯ್ತೆರೆದು ಹಲಬುವ ಕಂದಮ್ಮಗಳ ಕಿರಿಕಿರಿಗೆ ಬೇಸರಿಸಿಕೊಳ್ಳದೆ ಹುಡುಕಿ ತಂದದ್ದೆಲ್ಲವೂ ಮರಿಗಳಿಗೆ ಗುಟುಕು ನೀಡುವ ಗುಬ್ಬಚ್ಚಿಗಳು ನಿಜಕ್ಕೂ ಗ್ರೇಟ್!

ಗುಬ್ಬಚ್ಚಿಗಳ ಮೊಟ್ಟೆ ಮತ್ತು ಮರಿಗಳು ಆಗಾಗ ಬೆಕ್ಕು, ನಾಯಿ, ನರಿ, ಗೂಬೆ, ಹಾವು ಮೊದಲಾದ ಸರ್ವಭಕ್ಷಕಗಳಿಗೆ ಹಾಗೂ ಮಳೆ, ಗಾಳಿ, ಸಿಡಿಲುಗಳಿಗೆ ಬಲಿಯಾಗುತ್ತಿದ್ದವು. ಮರಿಗಳಿಗೆ ಆಹಾರ ತರಲು ದಂಪತಿ ಹೋದಾಗ ಇಂಥ ಅವಘಡಗಳು ಸಂಭವಿಸುತ್ತಿದ್ದವು. ಮರಳಿ ಬಂದಾಗ ಮರಿಗಳು ಕಾಣೆಯಾಗಿದ್ದರೆ ಅವುಗಳ ಸಂಕಟ ಹೇಳತೀರದು. ಇಷ್ಟಿದ್ದರೂ ಗುಬ್ಬಚ್ಚಿಗಳ ಸಂತತಿಗೆ ದೊಡ್ಡ ಪ್ರಮಾಣದ ಧಕ್ಕೆಯುಂಟಾಗುತ್ತಿರಲಿಲ್ಲ. ಕೆಲವು ದಶಕಗಳ ಹಿಂದೆ ಪರಿಸರ ಸಮತೋಲನದಲ್ಲಿ ಈಗಿನಷ್ಟು ಏರುಪೇರು ಆಗುತ್ತಿರಲಿಲ್ಲ. ಎಲ್ಲರೂ ಪ್ರಾಣಿ ಪಕ್ಷಿಗಳನ್ನು ಪ್ರೀತಿಸುವವರೇ ಆಗಿದ್ದರು. ಎಲ್ಲವನ್ನೂ ಬೇಟೆಯಾಡಿ ಕಬಳಿಸುವ ಮನೋಭಾವ ಆಗಿನದಲ್ಲವೆಂಬುದು ಸತ್ಯ. ಅವಶ್ಯಕತೆಗೆ ತಕ್ಕಂಥ ಬದುಕು ಇತ್ತು. ದುರಾಸೆಯ ಪ್ರಮಾಣ ಕಡಿಮೆ. ಇದಕ್ಕೆಲ್ಲ ಕಾರಣ ಆಧುನಿಕ ತಂತ್ರಜ್ಞಾನ ಅಡಿಯಿಟ್ಟಿರಲಿಲ್ಲ. ಕುಟ್ಟುವುದು, ಬೀಸುವುದು, ಕೇರುವುದು, ಒಣಗಿಸುವುದು, ರಾಶಿಮಾಡುವುದು, ಸ್ವಚ್ಛಗೊಳಿಸುವುದು ಹೀಗೆ ಇಂಥ ಕಾರ್ಯಗಳೆಲ್ಲವೂ ಮನುಷ್ಯರಿಂದ ನಡೆಯುತ್ತಿದ್ದವು. ಇದರಿಂದ ಊರುಗುಬ್ಬಿಗಳಿಗೆ ಸಾಕಷ್ಟು ಆಹಾರ ಸಿಗುತ್ತಿದ್ದುದರಿಂದ ಊರು ಬಿಡುತ್ತಿರಲಿಲ್ಲ.

ಮನೆಮನೆಗಳ ಅಂಗಳ, ರಸ್ತೆ, ಬೀದಿ, ತಿಪ್ಪೆ, ಮಾಳಿಗೆ ಹೀಗೆ ಎಲ್ಲೆಂದರಲ್ಲಿ ಕಾಳು, ಹುಳು ಹುಪ್ಪಟೆ ಗುಬ್ಬಚ್ಚಿಗಳ ಹೊಟ್ಟೆ ತುಂಬಿಸುತ್ತಿದ್ದವು. ಅಪ್ಪ ರಾಶಿ ಮಾಡುವಾಗ, ಅವ್ವ ಕಾಳು ಹಸನು ಮಾಡುವಾಗ, ಅಕ್ಕ ಕೇರುವಾಗ, ಅಜ್ಜಿ ಅಳೆಯುವಾಗ, ಅಜ್ಜ ದಾನ ಮಾಡುವಾಗ, ಅಣ್ಣ ಚೀಲ ತುಂಬುವಾಗ, ತಂಗಿ ಉಣ್ಣುವಾಗ, ತಮ್ಮ ಚೆಲ್ಲುವಾಗ ನಾನು ಒಂದಗುಳು ಎತ್ತಿಡುವಾಗ ಗುಬ್ಬಿಗಳಿಗೆ ಹಬ್ಬ! ಇದೆಲ್ಲ ಕ್ರಿಯೆ ನಡೆಯುವ ವೇಳೆ ಕಾಳು ಉದುರುದುರಿ ಬೀಳುವುದು ಸಹಜ. ಗುಬ್ಬಚ್ಚಿಗಳು ಕುಪ್ಪಳಿಸಿ ಆಯ್ದು ಕುಕ್ಕಿ ಕುಕ್ಕಿ ತಿನ್ನುತ್ತ ಹೊಟ್ಟೆ ಹೊರೆದುಕೊಳ್ಳುತ್ತಿದ್ದವು. ಜತೆಗೆ ಮಕ್ಕಳಿಗೆ ಉಣಿಸಲು ಒಯ್ಯುತ್ತಿದ್ದವು.

ವಾಹನಗಳ ದಟ್ಟಣೆ, ಕೈಗಾರಿಕೆಗಳ ಹೆಚ್ಚಳ, ಮೊಬೈಲ್ ಟವರ್‌ಗಳ ಸ್ಥಾಪನೆ ಮೊದಲಾದ ಕಾರಣಗಳಿಂದ ಗುಬ್ಬಚ್ಚಿಗಳ ಸಂತತಿ ನಶಿಸಿ ಹೋಗುವಂತಾಗಿದೆ. ಹುಲ್ಲು, ಮಣ್ಣು, ಹೆಂಚಿನ ಮನೆಗಳ ಸ್ಥಳದಲ್ಲಿ ಕಲ್ಲು, ಇಟ್ಟಿಗೆ, ಸಿಮೆಂಟ್ ಮನೆಗಳು ನಿರ್ಮಾಣವಾಗಿವೆ, ಗೂಡು ಕಟ್ಟಲು ಜಾಗವಿಲ್ಲ. ರಾಸಾಯನಿಕ ಗೊಬ್ಬರಗಳ ಉಪಯೋಗ ಅನಿವಾರ್ಯವಾಗಿದೆ. ಹೀಗಾಗಿ ಎಲ್ಲೆಂದರಲ್ಲಿ ಗುಬ್ಬಿಗಳಿಗೆ ಆಹಾರ ದಕ್ಕದಾಗಿದೆ. ಅವುಗಳತ್ತ ಕಾಳಜಿ ತೋರುವ ಸಂಸ್ಕೃತಿಯೂ ಮಾಯವಾಗುತ್ತಿದೆ.

ಕೊರೊನಾ ಕಾಲಘಟ್ಟದಲ್ಲಿ ಲಾಕ್‌ಡೌನ್ ಇದ್ದಂಥ ವೇಳೆ ಗುಬ್ಬಚ್ಚಿಗಳ ಕಲರವ ಊರೊಳಗೆ ಕೇಳುವಂತಾಗಿತ್ತು. ಆದರೀಗ ಮತ್ತದೇ ಪರಿಸ್ಥಿತಿ! ಕೊರೊನಾ ಕ್ಷೀಣಿಸಿದೆ ಬದುಕು ಮುಕ್ತವಾಗಿದೆ. ಮತ್ತೆ ಗುಬ್ಬಚ್ಚಿಗಳು ಮಾಯವಾಗಿವೆ.

ಬಂಧು ಬಳಗ ಕೂಡಿಕೊಂಡು
ಅಂಗಳ ತುಂಬಾ ಆಡ್ತಿದ್ದಿ
ಕಾಳ್ಕಡಿ ಹುಡುಕಿ ತಿಂದು
ಮಕ್ಳು ಮರಿ ಸಾಕ್ತಿದ್ದಿ
ಈಗ ಮಾತ್ರ ಕಾಣುವಲ್ಲಿ
ಊರ್ಗುಬ್ಬಿ ಎಲ್ಲಿಗ್ಹೋದಿ!?

ಎನ್ನುವ ನೋವು ಕಾಡುವಂತಾಗಿದೆ. ಇದು ಹೀಗೇ ಉಳಿಯಬಾರದು. ಅಳಿದುಳಿದ ಗುಬ್ಬಚ್ಚಿಗಳಿಗೆ ನೆಲೆ ಒದಗಿಸೋಣ. ಅವುಗಳಿಗೆ ಪೂರಕವಾದ ಪರಿಸರ ಒದಗಿಸುವತ್ತ ದಾಪುಗಾಲು ಇಟ್ಟು ಗುಬ್ಬಿಗಳ ಸಂತತಿ ಹೆಚ್ಚಿಸೋಣ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ದೊಡ್ಡಾಟ

ಬೆಡಗಿನ ಭಾಗಾಕಾರ: ಬೇರೆ ಬೇರೆ ಅಂಕಿ ಹೊಂದಿರುವ ಮೂರು ಅಂಕಿಯ ಒಂದು ಸಂಖ್ಯೆಯನ್ನು ಮಗ್ಗಲು - ಮಗ್ಗಲು ಎರಡು ಬಾರಿ ಬರೆದುಕೊಳ್ಳಿ. ಅದನ್ನು 7ರಿಂದ ಭಾಗಿಸಿರಿ. ಬಂದ ಭಾಗಲಬ್ಧವನ್ನು ಮತ್ತೆ 11ರಿಂದ ಭಾಗಿಸಿರಿ. ಬಂದ ಭಾಗಲಬ್ಧವನ್ನು ಈಗ ಮತ್ತೆ 13ರಿಂದ ಭಾಗಿಸಿದಾಗ ಆಶ್ಚರ್ಯ! ಮೊದಲು ಹಚ್ಚಿಕೊಂಡ ಮೂರಂಕಿಯ ಸಂಖ್ಯೆಯೇ ಪುನರಾವರ್ತನೆಯಾಗಿರುತ್ತದೆ. ಅಡಿ ನೋಡಿ.

ಉದಾ: 137 ಆ ಸಂಖ್ಯೆ ಆಗಿರಲಿ

137, 137 (ಎರಡುಬಾರಿ ಬರೆದುಕೊಂಡಾಗ)

7) 137, 137 (19591
7
67
63
41
35
63
63
007
7
0

(7 ರಿಂದ ಭಾಗಿಸಿದಾಗ)

11) 19591 (1781
11
85
77
89
88
11
11
00

ಈಗ ಭಾಗಲಬ್ಧವನ್ನು 11ರಿಂದ ಭಾಗಿಸಿದಾಗ

13) 1781 (137
13
48
39
091
91
00

ಈಗ ಭಾಗಲಬ್ಧವನ್ನು 13ರಿಂದ ಭಾಗಿಸಿದಾಗ

ಹೌದು! ಈ ಭಾಗಲಬ್ಧದಲ್ಲಿ ಮೊದಲು ಹಚ್ಚಿಕೊಂಡ ಸಂಖ್ಯೆ **137** ಬಂದಿದೆ.

ಸಣ್ಣಾಟ

4 ಹಾಗೂ 9ರ ನಡುವೆ ಎಷ್ಟು 6ಗಳನ್ನಾದರೂ ಸೇರಿಸಿ. ಅದು 7ರಿಂದ ಪೂರ್ಣ ಭಾಗವಾಗುತ್ತದೆ.

ಉದಾ 1: 7) 469 (67
42
49
49
00

ಉದಾ 2: 7) 4669 (667
42
46
42
49
49
00



ಇದರಂತೆ 4 ಮತ್ತು 2ರ ನಡುವೆ ಎಷ್ಟು 6ಗಳನ್ನು ಸೇರಿಸಿದರೂ ಅದು ಪೂರ್ಣ ಭಾಗವಾಗುತ್ತದೆ. ನೀವೇ ಮಾಡಿ ನೋಡಿ.

ಶಬ್ದಗಳೊಡನೆ ಸರಸ

ರಣ ಎಂಬ ಪದದಿಂದ ಕೊನೆಗೊಳ್ಳುವ 3 ಅಕ್ಷರಗಳ 7 ಪದಗಳನ್ನು ಗುರುತಿಸಿ

1. __ ರಣ 2. __ ರಣ
3. __ ರಣ 4. __ ರಣ
5. __ ರಣ 6. __ ರಣ
7. __ ರಣ

ಜಾಣಪದ ಆಟ

ಒಂದು ಪದ ಹಲವು ಪಾಠ

ಇಲ್ಲಿ ಕೊಟ್ಟಿರುವ ಎರಡು ಮೂಲಾಕ್ಷರಗಳಿಗೆ ಸುಳಿವು ಆಧರಿಸಿ ಅದರಂತೆ ಪದರಚಿಸಲು ಕಾಗುಣಿತ ಸೇರಿಸಿ ಹೊಸ ಪದ ರಚಿಸಿ

ಉದಾ: ಬ. ಳ. ಮೂಲಾಕ್ಷರಗಳಿಗೆ ಸುಳಿವಿನಂತೆ ಕಾಗುಣಿತ ಸೇರಿಸಿದರೆ ಒಂದು ಬಣ್ಣದ ಹೆಸರಾಗುತ್ತದೆ.

	ಬ	ಳ	
1.	ಬಿ	ಳಿ	ಒಂದು ಬಣ್ಣದ ಹೆಸರು
2.			ಒಂದು ಹಣ್ಣಿನ ಗಿಡ
3.			ಹತ್ತಿರ
4.			ಜೀವನ
5.			ಫಸಲು



ಚಿಕ್ ಚಿಕ್... ಚಿಂವ್ ಚಿಂವ್ ...

LION


ಇದನ್ನು ತಲೆಕೆಳಗೆ ಮಾಡಿ ಓದಿ ನೋಡಿ

99 9T9


ಮೊದಲನೆಯದ್ದನ್ನು ಓದಿ ನಂತರ ಎರಡನೆಯದನ್ನು ಓದಿ. ನಂತರ ಉಚ್ಚಾರದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ (ಇಂಗ್ಲಿಷ್‌ನಲ್ಲಿ ಓದಿ)

ಕೃಷ್ಣ ಮತ್ತು ಕುಚೇಲ


• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ




ಕೃಷ್ಣ ಮತ್ತು ಕುಚೇಲರ ಗೆಳೆತನ ಜಗತ್ಪ್ರಸಿದ್ಧ. ಅವರಿಬ್ಬರೂ ಸಾಂದೀಪನಿ ಮುನಿಗಳ ಗುರುಕುಲದಲ್ಲಿ ಸಹಪಾಠಿಗಳಾಗಿದ್ದವರು. ತುಂಬಾ ಆತ್ಮೀಯರಾಗಿದ್ದರು




ಗುರುಕುಲದಲ್ಲಿದ್ದಾಗ ಒಟ್ಟಿಗೇ ಆಟವಾಡುತ್ತಿದ್ದರು. ಏನೇ ಇದ್ದರೂ ಹಂಚಿಕೊಂಡು ತಿಂದು ಖುಷಿಪಡುತ್ತಿದ್ದರು. ಕುಚೇಲನಲ್ಲಿ ಬಡತನವಿತ್ತು. ಕೃಷ್ಣನಿಗೆ ಕುಚೇಲನ ಮೇಲೆ ಅಕ್ಕರೆಯಿತ್ತು




ವಿದ್ಯಾಭ್ಯಾಸ ಮುಗಿದ ಬಳಿಕ ಇಬ್ಬರೂ ಪರಸ್ಪರ ಬೀಳ್ಕೊಟ್ಟರು. ತಂತಮ್ಮ ಊರುಗಳಿಗೆ ತೆರಳಿದರು. ಬಹಳ ವರ್ಷಗಳ ಕಾಲ ಇಬ್ಬರೂ ಭೇಟಿಯಾಗಲೇ ಇಲ್ಲ



ಕುಚೇಲನ ಮನೆಯಲ್ಲಿ ತೀರಾ ಬಡತನವಿತ್ತು. ಒಮ್ಮೆ ಕೃಷ್ಣನ ಬಳಿ ಹೋಗಿ ಕಷ್ಟ ಹೇಳಿಕೊಳ್ಳಬಾರದೇ ಎಂದು ಅವನ ಹೆಂಡತಿ ಸಲಹೆ ಮಾಡಿದಳು



ತನ್ನ ಅರಮನೆಗೆ ಬಂದ ಕುಚೇಲನನ್ನು ಕೃಷ್ಣ ತುಂಬಾ ಪ್ರೀತಿಯಿಂದ ಸ್ವಾಗತಿಸಿದ. ಕುಚೇಲನ ಬಳಿಯಿದ್ದ ಸಿಹಿ ಅವಲಕ್ಕಿಯನ್ನು ತಿಂದ. ಕುಚೇಲನಿಗೆ ತಾನು ಬಂದ ಉದ್ದೇಶವೇ ಮರೆತು ಹೋಯಿತು



ಕುಚೇಲ ತನ್ನ ಮನೆಗೆ ವಾಪಸ್ ಬಂದಾಗ ಎಲ್ಲವೂ ಬದಲಾಗಿತ್ತು. ಸಾಕಷ್ಟು ಸಂಪತ್ತು, ಸುಸಜ್ಜಿತ ಮನೆ ಎಲ್ಲವೂ ಸಿದ್ಧವಾಗಿತ್ತು. ತಾನೇನನ್ನೂ ಕೇಳದಿದ್ದರೂ ಕೇವಲ ಮುಷ್ಟಿ ಅವಲಕ್ಕಿ ತಿಂದ ಕೃಷ್ಣ, ತನ್ನ ಮೇಲೆ ಕೃಪೆ ತೋರಿದ್ದಕ್ಕೆ ಕೃತಜ್ಞನಾದ

ಟ್ವೆಂಟಿ – 20 ಮ್ಯಾಚ್

ಪಡೆನುಡಿಗಳಿಗೆ ಅರ್ಥ ಹೊಂದಿಸಿ

1. ತಿಪ್ಪೆ ಸಾರಿಸು	A. ದೋಷಗಳನ್ನು ಮುಚ್ಚಿಹಾಕಿ ಶುದ್ಧವಾಗಿರುವಂತೆ ನಟಿಸು
2. ತಿಮಿಂಗಿಲ	B. ಕಂಠಪಾಠ ಮಾಡು
3. ತಿಂದುಹಾಕು	C. ಕಾಡಿಸು
4. ತಳಕುಹಾಕು	D. ಚಾಡಿಹೇಳು
5. ತಲೆಹಾಕು	E. ಸುಳ್ಳು ಹೇಳು
6. ತಲೆ ಅಲ್ಲಾಡಿಸು	F. ಎಷ್ಟು ಕೊಟ್ಟರೂ ತೃಪ್ತಿ ಕಾಣದವ
7. ತಲೆತಿನ್ನು	G. ಸಮ್ಮತಿ ಕೊಡು
8. ಘೋಂಗಿ ಬಿಡು	H. ನಾಶ ಮಾಡು
9. ಗಟ್ಟಿ ಮಾಡು	I. ಮಧ್ಯಪ್ರವೇಶಿಸು
10. ಕಿವಿ ಚುಚ್ಚು	J. ಸಂಬಂಧ ಕಲ್ಪಿಸು

ಇವರು ಯಾರು ಬಲ್ಲಿರೇನು? ಹೊಂದಿಸಿ

1. ಅಶೋಕ ಮೌರ್ಯ	A. ಕವಿರಾಜ ಮಾರ್ಗಕರ್ತೃ
2. ಕೌಟಿಲ್ಯ	B. ಸ್ಕೌಟ್ ಆ್ಯಂಡ್ ಗೈಡ್ಸ್ ಸಂಸ್ಥಾಪಕ
3. ಕಾಳಿದಾಸ	C. ಇಟಲಿಯ ವಿಜ್ಞಾನಿ
4. ಬೇಡನ್ ಪೋವೆಲ್	D. ಅರ್ಥಶಾಸ್ತ್ರ ಕರ್ತೃ
5. ಚರ್ಚಿಲ್	E. ಪ್ರಸಿದ್ಧ ಸಂಸ್ಕೃತ ಕವಿ
6. ಡಾರ್ವಿನ್	F. ಭಾರತದ ಚಕ್ರವರ್ತಿ
7. ಡಾಂಟೆ	G. ಬ್ರಿಟನ್ನಿನ ರಾಜಕಾರಣಿ
8. ಶ್ರೀಕೃಷ್ಣದೇವರಾಯ	H. ಪ್ರಸಿದ್ಧ ಭೌಗೋಳಿಕ ಸಂಶೋಧಕ
9. ಗೆಲಿಲಿಯೊ ಗೆಲಿಲಿ	I. ವಿಜಯನಗರದ ಅರಸ
10. ನೃಪತುಂಗ	J. ಇಟಲಿಯ ಮಹಾಕವಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಹಿಗ್ಗು

1. ಕಾಪಾಡು 2. ಹಾಯಿಸು
3. ಪರೋಕ್ಷ 4. ಬಗ್ಗಡ
5. ಕಣ್ಣಾರೆ 6. ಬಡಿಗೆ
7. ಚರಂಡಿ 8. ಮಲಗು

ಅದಲು ಬದಲು ಕಂಚಿ ಕದಲು

1. ವರದಾನ 2. ಸುಗುಣಿ
3. ಸತಿ ಸಹಗಮನ 4. ಪರಿಣತಿ

ಟ್ವೆಂಟಿ – 20 ಮ್ಯಾಚ್

A. 1-G 2-A 3-E 4-I 5-C 6-J 7-H 8-B 9-F 10-D

B. 1-I 2-E 3-D 4-H 5-B 6-G 7-F 8-C 9-J 10-A

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ವಿಕಾಸ ಕಳ್ಳಿಗುದ್ದಿ ರಬಕವಿ
ಬಾಗಲಕೋಟೆ



ಕೆ.ವಿ. ಎನ್. ಬುದ್ಧದಾಸ್
ಕೆ.ಆರ್. ಪೇಟೆ (ಮಂಡ್ಯ)



ಶ್ರಾವಣಿ ಸಿ.
ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:

majakoora@prajavani.co.in

ರಂಗಮಂಚ ಏರಿ ಬಂದ ಸಂವಿಧಾನ 'ಜ್ಯೋತಿ'

ಶ್ರೇಯಸ್ ಜಿ. ಕೋಟ್ಯಾನ್

ರಂಗಭೂಮಿ

ಉಡುಪಿಯ ರಥಬೀದಿ ಗೆಳೆಯರು ಸಾಂಸ್ಕೃತಿಕ ವೇದಿಕೆಯ ಆಶ್ರಯದಲ್ಲಿ ನಡೆದ ಮುರಾರಿ ಕೆದ್ಲಾಯ ರಂಗೋತ್ಸವದಲ್ಲಿ ಎಂಜಿಎಂ ಕಾಲೇಜಿನ ಮುದ್ದಣ ಮಂಟಪವು ಮೂರು ವಿಭಿನ್ನ ರಂಗಪ್ರಯೋಗಗಳಿಗೆ ಸಾಕ್ಷಿಯಾಗಿದೆ. ಇಲ್ಲಿ ಪ್ರದರ್ಶನಗೊಂಡ ಎರಡು ಕನ್ನಡ ಮತ್ತು ಒಂದು ಮಲಯಾಳಂ ನಾಟಕಗಳಲ್ಲಿ ಸಂವಿಧಾನ, ಸ್ತ್ರೀ ಅಸ್ಮಿತೆ ಮತ್ತು ಮಾನವಹಕ್ಕುಗಳ ಕುರಿತು ಜೀವಪರ ಹಾಗೂ ವೈಚಾರಿಕ ವಾದ ಕಾಣಬಹುದು. ಆಶಯದಲ್ಲಿ ದೃಢತೆ ಮತ್ತು ಆಕಾರದಲ್ಲಿ ಸೃಜನಶೀಲತೆಯಿಂದ ಪ್ರೇಕ್ಷಕರ ಗಮನ ಸೆಳೆದ ಈ ನಾಟಕಗಳು, ಎಲ್ಲರಲ್ಲಿ ಹೊಸ ಪ್ರಶ್ನೆ ಹಾಗೂ ಆಲೋಚನೆಗಳನ್ನು ಹುಟ್ಟುಹಾಕಿವೆ.

ವಿ ದ ಪೀಪಲ್ ಆಫ್ ಇಂಡಿಯಾ

ರಂಗೋತ್ಸವದ ಮೊದಲ ದಿನ ಪ್ರದರ್ಶನಗೊಂಡ ನಾಟಕ ರಂಗಾಯಣ ಶಿವಮೊಗ್ಗದ ಕಲಾವಿದರು ಅಭಿನಯಿಸಿದ 'ವಿ ದ ಪೀಪಲ್ ಆಫ್ ಇಂಡಿಯಾ'. ಹಿರಿಯ ಸಾಹಿತಿ ರಾಜಪ್ಪ ದಳವಾಯಿ ಅವರು ರಚಿಸಿರುವ ಈ ನಾಟಕವನ್ನು ಯುವರಂಗ ನಿರ್ದೇಶಕರಾದ ಲಕ್ಷ್ಮಣ ಕೆ.ಪಿ. ಅವರು ನಿರ್ದೇಶಿಸಿದ್ದಾರೆ. ಸಂವಿಧಾನದ ಮೂಲತತ್ವ ಮತ್ತು ಆಶಯಗಳನ್ನು ಸಾಮಾನ್ಯರಲ್ಲಿ ಸಾಮಾನ್ಯರಿಗೆ ತಲುಪಿಸುವ ಪ್ರಯತ್ನ ಈ ನಾಟಕ. ಈ ಪ್ರಯೋಗ ಪ್ರಸ್ತುತ ಕಾಲಘಟ್ಟದ ತುರ್ತು ಅಗತ್ಯ.

ನಾಟಕದ ನಿರ್ದೇಶಕರೇ ಹೇಳುವಂತೆ, ನಮಗೆ ರಾಮಾಯಣ-ಮಹಾಭಾರತದ ಕಥೆಗಳಿಗಿಂತ ಹೆಚ್ಚು ಸಂವಿಧಾನ ತಿಳಿದಿರಬೇಕು. ಅದರಲ್ಲಿರುವ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವ ಇವತ್ತಿನ ಎಲ್ಲಾ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ. ಆದರೆ ಸಂವಿಧಾನವನ್ನು ಎಲ್ಲರಿಗೆ ಅರ್ಥ ಆಗುವಂತೆ ಸಾಮಾನ್ಯಗೊಳಿಸುವುದು ಮತ್ತು ಅದನ್ನು ರಂಗಭೂಮಿಯಂತಹ ಕ್ರಿಯಾಶೀಲ ಮಾಧ್ಯಮದ ಚೌಕಟ್ಟಿಗೆ ತರುವುದು ಸುಲಭದ ಕೆಲಸವಲ್ಲ. ಈ ಸವಾಲಿನ ಕೆಲಸವನ್ನು



'ಐ ಡ್ರೀಮ್ ಬಿಫೋರ್ ಐ ಟೇಕ್ ದಿ ಸ್ಟ್ಯಾಂಡ್' ನಾಟಕದ ನೋಟ

ನೆರವೇರಿಸುವಲ್ಲಿ ತಂಡ ಗೆದ್ದಿದೆ. ನಮ್ಮೊಳಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಶಿಕ್ಷಣದ ಹಸಿವನ್ನು ನಿಯಂತ್ರಿಸಿ ಕೂತಿರುವ ಅಂಬೇಡ್ಕರ್‌ತನವನ್ನು ಉದ್ದೀಪಿಸಲು ನಾಟಕ ಪ್ರಯತ್ನಿಸಿದೆ.

ಸಂವಿಧಾನ ಮತ್ತು ಅಂಬೇಡ್ಕರ್ ಅವರಲ್ಲಿರುವ ತಾಯಿತನ ಈ ನಾಟಕದ ಕೇಂದ್ರ ಕಥಾವಸ್ತು. ಸಂವಿಧಾನ ರಚನೆಯ ಕುರಿತು ಅಂಬೇಡ್ಕರ್ ಅವರಿಗಿದ್ದ ಕಾಳಜಿಯ ಜೊತೆ ಜೊತೆಗೆ ಸಂವಿಧಾನದ ಪೀಠಿಕೆ, ಕರಡು ರಚನಾ ಸಮಿತಿಯ ಚರ್ಚೆ ಮತ್ತು ಇದರಲ್ಲಿ ಸ್ತ್ರೀಯರು ವಹಿಸಿದ ಪಾತ್ರವನ್ನು ದೃಶ್ಯ ರೂಪಕದಲ್ಲಿ ನಾಟಕ ಕಟ್ಟಿಕೊಟ್ಟಿದೆ. ಇದರ ಜೊತೆಗೆ ಸ್ತ್ರೀ ಅಸ್ಮಿತೆಯನ್ನೂ ಎತ್ತಿಹಿಡಿಯುತ್ತದೆ. ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಕುರಿತೂ ನೇರ ಪ್ರಖರ ದನಿಯಲ್ಲಿ ನಾಟಕ ಪ್ರಶ್ನಿಸುತ್ತದೆ.

ಇಲ್ಲಿ ನಿರ್ದೇಶಕರು ಪೂರ್ಣರೀತಿಯಲ್ಲಿ ರಂಗಭೂಮಿಯ ವ್ಯಾಕರಣಕ್ಕೆ ಬದ್ಧರಾಗಿರದೆ, ಕೆಲವು ವಿಚಾರಗಳನ್ನು ನೇರ ಮಾತುಗಳಿಂದ ಸ್ಪಷ್ಟಪಡಿಸಿದ್ದಾರೆ. ವೇದಿಕೆಯ ಬಂಧನವನ್ನು ಮೀರಿ ಜನರ ನಡುವಿಗೆ ಬಂದು ಜನರನ್ನು ಪ್ರಶ್ನಿಸಿದ ರೀತಿ ಬಹಳ ಪರಿಣಾಮಕಾರಿಯಾಗಿತ್ತು. ಜೊತೆಗೆ ರಂಗ ಸಂಗೀತ ನಾಟಕಕ್ಕೆ ಕಾವ್ಯಾತ್ಮಕ ಗುಣ ನೀಡಿತು. ಈ ರಂಗಪ್ರಯೋಗ ಪ್ರತೀ ಶಾಲಾ-ಕಾಲೇಜು, ದೇವಸ್ಥಾನ, ಮಸೀದಿ, ಚರ್ಚ್ ಮತ್ತು ಊರಿನಲ್ಲಿ ಪ್ರದರ್ಶನವಾಗಬೇಕು.



'ವಿ ದಿ ಪೀಪಲ್ ಆಫ್ ಇಂಡಿಯಾ'ದ ದೃಶ್ಯ

ಐ ಡ್ರೀಮ್ ಬಿಫೋರ್ ಐ ಟೇಕ್ ದಿ ಸ್ಟ್ಯಾಂಡ್

ಸಮಾಜ ಎಷ್ಟೇ ಮುಂದುವರಿದರೂ ಹೆಣ್ಣಿನ ಸ್ಥಿತಿಯಲ್ಲಿ ಹೆಚ್ಚು ಬದಲಾವಣೆ ಆಗಲಿಲ್ಲ. ಅತ್ಯಾಚಾರಕ್ಕೆ ಒಳಗಾದ ಹೆಣ್ಣೊಬ್ಬಳು ಸಮಾಜದಿಂದ ಎದುರಿಸುವ ಪ್ರಶ್ನೆಗಳು ಮತ್ತೆ ಮತ್ತೆ ಅವಳ ಮೇಲೆ ನಡೆಯುವ ಮಾನಸಿಕ ಅತ್ಯಾಚಾರವೇ. ಇಂತಹ ಸೂಕ್ಷ್ಮ ಮತ್ತು ಅಷ್ಟೇ ಗಂಭೀರವಾದ ವಿಚಾರವನ್ನು ಕೇಂದ್ರೀಕರಿಸಿಕೊಂಡ ನಾಟಕ 'ಐ ಡ್ರೀಮ್ ಬಿಫೋರ್ ಐ ಟೇಕ್ ದಿ ಸ್ಟ್ಯಾಂಡ್'. ಅರ್ಲೆನ್ ಹಟನ್ ಅವರ ಈ ಫೆಮಿನಿಸ್ಟ್ ಕ್ಲಾಸಿಕ್ ರಂಗಪಠ್ಯವನ್ನು ಪ್ರತಿಭಾ ನಂದಕುಮಾರ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಸಾಲಿಯಾನ್ ಉಮೇಶ್ ನಾರಾಯಣ್ ಅವರ ನಿರ್ದೇಶನದಲ್ಲಿ ನಾಟ್ಯಶಿವ ಮೈಸೂರು ತಂಡ ಇದನ್ನು ಪ್ರಸ್ತುತಪಡಿಸಿದೆ.

ಅಮೆರಿಕ ಮೂಲದ ಈ ನಾಟಕ ನೇರವಾಗಿ ಕನ್ನಡಕ್ಕೆ ಅನುವಾದಗೊಂಡಿದೆ. ಆದರೂ ಇದು ಭಾರತದ ಕಥೆಯೇ ಎಂಬಂತೆ ಭಾಸವಾಗುತ್ತದೆ. ಇದಕ್ಕೆ ಕಾರಣ ಹೆಣ್ಣು ಅನುಭವಿಸುವ ಕಷ್ಟ ಸಾರ್ವತ್ರಿಕವಾದದ್ದು ಎನ್ನುವುದು. ಎರಡನೆಯದಾಗಿ, ನಾಟಕದಲ್ಲಿ ಅತ್ಯಾಚಾರಕ್ಕೆ ಒಳಗಾದ ಹೆಣ್ಣನ್ನು ಪ್ರಶ್ನಿಸುವ ವಕೀಲ ಒಂದು ರೂಪಕ ಮಾತ್ರ. ಅವನು ಆಡುವ ಪ್ರತಿಯೊಂದು ಮಾತೂ ಪುರುಷಪ್ರಧಾನ ಸಮಾಜ ಒಂದು ಹೆಣ್ಣಿನ ಮೇಲೆ ನಿರಂತರವಾಗಿ ಎಸೆಯುವ ಪ್ರಶ್ನೆಗಳಿಗೆ ಹಿಡಿದ ಕನ್ನಡಿ.

ನಾಟಕದಲ್ಲಿದ್ದದ್ದು ಎರಡೇ ಪಾತ್ರಗಳು. ಅಸಾಧಾರಣ ಸವಾಲುಗಳು ಇರುವ ಈ ಪಾತ್ರಗಳನ್ನು ನಟರಾದ ಜಾಹಿದಾ ಮತ್ತು ಯತೀಶ್ ಕೊಳ್ಳೇಗಾಲ ಪೂರ್ಣ ರೀತಿಯಲ್ಲಿ ಜೀವಿಸಿದ್ದಾರೆ. ಇದೊಂದು ಬಹಳ ಬೋಲ್ಡ್ ಆಗಿರುವ ರಂಗಪಠ್ಯ. ಸಂಭಾಷಣೆಯಲ್ಲಿ ನೇರವಾಗಿ ಒಳ ಉಡುಪು ಮತ್ತು ಖಾಸಗಿ ಭಾಗಗಳ ವಿಚಾರಗಳನ್ನು ಎತ್ತಿಕೊಳ್ಳಲಾಗಿದೆ. ಇದು ಕೆಲವು ಜನರಿಗೆ ಮುಜುಗರ ತಂದಿರಬಹುದು. ಆದರೆ ವಿಷಯದ ತೀವ್ರತೆಯನ್ನು ನಮ್ಮೊಳಗೆ ಇಳಿಸಲು ಇಂತಹ ನೇರ ಸಂಭಾಷಣೆಗಳ ಅವಶ್ಯಕತೆ ಇದೆ. ಈ ನಾಟಕ ಮತ್ತು ಅವರ ಮಾತುಗಳು ನಮ್ಮನ್ನು ಕಾಡಬೇಕು, ಹೊರತಾಗಿ ನಮ್ಮಲ್ಲಿ ಮುಜುಗರ ಹುಟ್ಟಿಸಬಾರದು.

ಬೊಲಿವಿಯನ್ ಸ್ಟಾರ್ಸ್

ಕೇರಳದಲ್ಲಿ ಫುಟ್‌ಬಾಲ್ ಕೇವಲ ಒಂದು ಕ್ರೀಡೆ ಯಲ್ಲ. ಅದು ಅಲ್ಲಿನ ಜನರ ಭಾವನೆಗಳಲ್ಲಿ ಬೆರೆತ ಉತ್ಸಾಹ. ಈ ಕ್ರೀಡಾ ಉತ್ಸಾಹ ಸೃಷ್ಟಿಸಿದ್ದು ಮೂರನೇ ದಿನದ 'ಬೊಲಿವಿಯನ್ ಸ್ಟಾರ್ಸ್' ನಾಟಕ. ಪಿ.ವಿ. ಶಾಜಿಕುಮಾರ್ ಅವರ ಕತೆ ಆಧಾರಿತ, ಅರುಣ್ ಲಾಲ್ ಅವರ ನಿರ್ದೇಶನದಲ್ಲಿ ಲಿಟಲ್ ಅರ್ಥ್ ಥಿಯೇಟರ್ ಅವರು ಅಭಿನಯಿಸಿರುವ ಈ ರಂಗಪ್ರಯೋಗ ಬಹಳ ವಿಶೇಷವಾದದ್ದು.

ಈ ನಾಟಕ ಫುಟ್‌ಬಾಲ್ ತಂಡದ 7 ಜನ ಆಟಗಾರರ ಸುತ್ತ ಸುತ್ತುವ ಕಥೆ. ಕ್ರೀಡೆಯ ಮುಖಾಂತರ ರಂಗದಮೇಲೆ ಸೃಷ್ಟಿಯಾದ ಎನರ್ಜಿ ಸ್ಪೇಸ್ ಅನ್ನು ಬಳಸಿ ಮಾನವ ಹಕ್ಕುಗಳಿಗೆ ಸಂಬಂಧಿಸಿದ ವಿಚಾರಗಳನ್ನು ಜನರಿಗೆ ಹಾಸ್ಯದೊಡನೆ ತಲುಪಿಸಲಾಗಿದೆ. ಎಷ್ಟೇ ಗಂಭೀರ ಸ್ಥಿತಿಯಲ್ಲಿಯೂ ನಾಟಕ ತನ್ನ ಹಾಸ್ಯದ ಸ್ವರೂಪವನ್ನು ಕಳೆದುಕೊಳ್ಳಲಿಲ್ಲ. ಹಾಗೆಯೆ ಹಾಸ್ಯ ಎಲ್ಲಿಯೂ ನಾಟಕದ ಗಾಂಭೀರ್ಯಕ್ಕೆ ಚ್ಯುತಿ ತರಲಿಲ್ಲ. ಇದು ನಿರ್ದೇಶಕರಾದ ಅರುಣ್ ಲಾಲ್ ಅವರ ಕ್ರಿಯಾಶೀಲತೆಗೆ ಸಾಕ್ಷಿ. ರಂಗದ ಮೇಲೆ ಬರುವ ಏಳು ಪಾತ್ರಗಳನ್ನು ಫುಟ್‌ಬಾಲ್‌ನ ಏಳು ದಂತಕಥೆಗಳ ಜೊತೆಗೆ ಸಮೀಕರಿಸಿ ಐಡೆಂಟಿಟಿ ಕ್ರೈಸಿಸ್ ಕುರಿತಾಗಿ ನಾಟಕ ಮಾತನಾಡುತ್ತದೆ. ಮಲ್ಲಂಪುರ ನಿವಾಸಿಗಳಾದ ಈ ಪಾತ್ರಗಳಿಗೆ 'ದಿ ಸೆವೆನ್ ಫುಟ್‌ಬಾಲ್' ಎಂಬ ಕ್ರೀಡಾಸ್ಪರ್ಧೆ ತಮ್ಮ ಅಸ್ತಿತ್ವಕ್ಕೆ ಸಂಬಂಧಪಟ್ಟ ವಿಚಾರ. ಅವರಿಗೆ, ಈ ಸರಣಿಯನ್ನು ಗೆಲ್ಲುವುದು ಸಮಾಜ ತಮ್ಮ ಮೇಲೆ ಎಸೆದ ಅನೇಕ ವಿಲಕ್ಷಣಗಳನ್ನು ಗೆಲ್ಲುವ ಸಾಂಕೇತಿಕ ಮಾರ್ಗ.

ಅದ್ಭುತ ಸಂಗೀತ ಮತ್ತು ಕ್ರಿಸ್ಟೋಫರ್ ನೀನಾಸಮ್ ಅವರ ಬೆಳಕಿನ ವಿನ್ಯಾಸದ ಮೂಲಕ ಈ ನಾಟಕ ಪ್ರೇಕ್ಷಕರಿಗೆ ಒಂದು ಹೈ ಸ್ಪಿರಿಟೆಡ್ ಮ್ಯಾಚ್ ನೋಡಿದಷ್ಟೇ ಉತ್ಸಾಹ ನೀಡಿದೆ.

ನಾಟಕ ಕೊನೆಗೊಳ್ಳುವ ರೀತಿ ಬಹಳ ವಿಶೇಷ. ಈ ಬೊಲಿವಿಯನ್ ಸ್ಟಾರ್ಸ್ ತಂಡದ ಅಂತಿಮ ಮ್ಯಾಚ್‌ನಲ್ಲಿ ಅವರ ಎದುರಾಳಿಗಳು ಆಗಿರುವುದು ಅವರ ವೈಯಕ್ತಿಕ ಜೀವನದ ಸಂಘರ್ಷಗಳೇ. ಈ ಎಲ್ಲಾ ಸಾಮಾಜಿಕ ಅನಿಷ್ಟಗಳನ್ನು ಗೋಲ್ ಪೋಸ್ಟ್ ಒಳಗೆ ಎಸೆಯುವುದರ ಮೂಲಕ ಅವರು ಅಂತಿಮ ಸ್ಪರ್ಧೆಯನ್ನು ಗೆಲ್ಲುತ್ತಾರೆ. ಪ್ರತಿರೋಧ ಮತ್ತು ಕ್ರಾಂತಿಯ ಪಾಠ ಕಲಿಯುತ್ತಾರೆ. ಪ್ರತಿಯೊಂದು ಪಾತ್ರವೂ ತನ್ನದೇ ಆದ ಪ್ರತ್ಯೇಕತೆಯನ್ನು ಗುರುತಿಸುವ ಜೊತೆಗೆ ಸುಸಂಘಟಿತ ಗುಂಪಿನ ಬಲದಿಂದ ಸಾಮಾಜಿಕ ಅಸಮಾನತೆಯನ್ನು ಮೀರಿ ನಿಲ್ಲುತ್ತದೆ. ಪ್ರಸ್ತುತ ಕಾಲಘಟ್ಟದಲ್ಲಿ ಆಗಬೇಕಾಗಿರುವುದೂ ಇದೇ. ಇವತ್ತು ನಮ್ಮ ಎಲ್ಲಾ ಸಾಮಾಜಿಕ ಅನ್ಯಾಯಗಳು ಕೊನೆಗೊಳ್ಳಲು ಸಂವಿಧಾನ ನಮ್ಮ ಗೋಲ್ ಪೋಸ್ಟ್ ಆಗಬೇಕು ಅಷ್ಟೇ. ಮೂರು ನಾಟಕಗಳು ಒಂದಕ್ಕಿಂತ ಒಂದು ವಿಭಿನ್ನವಾಗಿದ್ದರೂ ಅವುಗಳು ಆಶಯದಲ್ಲಿ ಪರಸ್ಪರ ಬೆಸೆದುಕೊಂಡಿದ್ದವು. ಈ ಅತ್ಯುತ್ತಮ ನಾಟಕಗಳ ಪ್ರದರ್ಶನ ಆಯೋಜಿಸಿದ ರಥಬೀದಿ ಗೆಳೆಯರಿಗೆ ಅಭಿನಂದನೆಗಳು. ವಿಶೇಷವಾಗಿ ನಾಟಕದ ನಂತರ ಮರದ ಕಟ್ಟೆಯಲ್ಲಿ ನಡೆದ ನಿರ್ದೇಶಕರ ಜೊತೆ ಅನೌಪಚಾರಿಕ ಸಂವಾದ ಗಮನಾರ್ಹವಾಗಿತ್ತು.

ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿ: ದಾಖಲೆಯ ಜೊತೆಯಾಟ; ಗರಿಷ್ಠ ಮೊತ್ತದ ಸಾಧನೆ

ಸ್ಮೃತಿ, ಕೌರ್ ಶತಕ: ಭಾರತಕ್ಕೆ ಜಯದ ಪುಳಕ

ಹ್ಯಾಮಿಲ್ಟನ್, ನ್ಯೂಜಿಲೆಂಡ್ (ಪಿಟಿಐ): ಮೊದಲ ಎರಡು ಪಂದ್ಯಗಳಲ್ಲಿ ನಿರೀಕ್ಷಿತ ಸಾಮರ್ಥ್ಯ ತೋರಲು ವಿಫಲರಾದ ಸ್ಮೃತಿ ಮಂದಾನ ಮತ್ತು ಹರ್ಮನ್‌ಪ್ರೀತ್ ಕೌರ್ ಶನಿವಾರ ಸೆಡಾನ್ ಪಾರ್ಕ್‌ನಲ್ಲಿ ಮಿಂಚಿದರು. ಅವರಿಬ್ಬರ ಶತಕದ ಜೊತೆಯಾಟದ ಬಲದಿಂದ ಭಾರತ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ವೆಸ್ಟ್ ಇಂಡೀಸ್ ಎದುರು ಭಾರಿ ಜಯ ಸಾಧಿಸಿತು.

ಮೊದಲ ಪಂದ್ಯದಲ್ಲಿ ಪಾಕಿಸ್ತಾನವನ್ನು ಮಣಿಸಿದರೂ ನಂತರ ನ್ಯೂಜಿಲೆಂಡ್ ವಿರುದ್ಧ 62 ರನ್‌ಗಳ ಸೋಲುಂಡ ಮಿಥಾಲಿ ರಾಜ್ ಬಳಗ ಶನಿವಾರ 155 ರನ್‌ಗಳಿಂದ ಗೆದ್ದಿತು. ಇದು ವಿಶ್ವಕಪ್‌ನಲ್ಲಿ ತಂಡದ ಎರಡನೇ ಅತಿದೊಡ್ಡ ಗೆಲುವು. ಇದರೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ತಂಡ ಅಗ್ರ ಸ್ಥಾನಕ್ಕೇರಿತು.

318 ರನ್‌ಗಳ ಜಯದ ಗುರಿ ಬೆನ್ನತ್ತಿದ ವೆಸ್ಟ್ ಇಂಡೀಸ್ ಕೇವಲ 40.3 ಓವರ್‌ಗಳಲ್ಲಿ 162 ರನ್‌ಗಳಿಗೆ ಪತನ ಕಂಡಿತು. ಮೊದಲ ವಿಕೆಟ್‌ಗೆ 100 ರನ್‌ಗಳ ಜೊತೆಯಾಟವಾಡಿದ ಡಿಯಾಂಡ್ರ ದೊತಿನ್ ಮತ್ತು ಹೇಲಿ ಮ್ಯಾಥ್ಯೂಸ್ ವಿಂಡೀಸ್ ಬಳಗದಲ್ಲಿ ಭರವಸೆ ಮೂಡಿಸಿದ್ದರು. ದೊತಿನ್ ವಿಕೆಟ್ ಉರುಳಿಸುವ ಮೂಲಕ ಸ್ನೇಹ್ ರಾಣಾ ಭಾರತ ಪಾಳಯದಲ್ಲಿ ಸಂಭ್ರಮ ಮೂಡಿಸಿದರು.

ನಂತರ 12 ರನ್ ಸೇರಿಸುವಷ್ಟರಲ್ಲಿ ವೆಸ್ಟ್ ಇಂಡೀಸ್ ನಾಯಕಿ ಸ್ಟೆಫಾನಿ ಟೇಲರ್ ಸೇರಿದಂತೆ ಇಬ್ಬರ ವಿಕೆಟ್ ಕಳೆದುಕೊಂಡಿತು. ಈ ಎರಡೂ ವಿಕೆಟ್‌ಗಳು ಮೇಘನಾ ಸಿಂಗ್ ಅವರ ಪಾಲಾದವು. ಹೇಲಿ ಮ್ಯಾಥ್ಯೂ ಅವರ ವಿಕೆಟ್ ಕೂಡ ಕಬಳಿಸುವ ಮೂಲಕ ಸ್ನೇಹ್ ರಾಣಾ ವೆಸ್ಟ್ ಇಂಡೀಸ್ ತಂಡದ ಸಂಕಷ್ಟ ಮತ್ತಷ್ಟು ಹೆಚ್ಚಿಸಿದರು. ಮಧ್ಯಮ ಮತ್ತು ಕೆಳಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಿಗೆ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲು ಆಗಲಿಲ್ಲ.

ಮಂದಾನ–ಹರ್ಮನ್‌ಪ್ರೀತ್ ದಾಖಲೆ ಜೊತೆಯಾಟ: ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಭಾರತಕ್ಕೆ ಸ್ಮೃತಿ ಮತ್ತು ಯಾಷ್ಟಿಕಾ ಭಾಟಿಯಾ ಉತ್ತಮ ಆರಂಭ ಒದಗಿಸಿದರು.



ಹರ್ಮನ್‌ಪ್ರೀತ್ ಕೌರ್

ಆದರೆ ಯಾಷ್ಟಿಕಾ ಔಟಾದ ನಂತರ ಸತತವಾಗಿ ಮೂರು ವಿಕೆಟ್ ಉರುಳಿದವು. ಈ ಸಂದರ್ಭದಲ್ಲಿ ಜೊತೆಗೂಡಿದ ಸ್ಮೃತಿ ಮತ್ತು ಹರ್ಮನ್‌ಪ್ರೀತ್ ಕೌರ್ ಭರ್ಜರಿ ಆಟವಾಡಿದರು.

ಸ್ಮೃತಿ ವೈಯಕ್ತಿಕ ಐದನೇ ಶತಕ ಪೂರೈಸಿದರು. 123 ರನ್ ಗಳಿಸಲು ಅವರು ತೆಗೆದುಕೊಂಡದ್ದು ಕೇವಲ 119 ಎಸೆತ. 13 ಬೌಂಡರಿ ಮತ್ತು ಎರಡು ಸಿಕ್ಸರ್ ಸಿಡಿಸಿದ ಅವರು ತಂಡದ ಮೊತ್ತ 250ರ ಗಡಿ ದಾಟಿದ ನಂತರ ಔಟಾದರು. 10 ಬೌಂಡರಿ ಮತ್ತು ಎರಡು ಸಿಕ್ಸರ್‌ಗಳೊಂದಿಗೆ 107 ಎಸೆತಗಳಲ್ಲಿ 109 ರನ್ ಗಳಿಸಿದ ಹರ್ಮನ್‌ಪ್ರೀತ್ ಕೌರ್ ನಾಲ್ಕನೇ ಶತಕದ ಸಾಧನೆ ಮಾಡಿದರು. 2017ರ ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ 171 ರನ್ ಗಳಿಸಿದ ನಂತರ ಕೌರ್ ಅವರ ಮೊದಲ ಶತಕ ಇದು.

ನಾಲ್ಕನೇ ವಿಕೆಟ್‌ಗೆ ಇವರಿಬ್ಬರು ಸೇರಿಸಿದ 184 ರನ್‌ಗಳು ವಿಶ್ವಕಪ್‌ನಲ್ಲಿ ಯಾವುದೇ ವಿಕೆಟ್‌ಗೆ ಭಾರತದ ಅತಿದೊಡ್ಡ ಜೊತೆಯಾಟವಾಗಿದೆ. 317 ರನ್‌ಗಳು ಮಹಿಳಾ ವಿಶ್ವಕಪ್‌ನಲ್ಲಿ ಭಾರತದ ಗರಿಷ್ಠ ಸ್ಕೋರ್ ಆಗಿದೆ.



ಸ್ಮೃತಿ ಮಂದಾನ – ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಭಾರತ 8ಕ್ಕೆ 317 (50 ಓವರ್)

ಸ್ಮೃತಿ ಸಿ ಸೆಲ್ಮನ್ ಬಿ ಕಾನೆಲ್ 123 (119 ಎ, 4x13, 6x2), ಯಾಷ್ಟಿಕಾ ಸಿ ಮತ್ತು ಬಿ ಸೆಲ್ಮನ್ 31 (21 ಎ, 4x6), ಮಿಥಾಲಿ ಸಿ ಕಾನೆಲ್ ಬಿ ಮ್ಯಾಥ್ಯೂಸ್ 5 (11 ಎ, 4x1), ದೀಪ್ತಿ ಸಿ ಮ್ಯಾಥ್ಯೂಸ್ ಬಿ ಮೊಹಮ್ಮದ್ 15 (21 ಎ, 4x2), ಹರ್ಮನ್‌ಪ್ರೀತ್ ಸಿ ಕ್ಯಾಂಬೆಲ್ ಬಿ ಅಲೀನ್ 109 (107 ಎ, 4x10, 6x2), ರಿಚಾ ರನೌಟ್ (ಮ್ಯಾಥ್ಯೂಸ್/ಕ್ಯಾಂಬೆಲ್) 5 (10 ಎ), ಪೂಜಾ ಸಿ ಮ್ಯಾಥ್ಯೂಸ್ ಬಿ ಮೊಹಮ್ಮದ್ 10 (5 ಎ, 4x2), ಜೂಲನ್ ಸಿ ಮೊಹಮ್ಮದ್ ಬಿ ದೊತಿನ್ 2 (5 ಎ), ಸ್ನೇಹ್ ಔಟಾಗದೆ 2 (2 ಎ), ಮೇಘನಾ ಔಟಾಗದೆ 1 (3 ಎ)

ಇತರೆ (ನೋಬಾಲ್ 4, ವೈಡ್ 10) 14

ವಿಕೆಟ್ ಪತನ: 1-49 (ಯಾಷ್ಟಿಕಾ ಭಾಟಿಯ, 6.3), 2-58 (ಮಿಥಾಲಿ, 9.3), 3-78 (ದೀಪ್ತಿ ಶರ್ಮಾ, 13.5), 4-262 (ಸ್ಮೃತಿ ಮಂದಾನ, 42.3), 5-290 (ರಿಚಾ ಘೋಷ್, 46.2), 6-311 (ಪೂಜಾ ವಸ್ತ್ರಕರ್, 47.6), 7-313 (ಹರ್ಮನ್‌ಪ್ರೀತ್ ಕೌರ್, 48.4), 8-315 (ಜೂಲನ್ ಗೋಸ್ವಾಮಿ, 49.2)

ಬೌಲಿಂಗ್: ಶಮಿಲಿಯಾ ಕಾನೆಲ್ 10–0–57–1, ಚಿನೆಲಿ ಹೆನ್ರಿ 2–0–19–0, ಹೇಲಿ ಮ್ಯಾಥ್ಯೂಸ್ 10–0–65–1, ಶಕೀರ ಸೆಲ್ಮನ್ 7–0–41–1, ಅನಿಸಾ ಮೊಹಮ್ಮದ್ 9–0–59–2, ಡಿಯಾಂಡ್ರ ದೊತಿನ್ 5–0–32–1, ಸ್ಟೆಫಾನಿ ಟೇಲರ್ 3–0–18–0, ಅಲಿಯಾ ಅಲೀನ್ 4–0–26–1

ವೆಸ್ಟ್ ಇಂಡೀಸ್ 162 (40.3 ಓವರ್)

ಡಿಯಾಂಡ್ರ ಸಿ ಮೇಘನಾ ಬಿ ಸ್ನೇಹ್ 62 (46 ಎ, 4x10, 6x1, ಹೇಲಿ ಸಿ ರಿಚಾ ಬಿ ಸ್ನೇಹ್ 43 (36 ಎ, 4x6), ಕಿಸಿಯಾ ಸಿ ಸ್ಮೃತಿ ಬಿ ಮೇಘನಾ 5 (15 ಎ, 4x1), ಸ್ಟೆಫಾನಿ ಸಿ ರಿಚಾ ಬಿ ಮೇಘನಾ 1 (10 ಎ), ಶೆಮೈನ್ ಸಿ ರಾಜೇಶ್ವರಿ ಬಿ ವಸ್ತ್ರಕರ್ 11 (17 ಎ, 4x1), ಚೆಡೀನ್ ರನೌಟ್ (ಮೇಘನಾ/ದೀಪ್ತಿ 19 (48 ಎ, 4x1), ಚಿನೆಲಿ ಎಲ್‌ಬಿಡಬ್ಲ್ಯು ಬಿ ರಾಜೇಶ್ವರಿ 7 (6 ಎ, 4x1), ಅಲಿಯಾ ರನೌಟ್ (ರಾಜೇಶ್ವರಿ/ಸ್ನೇಹ್ 4 (10, 4x1), ಅನಿಸಾ ಸಿ (ಬದಲಿ ಆಟಗಾರ್ತಿ ತಾನಿಯಾ) ಬಿ ಜೂಲನ್ 2 (27 ಎ), ಶಕೀರಾ ಔಟಾಗದೆ 7 (21 ಎ), ಶಮಿಲಿಯಾ ಸಿ ಮತ್ತು ಬಿ ಸ್ನೇಹ್ 0 (7 ಎ)

ಇತರೆ (ಲೆಗ್‌ಬೈ 1) 1

ವಿಕೆಟ್ ಪತನ: 1-100 (ಡಿಯಾಂಡ್ರ ದೊತಿನ್, 12.2), 2-108 (ಕಿಸಿಯಾ ನೈಟ್, 15.2), 3-112 (ಸ್ಟೆಫಾನಿ ಟೇಲರ್, 17.4), 4-114 (ಹೇಲಿ ಮ್ಯಾಥ್ಯೂಸ್, 18.2), 5-127 (ಶೆಮೈನ್ ಕ್ಯಾಂಬೆಲ್, 22.2), 6-134 (ಚಿನೇಲಿ ಹೆನ್ರಿ, 23.2), 7-145 (ಅಲಿಯಾ ಅಲೀನ್, 26.5), 8-155 (ಅನಿಸಾ ಮೊಹಮ್ಮದ್, 35.5), 9-157 (ಚೆಡೀನ್ ನೇಷನ್, 36.3), 10-162 (ಶಮಿಲಿಯಾ ಕಾನೆಲ್, 40.3)

ಬೌಲಿಂಗ್: ಜೂಲನ್ ಗೋಸ್ವಾಮಿ 6–1–43–1, ಮೇಘನಾ ಸಿಂಗ್ 6–0–27–2, ದೀಪ್ತಿ ಶರ್ಮಾ 7–2–24–0, ರಾಜೇಶ್ವರಿ ಗಾಯಕವಾಡ್ 10–3–24–1, ಪೂಜಾ ವಸ್ತ್ರಕರ್ 2–0–21–1, ಸ್ನೇಹ್ ರಾಣಾ 9.3–1–22–3

ಫಲಿತಾಂಶ: ಭಾರತ ಮಹಿಳಾ ತಂಡಕ್ಕೆ 155 ರನ್‌ಗಳ ಜಯ

ಹಾಕಿ: ಜರ್ಮನಿಗೆ ಮಣಿದ ಭಾರತ

ಭುವನೇಶ್ವರ್ (ಪಿಟಿಐ): ಭಾರತ ಮಹಿಳೆಯರ ಹಾಕಿ ತಂಡ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ ಜರ್ಮನಿಗೆ ಮಣಿಯಿತು. ಲೀಗ್‌ನಲ್ಲಿ ತಂಡಕ್ಕೆ ಇದು ಸತತ ಎರಡನೇ ಸೋಲು.

ಕಳಿಂಗ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದ ಶೂಟೌಟ್‌ನಲ್ಲಿ ಜರ್ಮನಿ 2-1ರಲ್ಲಿ ಜಯ ಗಳಿಸಿತು. ನಿಗದಿತ ಅವಧಿಯಲ್ಲಿ ಎರಡೂ ತಂಡಗಳು ತಲಾ ಒಂದೊಂದು ಗೋಲು ಗಳಿಸಿ ಸಮಬಲ ಸಾಧಿಸಿದ್ದವು. ಹೀಗಾಗಿ ಶೂಟೌಟ್‌ಗೆ ಮೊರೆಹೋಗಬೇಕಾಯಿತು.

ಪಂದ್ಯದ ನಾಲ್ಕನೇ ನಿಮಿಷದಲ್ಲಿ ನವನೀತ್ ಕೌರ್ ಅವರು ಮೋಹಕ ಫೀಲ್ಡ್ ಗೋಲು ಗಳಿಸಿ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಮರುನಿಮಿಷದಲ್ಲೇ ಜರ್ಮನಿ ತಿರುಗೇಟು ನೀಡಿತು. ಪೆನಾಲ್ಟಿ ಅವಕಾಶವನ್ನು ಗೋಲಾಗಿ ಪರಿವರ್ತಿಸಿದ ಕಾರ್ಲೋಟಾ ಸಿಪೆಲ್ ಸಮಬಲ ತಂದುಕೊಟ್ಟರು.

ಶೂಟೌಟ್‌ನಲ್ಲಿ ಭಾರತದ ಪರ ನವನೀತ್ ಕೌರ್ ಮಾತ್ರ ಯಶಸ್ಸು ಕಂಡರು. ಶರ್ಮಿಳಾ ದೇವಿ, ಮೋನಿಕಾ, ಲಾಲ್‌ರೆನ್ಸಿಯಾಮಿ ಮತ್ತು ನೇಹಾ ಅವರ ಪ್ರಯತ್ನವನ್ನು ಜರ್ಮನಿ ಗೋಲ್‌ಕೀಪರ್ ಮಾಲಿ ವಿಚ್‌ಮನ್ ತಡೆದರು. ಪೌಲಿನ್ ಹೇನ್ಸ್ ಮತ್ತು ಸಾರಾ ಸ್ಟ್ರಾಸ್ ಅವರು ಜರ್ಮನಿಗಾಗಿ ಚೆಂಡನ್ನು ಗುರಿ ಮುಟ್ಟಿಸಿದರು.

ಪ್ರೊ ಲೀಗ್‌ನಲ್ಲಿ ಇದೇ ಮೊದಲ ಬಾರಿ ಆಡುತ್ತಿರುವ ಭಾರತ ಮಹಿಳಾ ತಂಡ ಮಸ್ಕತ್‌ನಲ್ಲಿ ನಡೆದ ಮೊದಲ ಹಣಾಹಣಿಯಲ್ಲಿ ಚೀನಾವನ್ನು 7–1ರಲ್ಲಿ ಮತ್ತು 2–1ರಲ್ಲಿ ಮಣಿಸಿತ್ತು. ಸ್ಪೇನ್ ವಿರುದ್ಧದ ಮೊದಲ ಪಂದ್ಯದಲ್ಲಿ 2–1ರ ಜಯ ಗಳಿಸಿತ್ತು. ಆದರೆ ಎರಡನೇ ಪಂದ್ಯದಲ್ಲಿ 3–4ರಲ್ಲಿ ಸೋತಿತ್ತು.

ಜರ್ಮನಿ ಇಲ್ಲಿಗೆ ಬರುವ ಮುನ್ನ ಲೀಗ್‌ನಲ್ಲಿ ಎರಡು ಪಂದ್ಯಗಳನ್ನಷ್ಟೇ ಆಡಿತ್ತು. ಎರಡರಲ್ಲೂ ಸೋತಿತ್ತು. ಆದರೆ ಶನಿವಾರ ಅಮೋಘ ಆಟ ಪ್ರದರ್ಶಿಸಿ ಆತಿಥೇಯರ ವಿರುದ್ಧ ಒತ್ತಡ ಹೇರಿತು.

ಇಂದಿನ ಪಂದ್ಯ: ಭಾರತ–ಜರ್ಮನಿ
ಆರಂಭ: ಸಂಜೆ 5.00. ಸ್ಥಳ: ಕಳಿಂಗ ಕ್ರೀಡಾಂಗಣ, ಭುವನೇಶ್ವರ

ಮುಂಬೈ ರೇಸ್

ಪಾರಿಸಿಯನ್ ಗೆಲ್ಲುವ ನಿರೀಕ್ಷೆ


ಸಿ.ಎನ್.ವಾಡಿಯಾ ಗೋಲ್ಡ್ ಕಪ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪಾರಿಸಿಯನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.45ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಪ್ಯೂರ್ 3, ಮೆಜಾರಿಟಿ ಬ್ಲೂ 4, ಸಿನ್ನರ್ 5
2ನೇ ರೇಸ್: ಗ್ರ್ಯಾಂಡ್ ಅಕಾರ್ಡ್ 4, ಫ್ಲೈಯಿಂಗ್ ವಿಸಿಟ್ 5, ನಾರ್ಥ್ ಸ್ಟಾರ್ 2
3ನೇ ರೇಸ್: ಎಂಪವರ್ 2, ಚಾನ್ಸೆಲರ್ 1, ಜುಬಿಲೆಂಟ್ ಜರ್ನಿ 5
4ನೇ ರೇಸ್: ಪಾರಿಸಿಯನ್ 1, ಟ್ರೂಲಿ ಎಪಿಕ್ 3
5ನೇ ರೇಸ್: ಸ್ನೋಫಾಲ್ 5, ಜೆರುಸಲೆಮ್ 2, ಕಿಮಿಕೊ 3
6ನೇ ರೇಸ್: ಬೇಬಿ ಬಝೂಕ 5, ನಥಿಂಗ್ ಟು ವರಿ 6, ಸ್ಪೈಫಾಲ್ 4
7ನೇ ರೇಸ್: ಫ್ಲೂಯರ್ ಡೆ ಲೈಸ್ 2, ಎಕ್ಸ್‌ಪ್ಲೋರರ್ 1, ಅನೌಶ್ಕ 8

ಉತ್ತಮ ಬೆಟ್: ಗ್ರ್ಯಾಂಡ್ ಅಕಾರ್ಡ್

ಜಾಕ್‌ಪಾಟ್	ಟ್ರಿಬಲ್
3,4,5,6,7	5,6,7

ಪರಸ್ಪರ ಅಂತರ ಕಾಯ್ದುಕೊಳ್ಳಿ



ಉಸ್ಮಾನ್ ಖ್ವಾಜಾ– ಎಎಫ್‌ಪಿ ಚಿತ್ರ

ಉಸ್ಮಾನ್ ಮಿಂಚು; ಉತ್ತಮ ಮೊತ್ತದತ್ತ ಆಸ್ಟ್ರೇಲಿಯಾ

ಕರಾಚಿ (ಎಎಫ್‌ಪಿ): ಉಸ್ಮಾನ್ ಖ್ವಾಜಾ ತಾವು ಜನಿಸಿದ ದೇಶದಲ್ಲಿ ಮೊದಲ ಟೆಸ್ಟ್ ಶತಕ ಗಳಿಸಿದ ಸಂಭ್ರಮ ಆಚರಿಸಿದರು. ಅವರ ಸೊಗಸಾದ ಬ್ಯಾಟಿಂಗ್ ನೆರವಿನಿಂದ ಆಸ್ಟ್ರೇಲಿಯಾ ತಂಡವು ಪಾಕಿಸ್ತಾನ ಎದುರಿನ ಎರಡನೇ ಟೆಸ್ಟ್‌ನಲ್ಲಿ ಉತ್ತಮ ಮೊತ್ತ ಪೇರಿಸುವತ್ತ ದಾಪುಗಾಲಿಟ್ಟಿತು.

ಟಾಸ್ ಗೆದ್ದ ಆಸ್ಟ್ರೇಲಿಯಾ ನಾಯಕ ಪ್ಯಾಟ್ ಕಮಿನ್ಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಖ್ವಾಜಾ (ಬ್ಯಾಟಿಂಗ್ 127, 266ಎ, 4X13, 6X1) ಹಾಗೂ ಸ್ಟೀವನ್ ಸ್ಮಿತ್ (72, 214ಎ, 4X7) ಅವರ ಉತ್ತಮ ಆಟದ ಬಲದಿಂದ ಮೊದಲ ಶನಿವಾರ ಮೊದಲ ದಿನದಾಟದ ಅಂತ್ಯಕ್ಕೆ ಮೊದಲ ಇನಿಂಗ್ಸ್‌ನಲ್ಲಿ 3 ವಿಕೆಟ್ ಕಳೆದುಕೊಂಡು 251 ರನ್ ಗಳಿಸಿತು.

ಖ್ವಾಜಾ ಮತ್ತು ಸ್ಮಿತ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 169 ರನ್ ಸೇರಿಸಿದರು. ರಾವಲ್ಪಿಂಡಿಯಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಉಸ್ಮಾನ್ ಮೂರು ರನ್‌ಗಳಿಂದ ಶತಕ ತಪ್ಪಿಸಿಕೊಂಡಿದ್ದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: ಮೊದಲ ಇನಿಂಗ್ಸ್: 90 ಓವರ್‌ಗಳಲ್ಲಿ 3 ವಿಕೆಟ್‌ಗೆ 251 (ಡೇವಿಡ್ ವಾರ್ನರ್ 36, ಉಸ್ಮಾನ್ ಖ್ವಾಜಾ ಬ್ಯಾಟಿಂಗ್ 127, ಸ್ಟೀವನ್ ಸ್ಮಿತ್ 72; ಹಸನ್ ಅಲಿ 31ಕ್ಕೆ 1, ಫಹೀಮ್ ಅಶ್ರಫ್ 32ಕ್ಕೆ 1).

ಆರ್‌ಸಿಬಿಗೆ ಫಫ್ ಸಾರಥ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟಿ20 ಕ್ರಿಕೆಟ್ ಫ್ರಾಂಚೈಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಐಪಿಎಲ್) ತಂಡಕ್ಕೆ ಫಫ್ ಡು ಪ್ಲೆಸಿ ನೂತನ ನಾಯಕನಾಗಿ ನೇಮಕಗೊಂಡಿದ್ದಾರೆ.

ನಗರದ ಚರ್ಚ್‌ಸ್ಟ್ರೀಟ್‌ನಲ್ಲಿ ಫ್ರಾಂಚೈಸ್ ಶನಿವಾರ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಹೊಸ ನಾಯಕನ ಹೆಸರು ಪ್ರಕಟಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ದಕ್ಷಿಣ ಆಫ್ರಿಕಾದ ಮಾಜಿ ನಾಯಕ ಡುಪ್ಲೆಸಿ 'ತಂಡವೆಂದರೆ ಒಂದು ಕುಟುಂಬವಿದ್ದಂತೆ. ವಿದೇಶಿಗನಾದರೂ ಆರ್‌ಸಿಬಿ ನನ್ನ ಮೇಲೆ ವಿಶ್ವಾಸವಿಟ್ಟು ನಾಯಕನ್ನಾಗಿ ಆಯ್ಕೆ ಮಾಡಿದೆ. ಈ ಅವಕಾಶಕ್ಕಾಗಿ ಕೃತಜ್ಞತೆಗಳು. ತಂಡದ ಯಶಸ್ಸಿಗೆ ಶಕ್ತಿ ಮೀರಿ ಶ್ರಮಿಸುವೆ' ಎಂದರು.

'ಹಿಂದಿನ ಆವೃತ್ತಿಗಳಲ್ಲಿ ಆರ್‌ಸಿಬಿ ತೋರಿದ ಉತ್ತಮ ಸಾಧನೆಯ ಪರಂಪರೆ ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ನನ್ನ ಮೇಲಿದೆ' ಎಂದು ಫಫ್ ನುಡಿದರು. ಈ ಹಿಂದೆ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿದ್ದ ಅವರನ್ನು ಆರ್‌ಸಿಬಿ ಈ ವರ್ಷದ ಹರಾಜು ಪ್ರಕ್ರಿಯೆಯಲ್ಲಿ ₹ 7 ಕೋಟಿಗೆ ತನ್ನದಾಗಿಸಿಕೊಂಡಿತ್ತು. 2013ರಿಂದ ತಂಡದ ನಾಯಕರಾಗಿದ್ದ ವಿರಾಟ್, ಈ ವರ್ಷ ರಾಜೀನಾಮೆ ನೀಡಿದ್ದರು. ಅವರ ಸ್ಥಾನಕ್ಕೆ ಫಫ್ ಅವರ ನೇಮಕವಾಗಿದೆ.ಈ ವರ್ಷದ ಟೂರ್ನಿಯು ಇದೇ 26ರಿಂದ ಮೇ 29ರವರೆಗೆ ಮುಂಬೈ ಮತ್ತು ಪುಣೆಯಲ್ಲಿ ನಡೆಯಲಿದೆ.



ಫಫ್ ಡು ಪ್ಲೆಸಿ

ಆರ್‌ಸಿಬಿಯ ಕ್ರಿಕೆಟ್ ಕಾರ್ಯಚಟುವಟಿಕೆಗಳ ನಿರ್ದೇಶಕ ಮೈಕ್ ಹೆಸನ್, ಉಪಾಧ್ಯಕ್ಷ ರಾಜೇಶ್ ಮೆನನ್, ಆಟಗಾರರಾದ ದಿನೇಶ್ ಕಾರ್ತಿಕ್ ಮತ್ತಿತರರು ಈ ಸಂದರ್ಭದಲ್ಲಿ ಇದ್ದರು.

ಭಾರಿ ಜನಸ್ತೋಮ: ಆರ್‌ಸಿಬಿಯ ಹೊಸ ನಾಯಕನ ಘೋಷಣೆಯ ಸಂದರ್ಭದಲ್ಲಿ ಭಾರಿ ಸಂಖ್ಯೆಯಲ್ಲಿ ತಂಡದ ಅಭಿಮಾನಿಗಳು ಸೇರಿದ್ದರು. ಫಫ್ ಡು ಪ್ಲೆಸಿ, ವಿರಾಟ್ ಕೊಹ್ಲಿ, ಆರ್‌ಸಿಬಿ ಪರ ಘೋಷಣೆಗಳು ಮುಗಿಲು ಮುಟ್ಟಿದ್ದವು.